ಜನಶಕ್ತಿ



ಕನ್ನಡ ವಾರಪತ್ರಿಕೆ


blog : janashakthi.wordpress.com e-mail : js_weekly@yahoo.com

ಸಂಪುಟ 7 ಸಂಚಿಕೆ 32
ಆಗಸ್ಟ್ 11, 2013

ಪುಟ 16


10/-

ಪ್ರತ್ಯೇಕ ತೆಲಂಗಾಣ ರಾಜ್ಯ!




ಹೈ-ಕ 371 ಜೆ ಜಾರಿಗೆ ಅಸ್ತು:





ಅಮೆರಿಕಾದ ಬಂಡವಾಳಶಾಹಿಯ ಕ್ಷೀಣಿಸುವ ಪ್ರಕ್ರಿಯೆ





'ಎನ್ ಕೌಂಟರ್' ಎಂಬ ಹೆಸರಿನ ನರಬೇಟೆ

ಯುಪಿಎ ದರ್ಬಾರಿನಲ್ಲಿ ಈಗ 'ಊಟ'ದ ಹರಾಜು!

ಮಹಾರಾಣಿ ಎನ್‌ಟಿಎಂ ಶಾಲೆ ಉಳಿಸಲು ಎಸ್‌ಎಫ್‌ಐನಿಂದ 48 ಗಂಟೆ ಧರಣಿ



ವರದಿ : ಜಗದೀಶ್‌ಸೂರ್ಯ

132 ವರ್ಷಗಳ ಸುದೀರ್ಘ ಇತಿಹಾಸವಿರುವ ಮೈಸೂರು ಒಡೆಯರ ಕಾಲದಲ್ಲಿ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಮಹತ್ವ ನೀಡಿ ಸ್ಥಾಪಿಸಲ್ಪಟ್ಟ ಹಾಗೂ ಭಾರತದಲ್ಲಿ ಹೆಣ್ಣು ಮಕ್ಕಳಿಗಾಗಿ ಆರಂಭಗೊಂಡ ಮೊಟ್ಟ ಮೊದಲ ಶಾಲೆ ಎಂಬ ಹೆಗ್ಗಳಿಕೆಯ ಮಹಾರಾಣಿ ನೂತನ ಮಾದರಿ ಶಾಲೆ (ಎನ್.ಟಿ.ಎಂ.ಶಾಲೆ) ಯನ್ನು ಮುಚ್ಚಿ ಆ ಶಾಲೆಯ ಜಾಗವನ್ನು ವಿವೇಕಾನಂದ ಸ್ಪೂರ್ತಿ ಕೇಂದ್ರ ತೆರೆಯುವ ಸಲುವಾಗಿ ರಾಮಕೃಷ್ಣ ಮಠಕ್ಕೆ ವಹಿಕೊಡಲು ಹಿಂದಿನ ಬಿಜೆಪಿ ಸರ್ಕಾರ ತೀರ್ಮಾನಿಸಿತ್ತು. ನಂತರ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ ಈ ತೀರ್ಮಾನ ಬದಲಿಸುತ್ತಿಲ್ಲ. ಸರ್ಕಾರದ ಈ ಧೋರಣೆ ವಿರೋಧಿಸಿ ಆ ಶಾಲೆ ಬಾಲಕಿಯರ ವಸತಿ ಶಾಲೆ ಆಗಬೇಕೆಂದು ಆಗ್ರಹಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಮೈಸೂರು ಜಿಲ್ಲಾ ಸಮಿತಿಯ ವತಿಯಿಂದ 48 ಗಂಟೆಗಳ ಹಗಲು ರಾತ್ರಿ ಧರಣಿ ಸತ್ಯಾಗ್ರಹ ನಡೆಸಲಾಯಿತು.

ಜುಲೈ 29,2013 ರಂದು 11–00 ಘಂಟೆಯಿಂದ ಜುಲೈ31,2013ರ 11–00 ಘಂಟೆಯ ವರೆಗೆ ಈ ಹೋರಾಟ ನಡೆದು ವ್ಯಾಪಕವಾಗಿ ಸಾರ್ವಜನಿಕರ ಗಮನ ಸೆಳೆಯಿತು.

ಧರಣಿಯನ್ನು ಮಾಜಿ ಶಾಸಕರಾದ ಜಿ.ವಿ.ಶ್ರೀರಾಮರೆಡ್ಡಿ ಉದ್ಘಾಟಿಸಿ ಮಾತನಾಡಿ ದುಡಿಯುವ ವರ್ಗಕ್ಕೆ ಸೇರಿದ ಕುಟುಂಬದ ಮಕ್ಕಳು ಓದುತ್ತಿರುವ ಎನ್‌ಟಿಎಂ ಶಾಲೆಯನ್ನು ಮುಚ್ಚಿ ಅಲ್ಲಿ ಸ್ವಾಮಿ ವಿವೇಕಾನಂದರ ಸ್ಪೂರ್ತಿ ಕೇಂದ್ರ ನಿರ್ಮಿಸುವ ನಿರ್ಧಾರವನ್ನು ಕೈಗೊಳ್ಳುವ ಮೂಲಕ ರಾಜ್ಯ ಸರ್ಕಾರ ಬಡ ಮಕ್ಕಳಿಗೆ ಅನ್ಯಾಯ ಮಾಡುತ್ತಿದೆ. ಅಲ್ಲದೆ ವಿವೇಕಾನಂದರ ಹೆಸರಿಗೂ ಕಳಂಕ ತರುತ್ತಿದೆ. ಈ ಹಿಂದೆ ರಾಜ್ಯದಲ್ಲಿ ಅಧಿಕಾರದಲ್ಲಿದ್ದ ಬಿಜೆಪಿ ಸರ್ಕಾರ ಗೋಹತ್ಯೆ ನಿಷೇಧ ಕಾಯಿದೆಗೆ ತಂದಿದ್ದ ತಿದ್ದುಪಡಿಯನ್ನು ತಮ್ಮ ಸರ್ಕಾರ ಅಧಿಕಾರಕ್ಕೆ ಬಂದರೇ ರದ್ದುಗೊಳಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದರು. ಅದರಂತೆ ತಿದ್ದುಪಡಿಯನ್ನು ಮಾಡಲು ಮುಂದಾಗಿದ್ದಾರೆ. ಆದರೆ ಎನ್‌ಟಿಎಂ ಶಾಲೆಯನ್ನು ಮುಚ್ಚಿ ಅದರ ಜಾಗವನ್ನು ರಾಮಕೃಷ್ಣ ಆಶ್ರಮಕ್ಕೆವಹಿಸುವ ನಿರ್ಧಾರವನ್ನು ರದ್ದುಗೊಳಿಸಿ ಆ ಕನ್ನಡ ಶಾಲೆಯನ್ನು ಉಳಿಸುವಂತೆ ವ್ಯಾಪಕ ಹೋರಾಟಗಳು ನಡೆಯುತ್ತಿದ್ದರೂ ಅದ–ಕ್ಕೆ ಸರ್ಕಾರ ಸ್ಪಂದಿಸುತ್ತಿಲ್ಲ. ಇದು ಕಾಂಗ್ರೆಸ್ ಪಕ್ಷ ಪರೋಕ್ಷವಾಗಿ ಕೋಮುವಾದಿಗಳಿಗೆ ಬ ೦ ಬ ಲ ಸೂಚಿಸುತ್ತಿರುವುದನ್ನು ತೋರ್ಪಡಿಸುತ್ತದೆ ಎಂದರು. ಪಾರಂಪರಿಕ ನಗರ ಎಂದು ಹೆಸರಾದ ಮೈಸೂರಿನ ಹೃದಯ ಭಾಗದಲ್ಲಿರುವ ಶಾಲೆಯನ್ನು ಮಠ ಒಂದ–ಕ್ಕೆ ಹಸ್ತಾಂತರಿಸುವ ಪ್ರಕ್ರಿಯೆ ಹಿಂದೆ ಸಂಘ ಪರಿವಾರದವರು ಮಾತ್ರವಲ್ಲದೆ ಭೂಗಳ್ಳರ ಪರವಾದ ಹಿತಾಸಕ್ತಿಗಳು ಕೆಲಸ ಮಾಡುತ್ತಿವೆ. ಇದನೆಲ್ಲ ತಡೆಯಲು ಮುಂದಾಗಬೇಕಿದ್ದ ಕಾಂಗ್ರೆಸ್ ಸರ್ಕಾರ ರಾಜಕೀಯ ಇಚ್ಛಾಶಕ್ತಿಯ ಕೊರತೆಯಿಂದ ಬಳಲುತ್ತಿದೆ ಎಂದು ಖಂಡಿಸಿದರು. ನಂತರ ಆಂದೋಲನ ದಿನಪತ್ರಿಕೆಯ ಸಂಪಾದಕರಾದ ರಾಜಶೇಖರಕೋಟಿ ಸಾವಿರಾರು ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡಿರುವ ಎನ್‌ಟಿಎಂ ಶಾಲೆಯನ್ನು ಮುಚ್ಚುವ ನಿರ್ಧಾರ ಕನ್ನಡ ಶಾಲೆಗಳ ಹಿತಕ್ಕೆ ಮಾರಕವಾಗಿದೆ. ಆದುದ–ರಿಂದ ಹಿಂದಿನ ಸರ್ಕಾರ ಕೈಗೊಂಡಿದ್ದ ನಿರ್ಣಯವನ್ನು ಈಗಿನ ಸರ್ಕಾರ ರದ್ದುಗೊಳಿಸಿ ಶಾಲೆಯನ್ನು ಉಳಿಸಬೇಕೆಂದು ಹೋರಾಟಗಳು ನಡೆಯುತ್ತಿವೆ. ಈ ಹೋರಾಟಕ್ಕೆ ಸರ್ಕಾರ ಸೂಕ್ತ ನಿರ್ಧಾರ ಕೈಗೊಳ್ಳುವ ಭರವಸೆ ನೀಡಿದೆ. ಆದರೆ ಕಟ್ಟುನಿಟ್ಟಾದ ಆದೇಶ ಹೊರಬಿದ್ದಿಲ್ಲ. ಇದರಿಂದಾಗಿ ಈ ಶಾಲೆಯಲ್ಲಿ ಓದುತ್ತಿರುವ ಮಕ್ಕಳಿಗೆ, ಈ ಶಾಲೆ ಸೇರಲು ಬಯಸುವವರಿಗೆ ಗೊಂದಲ ಉಂಟಾಗುತ್ತಿದೆ ಎಂದರು. ಈ ಧರಣಿ ಸತ್ಯಾಗ್ರಹ ಹೋರಾಟಕ್ಕೆ ಹೊಸ ತಿರುವು ನೀಡಿದೆ. ಈಗಲಾದರೂ ಆದೇಶವನ್ನು ಹಿಂಪಡೆದು ಶಾಲೆ ಉಳಿಸಬೇಕೆಂದು ಆಗ್ರಹಿಸಿದರು. ಈ ಕಾರ್ಯಕ್ರಮಕ್ಕೆ ಕನ್ನಡ ಕ್ರಿಯಾ ಸಮಿತಿ ಕಾರ್ಯದರ್ಶಿ ಸ.ರ. ಸುದರ್ಶನ್ ಎಸ್‌ಎಫ್‌ಐ ಜಿಲ್ಲಾ ಅಧ್ಯಕ್ಷ ಜಗದೀಶ್‌ಸೂರ್ಯ, ಕಾರ್ಯದರ್ಶಿ ಮಹೇಶ್‌ಕುಮಾರ್, ಸಿಪಿಐ(ಎಂ) ಜಿಲ್ಲಾಕಾರ್ಯದರ್ಶಿ ಕೆ.ಬಸವರಾಜು, ಇತಿಹಾಸಕಾರರಾದ ನಂಜರಾಜೇ ಅರಸ್, ಪ್ರಗತಿಪರ ಚಿಂತಕರಾದ ಪಂಡಿತ್ ಆರಾಧ್ಯ, ವಿಮಾ ನೌಕರರ ಸಂಘದ ವಿಭಾಗೀಯ ಅಧ್ಯಕ್ಷರಾದ ಎನ್.ವಿಜಯ್‌ಕುಮಾರ್. ಎಸ್.ಎಸ್.ನಾಗೇಶ್, ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಜಿ.ಜಯರಾಂ, ಎಲ್. ಜಗನ್ನಾಥ್ ಮತ್ತಿತರರು ಭಾಗವಹಿಸಿದ್ದರು.

ನಂತರ ಶಾಲೆಯಿಂದ ಜಿಲ್ಲಾಧಿಕಾರಿ ಕಛೇರಿವರೆವಿಗೆ ಮೆರವಣಿಗೆಯಲ್ಲಿ ತೆರಳಿ ಧರಣಿ ಕೂರಲಾಯಿತು. ನಂತರ ಧರಣಿಯನ್ನು ಉದ್ದೇಶಿಸಿ ಮಾತನಾಡಿದ ಎಸ್‌ಎಫ್‌ಐ ರಾಜ್ಯ ಕಾರ್ಯದರ್ಶಿ ಹುಳ್ಳಿ ಉಮೇಶ್ ಆಳುವ ಸರ್ಕಾರಗಳು ಶಿಕ್ಷಣ ನೀಡುವ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಾ ಶಿಕ್ಷಣವನ್ನು ಖಾಸಗೀಕರಿಸಲು ಪರೋಕ್ಷವಾಗಿ ಕುಮ್ಮಕ್ಕು ನೀಡುತ್ತಿವೆ. ಅದರ ಭಾಗವಾಗಿ ಐತಿಹಾಸಿಕ ಹಿನ್ನಲೆ ಇರುವ ಎನ್‌ಟಿಎಂ ಶಾಲೆಯನ್ನು ಮುಚ್ಚುವ ಮೂಲಕ ಬಡ ವಿದ್ಯಾರ್ಥಿಗಳನ್ನು ಅದರಲ್ಲೂ ಹೆಣ್ಣು ಮಕ್ಕಳನ್ನು ಶಿಕ್ಷಣದಿಂದ ವಂಚಿಸಲು ಹೊರಟಿದೆ ಎಂದರು.

ಎರಡನೇ ದಿನ ಧರಣಿ ಸತ್ಯಾಗ್ರಹವನ್ನು ಬೆಂಬಲಿಸಿ ಪ್ರಗತಿಪರ ಚಿಂತಕರಾದ ಕೆ.ಎಸ್.ಭಗವಾನ್ ಮಾತನಾಡಿ ರಾಜ್ಯ ಸರ್ಕಾರಗಳು ಮುರುಕು ದೇವಸ್ಥಾನಗಳನ್ನು ಕೋಟ್ಯಾಂತರ ರೂ.ಗಳ ವೆಚ್ಚಮಾಡಿ ಜೀರ್ಣೋದ್ಧಾರ ಮಾಡುತ್ತಿವೆ. ಆದರೆ ಜ್ಞಾನ ಕೊಡುವ ಶಾಲೆಯ ಉಳಿವಿಗೆ ಮತ್ತು ಅವುಗಳ ಅಭಿವೃದ್ಧಿಗೆ ಮುಂದಾಗದಿರುವುದು ದುರಂತ. ಸ್ವಾಮಿ ವಿವೇಕಾನಂದರು ಜನ ಸಾಮಾನ್ಯರಿಗೆ ಅದರಲ್ಲೂ ಹೆಣ್ಣು ಮಕ್ಕಳಿಗೆ ವಿದ್ಯೆ ಸಿಗಬೇಕು ಎಂದು ಬಲವಾಗಿ ಪ್ರತಿಪಾದನೆ ಮಾಡಿದರು. ಆದರೆ ಎನ್‌ಟಿಎಂ ಶಾಲೆಯ ಜಾಗದಲ್ಲಿ ವಿವೇಕಾನಂದ ಸ್ಪೂರ್ತಿ ಕೇಂದ್ರ ಸ್ಥಾಪಿಸಲು ಹೊರಟಿರುವ ರಾಮಕೃಷ್ಣ ಆಶ್ರಮದವರಿಗೆ ನಿಜವಾಗಿಯು ಸ್ವಾಮಿ ವಿವೇಕಾನಂದರ ಮೇಲೆ ಗೌರವವಿದ್ದರೆ ಅವರ ತತ್ವ ಹಾಗೂ ಚಿಂತನೆ ಹರಡಲು ಟೊಂಕ ಕಟ್ಟಿ ನಿಲ್ಲಬೇಕು. ಶಾಲೆಯನ್ನು ಮುಚ್ಚಲು ನಾವು ಅವಕಾಶ ನೀಡುವುದಿಲ್ಲ ಎಂದರು. ನಂತರ ಕರ್ನಾಟಕ ಜನಪರ ಆಂದೋಲನದ ಪ್ರಧಾನ ಕಾರ್ಯದರ್ಶಿ ಜೋಗನಹಳ್ಳಿ ಗುರುಮೂರ್ತಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಸದಸ್ಯ ವಿಶ್ವನಾಥ್ ಯುವ ಕಲಾವಿದ ಬಾದಲ್ ನಂಜುಂಡಸ್ವಾಮಿ, ಪತ್ರಕರ್ತ ಸೋಮಯ್ಯ ಮಲೆಯೂರು ಹೋರಾಟ ಬೆಂಬಲಿಸಿ ಮಾತನಾಡಿದರು.

ಮೂರನೇಯ ದಿನ 48 ಗಂಟೆಗಳ ಧರಣಿ ಸತ್ಯಾಗ್ರಹವನ್ನು ಸಮಾರೋಪಗೊಳಿಸಿ ಹಂಪಿ ವಿದ್ಯಾಲಯದ ನಿವೃತ್ತ ಕುಲಪತಿಗಳಾದ ಡಾ॥ ಹೆಚ್.ಲಕ್ಕಪ್ಪಗೌಡ ಮತನಾಡಿ ಮೈಸೂರು ನಗರದಲ್ಲಿ ಪಾಳು ಬಿದ್ದಿರ ಹಾಗೂ ಅತಿಕ್ರಮಣಕ್ಕೆ ಜಾಗ ಬೇಕಾದಷ್ಟಿ ಅಲ್ಲೆ ಸ್ಪೂರ್ತಿ ಕೇಂದ್ರ ತೆರೆಯಲಿ ಎಂ ಹೇಳಿದರು. ರಂಗಕರ್ಮಿ ಜನಾರ್ಧನ (ಜ ಹಾಡು ಹೇಳುವ ಮೂಲಕ ಧರಣಿಗೆ ಬೆಂ ಸೂಚಿಸಿದರು.

ಈ ಕಾರ್ಯಕ್ರಮದಲ್ಲಿ ಖ ವಿಮರ್ಶಕರಾದ ಜೆ.ಹೆಚ್.ನಾಯಕ್, ಸಾ ಹೊರೆಯಾಲ ದೊರೆಸ್ವಾಮಿ, ರಂಗಕ ಜನಾರ್ಧನ (ಜನ್ನಿ) ಪ್ರೈ ಶಬ್ಬೀರ್ ಮುಸ್ತಾ ಮ.ನ.ಜವರಯ್ಯ, ಡಾ.ವಿ.ಲಕ್ಷ್ಮಿನಾರಾಯ ರಾಜಶೇಖರಕೋಟಿ, ಮುಂತಾದವ ಭಾಗವಹಿಸಿದ್ದರು. ನಂತರ ಜಿಲ್ಲಾಧಿಕಾರಿ ಮುಖಾಂತರ ಮುಖ್ಯಮಂತ್ರಿಗಳಿಗೆ ಮ ಸಲ್ಲಿಸಲಾಯಿತು.

ಧರಣಿ ಹಾಳು ಮಾಡಲು ಯ ಜುಲೈ –29 ರ ಸೋಮವಾರ ಬೆ ಧರಣಿ ಸತ್ಯಾಗ್ರಹವನ್ನು ಆರಂಭಿ ಎಸ್‌ಎಫ್‌ಐ ಕಾರ್ಯಕರ್ತರು ರ ಶಾಮಿಯಾನದ ಆಶ್ರಯದಲ್ಲಿ ತಂಗಿ ಧ ಮುಂದುವರಿಸಿದ್ದರು. ಮಧ್ಯ ರಾತ್ರಿ ಮೀ ನಂತರ 3–4 ವ್ಯಕ್ತಿಗಳು ಅಲ್ಲಿಗೆ ಆಗ ಶಾಮಿಯಾನಕ್ಕೆ ಹೊಂದಿಕೊಂಡಂತೆ ಬ್ಯಾನರ್ ಹಾಗೂ ಪ್ಲೇಕಾಡ್ಸ್‌ಗಳನ್ನು ಹ ಶಾಮಿಯಾನದ ಹಗ್ಗಗಳನ್ನು ಸಡಿಲಗೊಳಿಸ ಪ್ರಯತ್ನಿಸಿದರು. ಇದನ್ನು ಅರಿತು ಧ ನಿರತರು ಕೂಗಿಕೊಂಡಾಗ ಅವರು ದ್ವಿ ವಾಹನದಲ್ಲಿ ಪರಾರಿಯಾದರು.

ಸ್ಥಳದಲ್ಲೇ ಅಡುಗೆ ಧರಣಿ ನಿರತ ಶಾಮಿಯಾನದ ಬಳಿಯೇ ತರಕಾರಿ ಒಲೆ ಹಚ್ಚಿ ತಿಂಡಿ ಸಿದ್ದಪಡಿಸಿ ತಿಂದ ಮಧ್ಯಾಹ್ನ ಮತ್ತು ರಾತ್ರಿಯ ಅಡುಗೆಯ ತಾವೇ ತಯಾರಿಸಿಕೊಂಡು ಸೇವಿಸಿದ ನಡು–ನಡುವೆ ಘೋಷಣೆ ಕೂಗುತ್ತಾ ಕ್ರಾ ಗೀತೆಗಳನ್ನು ಹಾಡಿ ಸಾರ್ವಜನಿಕರ ಗಮ ಸೆಳೆದರು.

ಸತ್ಯಾಗ್ರಹದ ನೇತೃತ್ವವನ್ನು ಎಸ್‌ಎಫ ಜಿಲ್ಲಾಧ್ಯಕ್ಷ ಜಗದೀಶ್ ಸೂರ್ಯ, ಕಾರ್ಯದ ಮಹೇಶ್‌ಕುಮಾರ್, ಜಿಲ್ಲಾ ಸಮಿತಿ ಸದಸ್ಯರಾ ರಂಜಿತ, ಶ್ರೀನಿವಾಸ್, ರವಿಕುಮಾರ್, ಚೇತ ಬೀರೇಶ್, ವಿನೋದ್ ಪಟೇಲ್, ಅಂಜ ಶಶಿಕಲಾ, ಯತೀಶ್ ಮುಂತಾದವರು ವಹಿಸಿದ್ದರು.

ಜನಶಕ್ತಿ
ಕನ್ನಡ ವಾರಪತ್ರಿಕೆ

ರಸ್ವಾದಕ್ಕೆರ್ವು

ಕೂಲಿಕಾರರು ವಿಶ್ವಾಸ ಕಳೆದುಕೊಳ್ಳುವ ಮುನ್ನ ಖಾತ್ರಿಯಾಗಲಿ ಉದ್ಯೋಗ ಖಾತ್ರಿ ಯೋಜನೆ.

ಂದೆಡೆ ಕೇಂದ್ರ ಕಾಂಗ್ರೆಸ್ ಸರ್ಕಾರ ಮನಸ್ಸಿಲ್ಲದ ನಸ್ಸಿನಿಂದ ಜಾರಿಗೆತಂದ ಮಹಾತ್ಮ ಗಾಂಧಿ ರಾಷ್ಟ್ರೀಯ ಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಷ್ತ್ರಯೋಜಕಗೊಳಿಸಲು ಪ್ರಯತ್ನ ಪಡುತ್ತಿರುವಾಗಲೇ ಯಂ ಕೆಲಸ, ನಿಶ್ಚಿತ ಆದಾಯವಿಲ್ಲದ ತಮ್ಮ ಬದು-ಗೆ ಆಸರೆ ಆಗಬಹುದಾಗಿದ್ದ ಈ ಯೋಜನೆಯ ಗ್ಗೆ ಗ್ರಾಮೀಣ ಕೂಲಿಕಾರರು ವಿಶ್ವಾಸವನ್ನೇ ಕಳೆದು ಾಳ್ಳುತ್ತಿದ್ದಾರೆ. ಭಾರತದ ಲೆಕ್ಕ ನಿಯಂತ್ರಕರು ಮತ್ತು ಹಾಲೆಕ್ಕಪರಿಶೋಧಕರ ವರದಿಯ ಪ್ರಕಾರ 2009 10 ರಲ್ಲಿ 36.26 ಲಕ್ಷ ಕುಟುಂಬಗಳು ಯೋಜನೆ ಡಿಯಲ್ಲಿ ಉದ್ಯೋಗಕ್ಕೆ ಬೇಡಿಕೆ ಸಲ್ಲಿಸಿದ್ದರು. 2011 – 2 ರಲ್ಲಿ ಬೇಡಿಕೆ 16.64 ಲಕ್ಷಕ್ಕೆ ಇಳಿಮುಖಗೊಂಡಿತ್ತು. ದಕ್ಕೆ ಕಾರಣವನ್ನು ಹುಡುಕುವ ಅಗತ್ಯ ಇದೆ ಎಂದು ಾಜ್ಯ ಗ್ರಾಮೀಣಭಿವೃದ್ಧಿ ಮತ್ತು ಪಂಚಾಯತ್ ರಾಜ್ ಚಿವ ಎಚ್.ಕೆ. ಪಾಟೀಲ್ ಹೇಳಿದ್ದಾರೆ.

ಾಟೀಲರು ಇದನ್ನು ಅತ್ಯಂತ ಪ್ರಾಮಾಣಿಕವಾಗಿಯೇ ೇಳಿರಬಹುದು. ಆದರೆ, 'ಅಂಗೈ ಹುಣ್ಣಿಗೆ ಕನ್ನಡಿ ೇಕಿಲ್ಲ' ಅಲ್ಲವೆ? ಗ್ರಾಮೀಣ ಬಡವರು ಉದ್ಯೋಗ ಾತ್ರಿ ಯೋಜನೆಯ ಮೇಲಿನ ವಿಶ್ವಾಸವನ್ನು ಕಳೆದು ಾಳ್ಳುತ್ತಿದ್ದಾರೆ ಎಂಬುದನ್ನು ಅರ್ಥಮಾಡಿಕೊಳ್ಳಲು ೊಡ್ಡ ಸಂಶೋಧನೆಯ ಅಗತ್ಯವಿಲ್ಲ.

ಉದ್ಯೋಗ ಖಾತ್ರಿ ಯೋಜನೆಯಲ್ಲಿ ಯಾವುದೂ ಾತ್ರಿ ಇಲ್ಲ. ಕೆಲಸ ಬೇಕಾದಾಗ ಕೆಲಸ ಸಿಗುತ್ತದೆ ಂಬ ಖಾತ್ರಿ ಇಲ್ಲ. ಮಾಡಿದ ಕೆಲಸ ಸರಿಯಾಗಿ ಾಖಲಾಗುತ್ತದೆ ಎಂಬುದು ಖಾತ್ರಿ ಇಲ್ಲ. ಕೆಲಸ ಮಾಡಿದ ೇಲೆ ಸಕಾಲದಲ್ಲಿ ಸರಿಯಾಗಿ ಕೂಲಿ ಹಣ ಸಂದಾಯ ಗುತ್ತದೆ ಎಂಬುದು ಖಾತ್ರಿ ಇಲ್ಲ. ಕೆಲಸ ಕೊಡಲಾಗದ ನಕ್ಕೆ ನಿರುದ್ಯೋಗ ಭತ್ಯೆ ಸಿಗುತ್ತದೆ ಎಂಬುದು ಖಾತ್ರಿ ಲ್ಲ. ಬೆಲೆಗಳು ಏರುತ್ತಿದ್ದಂತೆ ಕೂಲಿ ದರಗಳ ಹೆಚ್ಚಳ ಗುತ್ತದೆ ಎಂಬುದು ಖಾತ್ರಿ ಇಲ್ಲ. ಒಟ್ಟಾರೆಯಾಗಿ ಇಲ್ಲಿ ಾವುದೂ ಖಾತ್ರಿ ಇಲ್ಲ!

ಉದ್ಯೋಗ ಖಾತ್ರಿ ಯೋಜನೆ ಎಂದರೆ ಕೂಲಿಕಾರರ ದುಕಿನೊಂದಿಗೆ ಚೆಲ್ಲಾಟ ಆಡುವ ಕಾರ್ಯಕ್ರಮ ಟ್ಟಿದೆ. ನಿತ್ಯದ ದುಡಿಮೆಯಿಂದ ಬದುಕುವ ಜನ ವರು. ದುಡಿಮೆ ಇಲ್ಲ ಎಂದರೆ ಅಂದು ಅವರು ಊಟ ಾಡುವ ಸ್ಥಿತಿಯಲ್ಲಿರುವುದಿಲ್ಲ. ಇಲ್ಲಿ ಕೆಲಸಕ್ಕಾಗಿ ಅರ್ಜಿ ಾಕಬೇಕು. ಅರ್ಜಿ ಹಾಕಿದರೂ ಕೆಲಸ ದೊರಕುವ ರವಸೆ ಇಲ್ಲ. ಕೆಲಸ ಮಾಡಿದ ನಂತರವೂ ಕೂಲಿ ಣ ಸರಿಯಾಗಿ ಪಾವತಿ ಆಗುವುದಿಲ್ಲ. ಇದೆಲ್ಲವನ್ನು ಶ್ನೆ ಮಾಡುವ ಕೂಲಿಕಾರರ ಗುಂಪಿಗೆ ಕೆಲಸ ನಿರಾಕರಿಸಿ ಾಯಿಸಲಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಬಡ ೂಲಿಕಾರರು ಯೋಜನೆ ಮೇಲೆ ವಿಶ್ವಾಸವಿಡಲು ಾಧ್ಯವೇ?


ಯೋಜನೆಯ ಅನುಷ್ಠಾನದ ಆರಂಭದಲ್ಲಿ ನೀಡಲಾದ ಾನೂನುಬದ್ಧ ಭರವಸೆಗಳು ಕಾಗದದಲ್ಲಿಯೇ ಳಿದುಕೊಂಡಿವೆ. ಕೆಲಸದ ಸ್ಥಳದಲ್ಲಿ ಕುಡಿಯುವ ೀರಿನ ವ್ಯವಸ್ಥೆ, ವಿಶ್ರಾಂತಿಗಾಗಿ ನೆರಳಿನ ವ್ಯವಸ್ಥೆ, ಚಿಕ್ಕ ಕ್ಕಳನ್ನು ನೋಡಿಕೊಳ್ಳುವ ವ್ಯವಸ್ಥೆ, ಪ್ರಥಮ ಚಿಕಿತ್ಸೆಯ ್ಯವಸ್ಥೆ – ಎಲ್ಲವೂ ಭರವಸೆಗಳಾಗಿಯೇ ಇವೆ. ಕನಿಷ್ಠ, ್ಯೋಗ ಒದಗಿಸಲಾಗದ ದಿನಗಳಿಗೆ ನಿರುದ್ಯೋಗ ತ್ಯೆಯನ್ನು ನೀಡುವ ಕ್ರಮವನ್ನಾದರೂ ಜಾರಿಮಾಡಿದ್ದರೆ ೂಲಿಕಾರರು ಯೋಜನೆಯ ಬಗ್ಗೆ ನಂಬಿಕೆ ಕಳೆದು ಾಳ್ಳುತ್ತಿರಲಿಲ್ಲ.

ಖಾತ್ರಿ ಇಲ್ಲದ ಉದ್ಯೋಗ ಯೋಜನೆಯ ಅಡಿಯಲ್ಲಿ ಕೆಲಸವನ್ನು ಹುಡುಕುವ ಬದಲು ಗ್ರಾಮೀಣ ದುಡಿಮೆಗಾರರು ನಗರ ಪ್ರದೇಶಗಳಿಗೆ ವಲಸೆ ಹೋಗಲು ಇಷ್ಟಪಡುತ್ತಾರೆ. ಗ್ರಾಮೀಣ ಅನಿಶ್ಚಿತ ಬದುಕಿಗಿಂತ ನಗರದ ಅಪಾಯಕಾರಿ ಬದುಕನ್ನು ಆಯ್ಕೆಮಾಡಿಕೊಳ್ಳಲು ಅವರು ಹಿಂಜರಿಯುವುದಿಲ್ಲ. ನಗರದಲ್ಲಿ ಅವರಿಗೆ ವಾಸಕ್ಕೆ ಮನೆಗಳು ಇರುವುದಿಲ್ಲ. ಕೊಳಚೆ ಪ್ರದೇಶಗಳಲ್ಲಿ ಪ್ಲಾಸ್ಟಿಕ್ ಹಾಳೆಗಳಿಂದ ನಿರ್ಮಾಣ ಮಾಡಿದ ಗೂಡುಗಳಲ್ಲಿ ಅವರು, ಅವರ ಮಕ್ಕಳು ಮಳೆ ಚಳಿ ಗಾಳಿಯಿಂದ ರಕ್ಷಣೆ ಪಡೆಯಲು ಪರದಾಡುತ್ತಾರೆ. ಕುಸಿದು ಬಿದ್ದ ಮಣ್ಣಿನ ಅಡಿಯಲ್ಲಿ ಜೀವಂತ ಸಮಾಧಿಯಾಗುತ್ತಾರೆ. ನಿರ್ಮಾಣ ಹಂತದಲ್ಲಿರುವ ಕಟ್ಟಡ ಕುಸಿದು ಸಾಯುತ್ತಾ-ರೆ. ಬೆಂಕಿ ಅನಾಹುತದಲ್ಲಿ ಸುಟ್ಟು ಕರಕಲಾಗುತ್ತಾರೆ. ಎಂದೂ ಕೇಳರಿಯದ ರೋಗಗಳಿಗೆ ತುತ್ತಾಗಿ ನರಳಿ ನರಳಿ ಸಾವನ್ನಪ್ಪುತ್ತಾರೆ. ಇಷ್ಟೆಲ್ಲಾ ಸಂಕಷ್ಟಗಳು ಇದ್ದಾಗ್ಯೂ ಗ್ರಾಮೀಣ ಬಡವರು ನಗರದ ಅಪಾಯಕಾರಿ ಕೆಲಸಕ್ಕೆ ಮುಂದಾಗುತ್ತಾರೆ. ನಗರಗಳಲ್ಲಿ ನಾಲ್ಕು ಕಾಸು ಹೆಚ್ಚಿಗೆ ಸಂಪಾದನೆ ಮಾಡಬಹುದೆಂಬ ಒಂದೇ ಒಂದು ಆಸೆಗಾಗಿ ಅವರು ಹಳ್ಳಿಗಳನ್ನು ತೊರೆಯುತ್ತಾರೆ.

ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಸಮರ್ಪಕವಾಗಿ ಜಾರಿಗೆ ತರಲು ಸರಕಾರ ಮುಂದಾದರೆ, ಗ್ರಾಮೀಣ ಬಡವರು ಅಸಹಾಯಕರಾಗಿ, ಅನಿವಾರ್ಯವಾಗಿ ನಗರ ಪ್ರದೇಶಗಳಿಗೆ ಓಡಿ ಬರುವುದನ್ನು ತಡೆಯಬಹುದು. ಇಂದು ಗ್ರಾಮೀಣ ಪ್ರದೇಶಗಳಲ್ಲಿ ಬಲಿಷ್ಠವಾಗಿ ಬೆಳೆದಿರುವ ರಾಜಕಾರಣಿಗಳ, ಕಂಟ್ರಾಕ್ಟರುಗಳ ಮತ್ತು ಭ್ರಷ್ಟ ಅಧಿಕಾರಿಗಳ ದುಷ್ಟ ಕೂಟವನ್ನು ಧ್ವಂಸಮಾಡದೆ ಇದು ಸಾಧ್ಯ ವಿಲ್ಲ. ಇಂದು ಪ್ರತಿಯೊಬ್ಬ ಶಾಸಕನ ಸುತ್ತ ಕಂಟ್ರಾಕ್ಟರುಗಳ ಲಾಬಿ ಇದ್ದೇ ಇರುತ್ತದೆ. ಈ ಕಂಟ್ರಾಕ್ಟರುಗಳು ಶಾಸಕನ ಆದಾಯದ ಒಂದು ಪ್ರಮುಖ ಮೂಲವಾಗಿರುತ್ತಾರೆ. ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಬಹುತೇಕವಾಗಿ ಈ ಕಂಟ್ರಾಕ್ಟರುಗಳ ಹಿಡಿತಕ್ಕೆ ಸಿಕ್ಕಿಹಾಕಿಕೊಂಡಿದೆ. ಇವರು ನಕಲಿ ಜಾಬ್ ಕಾರ್ಡುಗಳನ್ನು ಸೃಷ್ಟಿಮಾಡಿಸುತ್ತಾರೆ. ಅಸಲಿ ಕಾರ್ಡುಗಳನ್ನೂ ಸಂಗ್ರಹಿಸಿ ಇಟ್ಟುಕೊಳ್ಳುತ್ತಾರೆ. ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ಯಂತ್ರಗಳ ಸಹಾಯದಿಂದ ಅಲ್ಪ ಸ್ವಲ್ಪ ಕೆಲಸಮಾಡಿ ಯೋಜನೆಯ ದುಡ್ಡು ಕೊಳ್ಳೆ ಹೊಡೆಯುತ್ತಾರೆ. ಕೊಳ್ಳೆ ಹೊಡೆದ ಯೋಜನೆಯ ದುಡ್ಡಿನಲ್ಲಿ ಒಂದು ದೊಡ್ಡ ಭಾಗ ತಪ್ಪದೆ ಶಾಸಕನ ಜೇಬು ಸೇರುತ್ತದೆ. ಇದನ್ನು ಪ್ರಶ್ನೆ ಮಾಡುವ ವ್ಯಕ್ತಿಗಳ ಮೇಲೆ, ಸಂಘಟನೆಗಳ ಕಾರ್ಯಕರ್ತರ ಮೇಲೆ ಹಲ್ಲೆ ಮಾಡಿಸುತ್ತಾರೆ. ಬೀದರ್ ಜಿಲ್ಲೆಯ ಹುಮ್ನಾಬಾದ್, ಗುಲ್ಬರ್ಗಾ ಜಿಲ್ಲೆಯ ಚಿಂಚೋಳಿ, ಯಾದಗಿರಿ ಜಿಲ್ಲೆಯ ಯಾದಗಿರಿ ತಾಲೂಕು, ಗದಗ ಜಿಲ್ಲೆಯ ರೋಣ್, ಕೊಪ್ಪಳ ಜಿಲ್ಲೆಯ ಗಂಗಾವತಿ, ಮಂಡ್ಯ ಜಿಲ್ಲೆಯ ಮಳವಳ್ಳಿ, ಉಡುಪಿ ಜಿಲ್ಲೆಯ ಕುಂದಾಪುರ ಮೊದಲಾದ ತಾಲೂಕುಗಳಲ್ಲಿ ಪ್ರಾಂತ ಕೃಷಿ ಕೂಲಿಕಾರರ ಸಂಘದ ಕಾರ್ಯಕರ್ತರ ಮೇಲೆ ಹಲ್ಲೆಗಳಾಗಿವೆ.

ಭ್ರಷ್ಟಾಚಾರ ಮತ್ತು ಅಧಿಕಾರಿಗಳ ಅಸಹಕಾರದಿಂದ ಮಲಿನಗೊಂಡಿರುವ ಉದ್ಯೋಗ ಖಾತ್ರಿ ಯೋಜನೆಯನ್ನು ಸಂಪೂರ್ಣ ಸ್ವಚ್ಛಗೊಳಿಸಲು ಕ್ರಮಕೈಗೊಳ್ಳಲಾಗುತ್ತಿದೆ, ಯೋಜನೆಯ ಅನುಷ್ಠಾನವನ್ನು ನಿರ್ದೇಶನಾಯಲದಿಂದ ಆಯುಕ್ತಾಲಯಕ್ಕೆ ಉನ್ನತೀಕರಿಸಲಾಗುತ್ತದೆ ಎಂದು ಗ್ರಾಮೀಣಾಭಿವೃದ್ಧಿ ಸಚಿವರು ಹೇಳಿದ್ದಾರೆ. ಭ್ರಷ್ಟರನ್ನು ಬಗ್ಗುಬಡಿಯುವ ದಿಸೆಯಲ್ಲಿ ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡುವುದೇ ಎಂಬುದನ್ನು ಕಾದು ನೋಡಬೇಕಾಗಿದೆ.

ಹೈ–ಕ 371 ಜೆ ಜಾರಿಗೆ ಅಸ್ತು: ವಿಶಾಲ ಸಮಾಲೋಚನೆ ಈಗಲೂ ಅಗತ್ಯ



ಹೈದ್ರಾಬಾದ್ ಕರ್ನಾಟಕ ಪ್ರದೇಶದ ಅಭಿವೃದ್ಧಿಗೆ ಪೂರಕವಾಗುವ, ಪ್ರಾದೇಶಿಕ ಅಸಮಾನತೆಯನ್ನು ತೊಲಗಿಸುವ ನಿಟ್ಟಿನಲ್ಲಿ ಸಂವಿಧಾನದ 371 ಜೆ ಯ ತಿದ್ದುಪಡಿಗೆ ಸಂಬಂಧಿಸಿ ಸಚಿವ ಸಂಪುಟದ ಶಿಫಾರಸುಗಳನ್ನು ಒಪ್ಪಿರುವುದಾಗಿ ಸರಕಾರ ವಿಧಾನಸಭೆಯಲ್ಲಿ ಪ್ರಕಟಿಸಿದೆ. ಈ ಹಿಂದೆಲ್ಲಾ ಇಂತಹ ಪ್ರಸ್ತಾವವನ್ನು ಅಂಗೀಕರಿಸಲು ಮೀನಾ ಮೇಷಾ ಎಣಿಸಿದ್ದ ಕಾಂಗ್ರೆಸ್ ಕಳೆದ ವಿಧಾನಸಭಾ ಚುನಾವಣೆಗೆ ಮೊದಲು ಮತ್ತು ಇದೀಗ (ಪಾರ್ಲಿಮೆಂಟ್ ನ) ತೋರಿಸಿದ ಉತ್ಸಾಹ ಗಮನಾರ್ಹ. ಅದಕ್ಕೆ ಅಕ್ಕಿ ಮೇಲೆ ಇರುವ ಆಶೆ ಏನೂ ಹೋಗಿಲ್ಲ, ಆದರೆ ನೆಂಟರ ಪ್ರೀತಿ ಗಳಿಸುವ ಕಸರತ್ತೂ ಬಿಟ್ಟಿಲ್ಲ. ಅದೇನೇ ಇದ್ದರೂ ಕಲಂನ ಜಾರಿಗೆ ತೋರಿಸಿರುವ ಆಸಕ್ತಿ, ಕ್ರಮ ಸ್ವಾಗತಾರ್ಹವಾಗಿದೆ. (ಸರಕಾರದ ಪ್ರಸ್ತಾಪಗಳ ಪೂರ್ಣ ಮಾಹಿತಿಗಳನ್ನು ಸಾರ್ವಜನಿಕರಿಗೆ ನೀಡಬೇಕಿದೆ, ವಿಶ್ಲೇಷಿಸಬೇಕಿದೆ)

ಇದರಂತೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ, ಅಭಿವೃದ್ಧಿಯ ಯೋಜನೆಗಳು, ಸಾಮಾಜಿಕ, ಆರ್ಥಿಕ ಪ್ರಶ್ನೆಗಳು ಮುಖ್ಯವಾಗಿ ಆಡಳಿತಾತ್ಮಕ –ಸಾಂಸ್ಥಿಕ ವ್ಯವಸ್ಥೆ ರೂಪಿಸುವುದು ಇವೆಲ್ಲವುಗಳ ಬಗ್ಗೆ ನಿರ್ದಿಷ್ಟ ಪ್ರಸ್ತಾವಗಳನ್ನು ಸರಕಾರ ಮಂಡಿಸಿದೆ, ಇವುಗಳ ಬಗ್ಗೆ ಮತ್ತೂ ಹಲವಾರು ಅಭಿಪ್ರಾಯಗಳು ಇರಲು ಸಾಧ್ಯ, ಇವೆ. ಈ ಬಗ್ಗೆ ಇನ್ನೂ ಶಾಸನ ಸಭೆಯಲ್ಲಿ ಚರ್ಚೆಯಾಗಿಲ್ಲ. ಮಾತ್ರವಲ್ಲ, ಇಂತಹ ಅತ್ಯಂತ ಪ್ರಮುಖ ವಿಷಯದ ಮುಖ್ಯ ಅಂಶಗಳ ಬಗ್ಗೆ ವ್ಯಾಪಕವಾದ ಮತ್ತೊಂದು ಸುತ್ತಿನ ಸಮಾಲೋಚನೆ ಅಗತ್ಯವೆನಿಸುತ್ತದೆ. ಆ ಪ್ರದೇಶದ ಜಿಲ್ಲೆಗಳಲ್ಲಿ ಅಭಿಪ್ರಾಯ ಸಂಗ್ರಹಿಸಲಾಗಿದೆ. ಆದರೆ ರಾಜ್ಯದಲ್ಲಿನ ಎಲ್ಲಾ ರಾಜಕೀಯ ಪಕ್ಷಗಳ, ಪ್ರಮುಖ ಸಂಸ್ಥೆಗಳ ಅಭಿಪ್ರಾಯ ಸಂಗ್ರಹ ಅಗತ್ಯವಿದೆ.

ಪುಟ 4 ಕ್ಕೆ

ಪಿ ಮಹಮ್ಮದ್



ಕಾರ್ಟೂನ್ ಕಾರ್ನರ್

ಕೃಪೆ : ವಿಜಯ ಕರ್ನಾಟಕ

ಸಿಪಿಎಂ ಬಂಟ್ವಾಳ ತಾಲೂಕು ಸಮಿತಿ ಸದಸ್ಯ ಶೀನ ಬಂಗೇರ ನಿಧನ:

ಸಿಪಿಐ(ಎಂ) ಬಂಟ್ವಾಳ ತಾಲೂಕು ಸಮಿತಿ ಸದಸ್ಯ , ಬಂಟ್ವಾಳ ಬೀಡಿ ಕೆಲಸಗಾರರ ಸಂಘದ ಉಪಾಧ್ಯಕ್ಷ, ಕರ್ನಾಟಕ ಪ್ರಾಂತ ರೈತ ಸಂಘದ ಬಂಟ್ವಾಳ ತಾಲೂಕು ಉಪಾಧ್ಯಕ್ಷರಾಗಿದ್ದ ಮಂಡಾಡಿ ಶೀನ ಬಂಗೇರ ಅವರು ಜುಲಾಯಿ 28 ರಂದು ಹೃದಯಾಘಾತದಿಂದ ನಿಧನರಾದರು. ಅವರಿಗೆ 55 ವರ್ಷ ವಯಸ್ಸಾಗಿತ್ತು.

ಚಿಕ್ಕ ಬಾಲಕನಿರುವಾಗಲೇ ಸಿಪಿಐ(ಎಂ) ಹಾಗೂ ಕಾರ್ಮಿಕ ಸಂಘಟನೆಗಳ ಸಂಪರ್ಕಕ್ಕೆ ಬಂದ ಶೀನ ಬಂಗೇರ ಅವರು, ಕಾರ್ಮಿಕ ಹಾಗೂ ರೈತ ಕುಟುಂಬಗಳೊಂದಿಗೆ ಮನೆ ಮನೆ ಒಡನಾಟ ಇಟ್ಟುಕೊಂಡಿದ್ದು, ಆ ಕುಟುಂಬಗಳ ಕಷ್ಟ ಸುಖಗಳಲ್ಲಿ ಭಾಗವಹಿಸಿ ಜನಪ್ರಿಯರಾಗಿದ್ದರು. ಬಂಟ್ವಾಳ ಬೀಡಿ



ಕೆಲಸಗಾರರ ಸಂಘದಲ್ಲಿ ಪೂರ್ಣಾವಧಿ ಕಾರ್ಯಕರ್ತರಾಗಿದ್ದು,ತಮ್ಮಕುಟುಂಬದವರನ್ನೂ ಕಾರ್ಮಿಕ ಚಳುವಳಿಗಳಲ್ಲಿ ಭಾಗವಹಿಸುವಂತೆ ಮಾಡಿದ್ದರು. ತನ್ನ ಇಬ್ಬರು ಮಕ್ಕಳನ್ನು ಸ್ನಾತಕೋತ್ತರ ಶಿಕ್ಷಣ ಪಡೆಯುವಂತೆ ಮಾಡಿದರಾದರೂ, ಮನೆಯ ಪರಿಸ್ಥಿತಿ ಉತ್ತಮಪಡಿಸಿಕೊಳ್ಳಲು ಆಗಲಿಲ್ಲ. ಸ್ವಾಭಿಮಾನಿಯಾದ ಅವರು ಅಚಲವಾದ ಪಕ್ಷನಿಷ್ಠೆ ಹೊಂದಿದ್ದರು.

ಅಂತ್ಯಸಂಸ್ಕಾರದಲ್ಲಿ ಭಾವುಕ ಸನ್ನಿವೇಶ:

ಶೀನ ಬಂಗೇರರ ಅಂತ್ಯಸಂಸ್ಕಾರದ ವೇಳೆ ಸಿಪಿಐ(ಎಂ) ಪಕ್ಷದ ಬಾವುಟವನ್ನು ಪಾರ್ಥಿವ ಶರೀರದ ಮೇಲೆ ಹೊದಿಸಿ ಮೆರವಣಿಗೆ ಮಾಡಲಾಗಿತ್ತು. ಶ್ಮಶಾನದಲ್ಲಿ ಮೃತದೇಹಕ್ಕೆ ಅಗ್ನಿಸ್ಪರ್ಶ ಮಾಡುವ ಮೊ ಹೊದೆಸಿದ ಬಾವುಟವನ್ನು ತೆಗೆಯಲಾಯಿ ಆ ಬಾವುಟವನ್ನು ತನ್ನ ಕೈಗೆ ತೆಗೆ ಕೊಂಡ ಶೀನ ಬಂಗೇರರ ಮಗಳು ಪ್ರಿ ಬಾವುಟವನ್ನು ಎರಡೂ ಕೈಗಳಲ್ಲಿ ಬ ಹಿಡಿದು ತನ್ನ ತಂದೆಯ ಮುಖ ನೋಡಿ, "ಪಪ್ಪಾ, ಯಾವ ಬಾವುಟ ನೀವು ಜೀವಮಾನ ಪೂರ್ತಿ ದುಡಿದಿರ ಆ ಬಾವುಟವನ್ನು ಎತ್ತಿ ಹಿಡಿಯಲಿ ನಾನೂ ನನ್ನ ತಮ್ಮನೂ ಸಾಧ್ಯವಾದ ಪ್ರಯತ್ನಿಸುತ್ತೇವೆ." ಎಂದವಳೆ ಬಾವುಟವ ಹೆಗಲಿಗೇರಿಸಿಕೊಂಡು ಮನೆಗೆ ನಡ ಬಿಟ್ಟಳು.

ಪ್ರಿಯಾ ಕಳೆದ ಒಂದು ವರ್ಷದಿ ಉಪನ್ಯಾಸಕಿಯಾಗಿ ಕೆಲಸ ಮಾಡುತ್ತಿದ್ದಾ

ಆಡಳಿತ ಅಡ್ಡ ಹಾದಿ.....

ಪುಟ 3 ರಿಂದ


ಅದರಲ್ಲೂ ಶಾಸನ ಸಭೆಯಲ್ಲಿ ಪ್ರಾತಿನಿಧ್ಯವಿರುವವರಷ್ಟೇ ರಾಜಕೀಯ ವ್ಯವಸ್ಥೆ ಅಲ್ಲ. ಎಲ್ಲಾ ರಾಜಕೀಯ ಪಕ್ಷಗಳು ಪ್ರಜಾಪ್ರಭುತ್ವದ ಅವಿಭಾಜ್ಯ ಅಂಗ. ಇಂತಹ ವಿಶಾಲ ಸಮಾಲೋಚನೆ ರಾಷ್ಟ್ರಪತಿಗಳ ಅನುಮೋದನೆಗೆ ಹೋಗುವ ಮೊದಲು ಅಗತ್ಯವಿದೆ.

ಇನ್ನು ಸರಕಾರದ ಸೂಚನೆಗಳ ಬಗ್ಗೆಯೇ ಮೀಸಲಾತಿಯ ಹೆಚ್ಚಳದಂತಹ ಪ್ರಶ್ನೆಯಲ್ಲಿ, ಮಂಡಳಿಯಲ್ಲಿ ಕೇವಲ ಶಾಸಕರು, ಸಂಸದರು ಮಾತ್ರವೇ ಇರಬೇಕೆಂಬ ಆಡಳಿತಾತ್ಮಕ ವ್ಯವಸ್ಥೆಯ ಬಗ್ಗೆ ಭಿನ್ನ ಅಭಿಪ್ರಾಯವಿರಲು ಸಾಧ್ಯ. ಇದಕ್ಕೆ ಈ ನೇಮಕದ ಸ್ವರೂಪದ ಬದಲು ಪ್ರಜಾಸತ್ತಾತ್ಮಕವಾಗಿ ಚುನಾಯಿತ ಮಂಡಳಿಯು ಇರಬೇಕೆಂಬ ಬೇಡಿಕೆಯೂ ಇದೆ. ಡಾ. ನಂಜುಂಡಪ್ಪನವರ ವರದಿಯ ಅನುಷ್ಠಾನದ ಹೆಸರಿನಲ್ಲಿ ತಂದ ಯೋಜನೆಗಳು, ಹಣ ಎತ್ತ ಹೋಯಿತು, ಏನಾಯಿತು ಎಂಬುದರ ಧಾರುಣ ಅನುಭವ ಇದೆ. ಮಾತ್ರವಲ್ಲ, ವಿದರ್ಭಾ, ತೆಲಂಗಾಣದಂತಹ ಪ್ರದೇಶಗಳ ರಕ್ತ-ಕಣ್ಣೀರಿನ ದುರಂತ ಕಥೆಗಳು ಕಣ್ಣೆದುರೇ ಇವೆ. ಇದಕ್ಕೆ ಭಿನ್ನವಾಗಿ ಎಡ ಸರಕಾರಗಳು ಪ/ಬಂಗಾಳ, ತ್ರಿಪುರಾಗಳಲ್ಲಿ ತಂದ ವಿಭಿನ್ನ, ಪ್ರಜಾಪ್ರಭುತ್ವೀಯ ಪ್ರಕ್ರಿಯೆಯ, ಅದರ ಗಟ್ಟಿ ಅಂತಃಸತ್ವದ ಸ್ವಾಯತ್ತ ಮಂಡಳಿಗಳ ಶ್ರೀಮಂತ ಅನುಭವವೂ ಇದೆ. ಹೀಗಾಗಿ ಈಗಲೂ ಸರಕಾರ ಅಂತಹ ವಿಶಾಲವಾದ ಪರಿಗಣನೆಗೆ ಮುಂದಾಗಬೇಕು.

ಸರಕಾರಕ್ಕೆ ಪ್ರಾದೇಶಿಕ ಅಸಮಾನತೆ ಹೋಗಲಾಡಿಸುವಲ್ಲಿ ಪ್ರಾಮಾಣಿಕತೆ, ಬದ್ಧತೆ ಇದ್ದಲ್ಲಿ ಈ ದಿಕ್ಕಿನಲ್ಲಿ ಕ್ರಮ ವಹಿಸಲಿ.

ಪಾರ್ಲಿಮೆಂಟ್ ಉಪ ಚುನಾವಣೆ: ಸಂದರ್ಭ ಸಾಧಕತೆ ಇಲ್ಲೂ ಮೆರೆದೀತೆ?

ಇತ್ತೀಚೆಗಿನ ವಿಧಾನಸಭೆ ಚುನಾವಣೆಯಲ್ಲಿ ಇಬ್ಬರು ಸಂಸದರು ಶಾಸಕರಾಗಿ ಆಯ್ಕೆಯಾಗಿರುವ ಹಿನ್ನೆಲೆಯಲ್ಲಿ (ಹೆಚ್.ಡಿ.ಕುಮಾರಸ್ವಾಮಿ, ಅಂಬರೀಷ್) ಇದೇ ಆಗಸ್ಟ್‌ನಲ್ಲಿ ಚುನಾವಣೆ ನಡೆಯಲಿದೆ. ಮಂಡ್ಯದಲ್ಲಿ ಕಾಂಗ್ರೆಸ್, ಬೆಂಗಳೂರು ಗ್ರಾಮೀಣದಲ್ಲಿ ಜೆ.ಡಿ.ಎಸ್



ಗೆದ್ದಿದ್ದ ಕ್ಷೇತ್ರಗಳಿವು. ಈಗ ಆ ಎರಡನ್ನು ಗೆದ್ದುಕೊಳ್ಳುವ ಉತ್ಸಾಹ ಮತ್ತು ತಂತ್ರದಲ್ಲಿ ಈ ಪಕ್ಷಗಳಿವೆ. ಬಿಜೆಪಿಗೆ ಮಂಡ್ಯ ಭಾಗದಲ್ಲಿ ಅಷ್ಟು ಬಲವಿಲ್ಲ, ಆದರೆ ಗ್ರಾಮೀಣದಲ್ಲಿ ಅದಕ್ಕೆ ಒಂದಿಷ್ಟು ಬಲವಿದೆ. ಹೀಗಾಗಿ ಮೇಲು ನೋಟದಲ್ಲಿನ ರಾಜಕೀಯ ಶಕ್ತಿಗಳ ಬಲಾ, ಬಲ, ಅಸ್ತಿತ್ವದ ಹಣಾಹಣಿ ನೋಡಿದರೆ ಎರಡೂ ಕ್ಷೇತ್ರಗಳಲ್ಲಿಯೂ ಮೂರೂ ಪಕ್ಷಗಳು ಸೆಣಸಲಿವೆ.

ಈ ಭಾಗದಲ್ಲಿ ಪ್ರಸಕ್ತವಾಗಿ ಸ್ಪರ್ಧಿಸದಿರಲು ಸಿಪಿಐ(ಎಂ) ನಿರ್ಧರಿಸಿದೆ, ಸರ್ವೋದಯ ಕರ್ನಾಟಕ ಸ್ಪರ್ಧಿಸುವ ಸಾಧ್ಯತೆಗಳಿವೆ.

ಇದು ಉಪ ಚುನಾವಣೆ, ಮುಂದಿನ 2014ರ ಮೇನಲ್ಲಿ ಸಾರ್ವತ್ರಿಕ ಚುನಾವಣೆ ಬರಲಿದೆಯಾದರೂ ಭವಿಷ್ಯದ ರಾಜ-ಕಾರಣದ ದೃಷ್ಟಿಯಿಂದ ಎಲ್ಲರ ಪಾಲಿಗೆ ಈ ಚುನಾವಣೆ ಮಹತ್ವದ್ದೆಂದು ಭಾವಿಸಲಾಗಿದೆ. ವಿಶೇಷವಾಗಿ, ಬಿಜೆಪಿ ಸೋತು ಕಾಂಗ್ರೆಸ್ ಅಧಿಕಾರಕ್ಕೆ ರಾಜ್ಯದಲ್ಲಿ ಬಂದಿರುವಾಗ, ಮುಂದೆ ದೆಹಲಿ ಗದ್ದುಗೆ ಹಿಡಿವ ಲೆಕ್ಕಾಚಾರದಲ್ಲಿ ಅಸ್ತಿತ್ವ ಸಾಬಿತು ಪಡಿಸಿಕೊಳ್ಳುವುದು, ಗೆಲ್ಲುವುದೂ ಅವರಿಗೆ ಅಷ್ಟೆ ಅಗತ್ಯವಾಗಿದೆ. ಇಂದಿನ ರಾಜಕೀಯ, ಆರ್ಥಿಕ ಸನ್ನಿವೇಶ, ಅವುಗಳ ಜನದ್ರೋಹಿ ನೀತಿಗಳನ್ನು ಮತ್ತು ಮುಂದೆ ತರಬೇಕೆಂದಿರುವ ನೀತಿ, ಯೋಜನೆಗಳನ್ನು ಗಮನಿಸಿದರೆ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳ ಕೂಟವನ್ನು ಸೋಲಿಸಲೇ ಬೇಕಿದೆ. ಕಾಂಗ್ರೆಸನ್ನು ಮತ್ತು ಬಿಜೆಪಿಯನ್ನು ಸೈದ್ಧಾಂತಿಕವಾಗಿ ವಿರೋಧಿಸುವ ಪಕ್ಷಗಳು ಬಲಗೊಳ್ಳಬೇಕಾಗಿದೆ. ಚುನಾವಣೆಯ ನಂತರವಾದರೂ ಕಾಂಗ್ರೆಸನ್ನೂ ಬಿಜೆಪಿಯನ್ನೂ ಹೊರಗಿಟ್ಟು ಧೋರಣೆಗಳ ಆಧಾರದಲ್ಲಿ ಪರ್ಯಾಯ ರಂಗವನ್ನು ನಿರ್ಮಾಣ ಮಾಡಲು ಸಾಧ್ಯವಾಗಬೇಕಾಗಿದೆ. ಜನತೆಯ ಒಲವು ಆ ದಿಕ್ಕಿಗೇ ವಾಲುವ ಲಕ್ಷಣಗಳು ಗೋಚರಿಸುತ್ತಿವೆ. ಇದಕ್ಕೆ ಕರ್ನಾಟಕದ ಜನತೆ ಸಹ ಬಲ ತುಂಬಬೇಕು. ಈ ದೆಶೆಯಲ್ಲಿ ಈ ಉಪ ಚುನಾವಣೆಯ ಗಮನದಲ್ಲಿರಿಸಿದರೆ ಜೆಡಿ ಎಸ್ ಗೆ ಅಂತ ಹೊಣೆ ನಿಭಾಯಿಸಬೇಕಾದ ಸಂದರ್ಭ, ಸ್ಥಳಾವಕಾಶವಿದೆ. ಆದರೆ ಜೆಡಿ ಎಸ್ ಏನ ಮಾಡಲಿದೆ? ಇದು ಪ್ರಶ್ನೆ!

ಯಾಕೆಂದರೆ, ಜೆಡಿ ಎಸ್ ನ ರಾಷ್ಟ್ರೀ ಅಧ್ಯಕ್ಷರಾದ ದೇವೇಗೌಡರು ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳನ್ನು ಸಮಾನವಾಗಿ ಎದುರಿಸುವ ನಿಲುವು ಪ್ರಕಟಿಸಿದ್ದಾರೆ. ಆದರೆ ದಟ್ಟವಾದ ಸುದ್ದಿಗಳು ಹೊರ ಬಂದಿರುವಂತೆ ರಾಜ್ಯಾಧ್ಯಕ್ಷ ಕುಮಾರಸ್ವಾ ಕಾಂಗ್ರೆಸ್‌ನ್ನು ಸೋಲಿಸಲು ಬಿಜೆಪಿಯೊಂದಿ ಸ್ನೇಹ ಹಸ್ತ ಚಾಚಿ ಒಂದು ಒಳ ಒಪ್ಪಂದ ಬಂದಿದ್ದಾರಂತೆ! ಅದೆಂದರೆ ಸಂಸದರ ಚುನಾವಣೆಯಲ್ಲಿ ಬಿಜೆಪಿಯು ಜೆಡಿ ಎಸ್ ಗೆ ಬೆಂಬಲಿಸಿದರೆ, ಮುಂಬರುವ ವಿಧಾನ ಪರಿಷತ್‌ನ ಮೂರು ಸ್ಥಾನಗಳಿಗೆ ಜೆಡಿ ಎಸ್ ಪಕ್ಷವು ಬಿಜೆಪಿಗೆ ಬೆಂಬಲಿಸುವುದೆಂ ಸೂತ್ರವೇ ಅದು ಎಂದು ಹೇಳಲಾಗು ಹಾ ನಡೆದಿರುವ ಬೆಳವಣಿಗೆಗಳನ್ನು ಗಮನಿಸಿದ ಇವನ್ನು ಅಷ್ಟು ಸುಲಭದಲ್ಲಿ ತಳ್ಳಿ ಹಾಕಲು ಸಾಧ್ಯವಿಲ್ಲ. ಒಂದು ವೇಳೆ ಇದು ನಿಜವಾದರೆ ರಾಜ್ಯದಲ್ಲಿ ಬಿಜೆಪಿಯ ದುರಾಡಳಿತದಿಂದ ಬೇಸತ್ತು ಅದನ್ನು ಸೋಲಿಸಿದ ಜನತೆಯ ತೀರ್ಪಿಗೆ, ಜನತೆ ಬಗೆದ ದ್ರೋಹವಾಗಲಿದೆ. ಮಾತ್ರವಲ್ಲ, ಸ್ವತಃ ಜೆಡಿ ಎಸ್ ಆತ್ಮಹತ್ಯಾ ಹಾದಿಯನ್ನು ಮತ್ತೇ ಹಿಡಿದಂತೆ. ಈ ಚಿತ್ರಣ ಮುಂದಿನ ವಾರದಷ್ಟೊತ್ತಿಗೆ ಸ್ಪಷ್ಟವಾಗಲಿದೆ.

ರಾಜ್ಯದ ರಾಜಕಾರಣ ನಿಜವಾದ ಪರ್ಯಾಯವನ್ನು ಬಯಸುತ್ತಿದೆ. ಪರ್ಯಾಯ ರಾಜಕಾರಣಕ್ಕಾಗಿ, ರಾಜಕೀಯ ಪರ್ಯಾಯ ರೂಪಿಸಲು ಎಡ ಪಕ್ಷಗಳ ಮುತುವರ್ಜಿಯಲ್ಲಿ ಈ ದಿಕ್ಕಿನಲ್ಲಿ ನಡೆದಿರುವ ಪ್ರಯತ್ನಗಳನ್ನು ಎಲ್ಲಾ ಜಾತ್ಯಾತೀತ, ಪ್ರಗತಿಪರ ಶಕ್ತಿಗ ಬೆಂಬಲಿಸಿ, ಬಲಗೊಳಿಸಬೇಕು.

ಪಶ್ಚಿಮ ಬಂಗಾಳ ಪಂಚಾಯತ್ ಚುನಾವಣೆಗಳ ಫಲಿತಾಂಶ:

ಹಲ್ಲೆ ಹಿಂಸೆ ಕೊಲೆಗಳನ್ನೆದುರಿಸಿ ದೃಢ ಪ್ರತಿರೋಧ ಒಡ್ಡಿರುವ ಎಡರಂಗ

ಪಶ್ಚಿಮ ಬಂಗಾಳದ ಪಂಚಾಯತ್ ಚುನಾವಣೆಗಳ ಫಲಿತಾಂಶ ಹೊರಬಿದ್ದಿದೆ. ಅಲ್ಲಿ ನಿರೀಕ್ಷಿಸಿದಂತೆಯೇ ಆಗಿದೆ. ತೃಣಮೂಲ ಕಾಂಗ್ರೆಸ್ ಬಹುತೇಕ ಜಿಲ್ಲೆಗಳ ಮೂರು ಹಂತಗಳ ಫಲಿತಾಂಶವನ್ನು 'ಗೆದ್ದು' ತನ್ನದಾಗಿಸಿಕೊಂಡಿದೆ. ಇದು ಗ್ರಾಮೀಣ ಬಂಗಾಳದ ಇಂದಿನ ವಾಸ್ತವ ಚಿತ್ರಣವಲ್ಲ, ತಿರುಚಲ್ಪಟ್ಟ ಚಿತ್ರಣ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ದಬ್ಬಾಳಿಕೆ ಹಿಂಸಾಚಾರವನ್ನು ವ್ಯಾಪಕವಾಗಿ ನಡೆಸಲು ಸಾಧ್ಯವಾದಲ್ಲೆಲ್ಲಾ ತೃಣಮೂಲ ಕಾಂಗ್ರೆಸ್ ಬಾರಿ ಅಂತರದಿಂದ ಗೆಲುವು ಸಾಧಿಸಿದೆ. ಸಂಘಟಿತ ಮತ್ತು ಯೋಜಿತ ಹಿಂಸಾಚಾರ ಮತ್ತು ಹಲ್ಲೆ ಧಾಳಿಗಳು ಚುನಾವಣಾ ಪ್ರಕ್ರಿಯೆಗೂ ತುಂಬಾ ಮೊದಲೇ ಆರಂಭವಾದವು. ಎಡರಂಗದ ಅಭ್ಯರ್ಥಿಗಳು ನಾಮಪತ್ರವನ್ನು ಸಲ್ಲಿಸಲು ಬಿಡದ ಪ್ರಮಾಣದಲ್ಲಿ ಹಿಂಸೆ ನಡೆಯಿತು. ಚುನಾವಣೆಗಳಲ್ಲಿ ಮತಗಟ್ಟೆ ವಶ, ರಿಗ್ಗಿಂಗ್, ಎಡರಂಗಡ ಏಜೆಂಟರನ್ನು ಮತಗಟ್ಟೆಯಿಂದ ಓಡಿಸುವುದು, ಚುನಾವಣಾ ಅಧಿಕಾರಿಗಳನ್ನು ಬೆದರಿಸುವುದು, ಮತದಾರರಿಗೆ ಬೆದರಿಕೆ, ಹಲ್ಲೆ, ಗುರುತಿನ ಚೀಟಿ ಅಪಹರಣ, ಅವರ ಮೇಲೆ ಗುಂಡಿನ ದಾಳಿ, ವಿರೋಧಿಗಳ ಮೇಲೆ ಬಾಂಬ್ ದಾಳಿಗಳು ಮುಂತಾದ ಭೀಕರ ದುಷ್ಕೃತ್ಯಗಳ ಬಗೆಗೆ, ಕ್ರೌರ್ಯಗಳ ಬಗೆಗೆ ಪತ್ರಿಕೆ ಈಗಾಗಲೇ ವರದಿಗಳನ್ನು ಪ್ರಕಟಿಸಿದೆ. ಚುನಾವಣಾ ಎಣಿಕೆಯ ದಿನವೂ ವ್ಯಾಪಕ ಹಿಂಸಾಚಾರ ನಡೆಸಲಾಗಿದೆ. ಎಣಿಕೆಯ ಪ್ರಕ್ರಿಯೆಯನ್ನೇ ಬುಡಮೇಲು ಮಾಡಿ, ಎಣಿಕೆ ಅಧಿಕಾರಿಗಳನ್ನು ಬೆದರಿಸಿ ಚುನಾವಣೆ ಗೆ[illegible] ಪ್ರಯತ್ನಗಳೂ ನಡೆದಿದೆ.

[illegible] ಒಟ್ಟು ಚುನಾವಣೆಗಳ ಸಂಬಂಧ ಇಲ್ಲಿಯವರೆಗೆ 50 ಜನರು ಪ್ರಾಣ ಕಳೆದುಕೊಂಡಿದ್ದಾರೆಂದರೆ ಹಿಂಸೆ ಎಷ್ಟು ವ್ಯಾಪಕವಾಗಿತ್ತು ಎಂದು ಯಾರಾದರೂ ಊಹಿಸಬಹುದು.

ಮರಳಿ ಎದ್ದುನಿಂತ ಎಡರಂಗದ ಸದೃಢ ಪ್ರತಿರೋಧ

ಇಲ್ಲಿ ಗಮನಿಸಬೇಕಾದ ಮುಖ್ಯ ವಿಷಯವೆಂದರೆ ಅಧಿಕಾರರೂಢ ತೃಣಮೂಲ



ಕಾಂಗ್ರೆಸ್, ರಾಜ್ಯದ ಮುಖ್ಯಮಂತ್ರಿಯ ನೇರ ಕುಮ್ಮಕ್ಕು ಮತ್ತು ಬೆಂಬಲದೊಂದಿಗೆ ಹಾಗೂ ಆಡಳಿತ ಯಂತ್ರದ ನಗ್ನ ದುರುಪಯೋಗದೊಂದಿಗೆ ಪ್ರಜಾಪ್ರಭುತ್ವ ಮೌಲ್ಯಗಳ ಮೇಲೆ ಅತ್ಯಾಚಾರವೆಸಗಿ ಅಕ್ರಮಗಳನ್ನು ನಡೆಸಿದಾಗಲೂ ಎಡರಂಗವು ವ್ಯಾಪಕ ಪ್ರತಿರೋಧ ಒಡ್ಡುವಲ್ಲಿ ಯಶಸ್ವಿಯಾಗಿದೆ ಮತ್ತು ಹಲವೆಡೆ ಅರ್ಹ ಗೆಲುವನ್ನು ದಾಖಲಿಸಿದೆ. ಮರಳಿ ಎದ್ದುನಿಂತ ಎಡರಂಗದ ಸದೃಢ ಪ್ರತಿರೋಧ ಈ ಚುನಾವಣೆಯಲ್ಲಿ ಸ್ಪಷ್ಟವಾಗಿ ಕಂಡು ಬಂದಿದೆ. ಪ್ರಾಣಭೀತಿಯನ್ನು ಲೆಕ್ಕಿಸದೇ ದಿಟ್ಟವಾಗಿ ದಾಳಿಗಳನ್ನು ಎದುರಿಸಿದ ಸಿಪಿಐ(ಎಂ) ಮತ್ತು ಎಡರಂಗದ ಕಾರ್ಯಕರ್ತರು ರಾಜ್ಯದಲ್ಲಿ ಎಡರಂಗ ಮರಳಿ ಚೈತನ್ಯವನ್ನು ಒಗ್ಗೂಡಿಸಿಕೊಂಡು ಎದ್ದು ನಿಲ್ಲುತ್ತಿದೆ ಎಂದು ತೋರಿಸಿಕೊಟ್ಟಿದ್ದಾರೆ.





ಗ್ರಾಮ ಪಂಚಾಯತ್ ಫಲಿತಾಂಶ

ಗ್ರಾಮ ಪಂಚಾಯತ್ ಮಟ್ಟದಲ್ಲಿ ಒಟ್ಟು 3,215 ಪಂಚಾಯತ್‌ಗಳ ಪೈಕಿ ತೃಣಮೂಲ ಕಾಂಗ್ರೆಸ್ 1812 ಪಂಚಾಯತ್‌ಗಳಲ್ಲಿ 'ಗೆಲುವು ಸಾಧಿಸಿದೆ'. ಎಡರಂಗವು 749 ರಲ್ಲಿ ಗೆಲುವು ದಾಖಲಿಸಿದೆ. ಕಾಂಗ್ರೆಸ್ ಪಕ್ಷವು 240 ಸ್ಥಾನಗಳಲ್ಲಿ ಗೆದ್ದಿದ್ದರೆ 393 ಪಂಚಾಯತ್‌ಗಳಲ್ಲಿ ಅತಂತ್ರ ಸ್ಥಿತಿ ಏರ್ಪಟ್ಟಿದೆ. ಗ್ರಾಮ ಪಂಚಾಯತ್ ಹಂತದಲ್ಲಿಯಂತೂ ಅಧಿಕಾರರೂಢ ಪಕ್ಷವು ವಿರೋಧ ಪಕ್ಷದ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಲು ಭಾರಿ ಅಡ್ಡಿಗಳನ್ನು ಒಡ್ಡಿತ್ತು. 5,356 ಸ್ಥಾನಗಳಿಗೆ ಹೀಗೆ 'ಅವಿರೋಧ'ವಾಗಿ 'ಆಯ್ಕೆ'ಯಾಗಿದೆ.

ಎಡರಂಗಕ್ಕೆ ಬಹುಮತ

ಜಲಪೈಗುರಿ, ಉತ್ತರ ದಿನಾಜ್‌ಪುರ, ಮಾಲ್ಡಾ, ಮುರ್ಷಿದಾಬಾದ್, ನಾಡಿಯಾ ಜಿಲ್ಲೆಗಳಲ್ಲಿ ಬ್ಲಾಕ್ ಮಟ್ಟದ ಪಂಚಾಯತ್ ಸಮಿತಿಗಳಲ್ಲಿ ಎಡರಂಗ ಬಹುಮತ ಸಾಧಿಸಿದೆ. ಈ ಬ್ಲಾಕ್‌ಮಟ್ಟದಲ್ಲಿನ ರಾಜ್ಯದ ಒಟ್ಟು 330 ಸಮಿತಿಗಳಲ್ಲಿ ಎಡರಂಗ 68 ರಲ್ಲಿ, ತೃಣಮೂಲ 219 ರಲ್ಲಿ, ಕಾಂಗ್ರೆಸ್ 20ರಲ್ಲಿ ಗೆದ್ದಿವೆ. 20 ಸಮಿತಿಗಳು ಅತಂತ್ರ ಸ್ಥಿತಿಯಲ್ಲಿವೆ. ಜಿಲ್ಲಾ ಪಂಚಾಯತ್ ಮಟ್ಟದಲ್ಲಿ ಒಟ್ಟು 824 ಸಮಿತಿಗಳಲ್ಲಿ ಸಿಪಿಐ(ಎಂ)ನ 182 ಗೆಲುವು ಸೇರಿದಂತೆ ಎಡರಂಗ 221 ಸಮಿತಿಗಳಲ್ಲಿ ಗೆಲುವು ದಾಖಲಿಸಿದೆ. ತೃಣಮೂಲ 531 ಸಮಿತಿಗಳಲ್ಲಿ, ಕಾಂಗ್ರೆಸ್ 79 ಸಮಿತಿಗಳಲ್ಲಿ ಗೆಲುವು ಸಾಧಿಸಿದೆ. ಈ ಚುನಾವಣೆಗಳ ಫಲಿತಾಂಶದ ಕುರಿತು ಇನ್ನಷ್ಟು ವಿವರ-ವಿಶ್ಲೇಷಣೆಗಳನ್ನು ನಿರೀಕ್ಷಿಸಲಾಗುತ್ತಿದೆ.

ಪಕ್ಷಗಳು	ಸಿಪಿಐ(ಎಂ)	ಎಡರಂಗ	ಕಾಂಗ್ರೆಸ್	ತೃಣಮೂಲ ಕಾಂಗ್ರೆಸ್	ಅತಂತ್ರ	ಒಟ್ಟು
ಗ್ರಾಮ್ ಪಂಚಾಯಿತ್		749	240	1812	393	3,215
ಬ್ಲಾಕ್ ಪಂಚಾಯಿತ್		68	20	219	20	330
ಜಿಲ್ಲಾ ಪಂಚಾಯಿತ್	182	221	79	531		824

ಎಂ.ಎಚ್.ಕೃಷ್ಣಪ್ಪ ಸ್ಮರಣಾರ್ಥ ಹಾಡುಗಳ ಸೀಡಿ ಬಿಡುಗಡೆ

ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಮತ್ತು ತದನಂತರ ಬಡ ಶೋಷಿತ ಜನತೆಯ ಪರವಾದ ಅನೇಕ ಹೋರಾಟಗಳನ್ನು ಕಮ್ಯೂನಿಸ್ಟರು ಪ್ರಗತಿಶೀಲರು ಸಮರಶೀಲತೆಯಿಂದ ನಡೆಸಿಕೊಟ್ಟಿದ್ದಾರೆ.



ಇವತ್ತಿನ ಚರಿತ್ರೆಯ ಪಾಠಗಳಲ್ಲಿ ನಾವು ಅದನ್ನು ಕಾಣಲಾಗುತ್ತಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ಕ್ರಾಂತಿಕಾರಿ ಎಂ.ಎಚ್.ಕೃಷ್ಣಪ್ಪನವರನ್ನು ನಾವು ಮರೆಯಲು ಸಾಧ್ಯವಿಲ್ಲ. ಕಳೆದ ಶತಮಾನದ ದಕ್ಷಿಣ ಕನ್ನಡದ ಚರಿತ್ರೆಯನ್ನು ವಿದ್ವಜ್ಜನರು ಮರುರೂಪಿಸಬೇಕಾಗಿದೆ ಎಂಬುದಾಗಿ ಸಾಹಿತಿ ಪ್ರಗತಿಪರ ಚಿಂತಕಿ ಚಂದ್ರಕಲಾ ನಂದಾವರ ಅವರು ಹೇಳಿದರು.

ನ್ಯಾಯವಾದಿ ಯಶವಂತ ಮರೋಳಿ ಅವರು ರಚಿಸಿ ಹಾಡಿಸಿದ "ನಿಜವಾಯಿನ ಕಮ್ಯೂನಿಸ್ಟ್ ಎಂ.ಎಚ್" ಸಿ.ಡಿ.ಯನ್ನು ಜುಲಾಯಿ 28 ರಂದು ಮಂಗಳೂರು ಡಾನ್‌ಬಾಸ್ಕೋ ಹಾಲಿನಲ್ಲಿ ಬಿಡುಗಡೆ ಮಾಡಿ ಅವರು ಮಾತನಾಡುತ್ತಿದ್ದರು.

ಕಳೆದ ಮೂವತ್ತು ವರ್ಷಗಳ ಹಿಂದಿನವರೆಗೂ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ಸ್ವತಂತ್ರ ಚಿಂತನವನ್ನು ಮಾಡಲು ಪೂರಕವಾದ ವಾತಾವರಣ ವಿದ್ಯಾಸಂಸ್ಥೆಗಳಲ್ಲಿ ಇದ್ದಿತ್ತು. ಇತ್ತೀಚೆಗೆ ತಮ್ಮ ಗುಂಪಿಗೆ ಒಪ್ಪಿಗೆಯಿಲ್ಲದ ವಿಚಾರಗಳನ್ನು ಕೇಳುವ ತಾಳ್ಮೆಯೂ ಇರುವುದಿಲ್ಲವಾಗಿದೆ. ಮುಕ್ತ ಚಿಂತನೆಗೆ ಅವಕಾಶವನ್ನು ಮತ್ತೆ ಶೈಕ್ಷಣಿಕ ವಲಯದಲ್ಲಿ ಉಂಟು ಮಾಡಲು ನಾವೆಲ್ಲಾ ಪ್ರಯತ್ನ ಮಾಡಬೇಕಾಗಿದೆ ಎಂದು ಅವರು ಹೇಳಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಜಿಲ್ಲೆಯ ಖ್ಯಾತ ವಿದ್ವಾಂಸ ಡಾಜಿ.ಭಾಸ್ಕರ ಮಯ್ಯ ಮಾತನಾಡಿ, ನಿಜವಾದ ಕಮ್ಯೂನಿಸ್ಟ್ ಕೇವಲ ಸಿದ್ಧಾಂತಿಯಾಗಿರುವುದಿಲ್ಲ; ಆತ ತನ್ನ ಸಮಕಾಲೀನ ಸಮಾಜದ ಪ್ರಶ್ನೆ ವಾಸ್ತವಗಳಿಗೆ ಸ್ಪಂದಿಸಿ ಕ್ರಿಯಾಶೀಲನಾಗಿರುತ್ತಾನೆ ಎಂದರು. ಎಂ.ಎಚ್.ಕೃಷ್ಣಪ್ಪನವರ ಧೈರ್ಯ, ಸಾಹಸಗಳು ಅವರ ಪುತ್ರ ಯಶವಂತ ಮರೋಳಿಯವರಿಗೂ ಸ್ಫೂರ್ತಿಯಾಗಿದ್ದು, ಅವರು ಜನಪರ ಚಳುವಳಿಗಳಲ್ಲಿ ತೊಡಗಿರುವುದು ಶ್ಲಾಘನೀಯ ಎಂದೂ ಹೇಳಿದರು.

ಹೈಕೋರ್ಟ್ ನ್ಯಾಯವಾದಿ ತಾರನಾಥ ಪೂಜಾರಿ ಮಾತನಾಡಿ, ತಾನು ವಿದ್ಯಾರ್ಥಿ ದೆಸೆಯಲ್ಲಿ ಎಸ್‌ಎಫ್‌ಐ ಒಡನಾಟದಲ್ಲಿದ್ದುದು, ತನಗೆ ಸಮಾಜವನ್ನು ಅರ್ಥ ಮಾಡುವುದಕ್ಕೆ ದಾರಿ ತೋರಿತು–ಎಂದು ಹೇಳಿದರು.


ಸಿಪಿಐ(ಎಂ) ದ.ಕ. ಜಿಲ್ಲಾ ಸಮಿತಿ ಕಾರ್ಯದರ್ಶಿ ಬಿ.ಮಾಧವ ಅವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಕಮ್ಯೂನಿಸ್ಟ್ ಚಳುವಳಿಯಲ್ಲಿ ತನಗೆ ಶಿಕ್ಷಕರೂ ಮಾರ್ಗದರ್ಶಕರೂ ಆಗಿದ್ದ ಎಂ.ಎಚ್. ಕೃಷ್ಣಪ್ಪನವರ ಸಾಹಸಗಳು ಒಂದು ದಂತಕತೆಯೇ ಸರಿ. ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯಾಧ್ಯಕ್ಷರಾಗಿ ಪ್ರಥಮ ಬಾರಿಗೆ ಮಂಗಳೂರಿನಿಂದ ಬೆಂಗಳೂರಿಗೆ ರೈತರ ಜಾಥಾವನ್ನು ಅವರು ಮುನ್ನಡೆಸಿದರು. ಜಿಲ್ಲೆಯ ಗೇಣಿದಾರ ರೈತರ ಮೇಲೆ ಜಮೀನ್ದಾರರಿಂದ ಆಗುತ್ತಿದ್ದ ಹಲ್ಲೆಗಳಿಗೆ ಪ್ರತಿರೋಧವನ್ನು ಏರ್ಪಡಿಸಿದರು. ಹಿರಿಯ ನಾಯಕರಾಗಿದ್ದ ಎಸ್.ಎನ್. ಹೊಳ್ಳರನ್ನು ಪೋಲೀಸರು ರೈಲಿನಲ್ಲಿ ಒಯ್ಯುತ್ತಿದ್ದಾಗ, ರೈಲು ನಿಲ್ಲಿಸಿ ಅವರನ್ನು ರೈಲಿನಿಂದ ಹೊತ್ತುಕೊಂಡು ಹೋದ ಸಾಹಸ ಚರಿತ್ರಾರ್ಹವಾದುದು. ಸಿಪಿಐ(ಎಂ) ಪಕ್ಷದ ರಾಜ್ಯ ಸಮಿತಿ ಕಾರ್ಯದರ್ಶಿಯಾಗಿ ಭೂಸುಧಾರಣಾ ಚಳುವಳಿಗೆ ಮಾರ್ಗದರ್ಶನ ನೀಡಿ, ಶಾಸನ ಬರುವುದರಲ್ಲಿ ಮಹತ್ವದ ಪಾತ್ರವಹಿಸಿದರು ಎಂದು ವಿವರಿಸಿದರು.

ಯಶವಂತ ಮರೋಳಿಯವರು ಪ್ರಾಸ್ತಾವಿಕವಾಗಿ ಮಾತನಾಡಿದರು. ವಾಸುದೇವ ಉಚ್ಚಿಲ ಸ್ವಾಗತಿಸಿದರು. ಜೀವನ್‌ರಾಜ್ ಕುತ್ತಾರ್ ವಂದಿಸಿದರು. ಸುನಿಲ್ ಕುಮಾರ್ ಬಜಾಲ್ ಕಾರ್ಯಕ್ರಮ ನಿರೂಪಿಸಿದರು. ಸೌಹಾರ್ದ ಕಲಾವಿದರಿಂದ ಮರೋಳಿಯವರ ಹಾಡಿನ ರೂಪಕವನ್ನು ಪ್ರದರ್ಶಿಸಲಾಯಿತು.

ಬಿಸಿಯೂಟ ನೌಕರರ ಪ್ರತಿಭಟನೆ

ಮಂಗಳೂರು: ಜುಲಾಯಿ 28 ರಂದು

ಶಾಲೆಗಳ ಬಿಸಿಯೂಟ ವ್ಯವಸ್ಥೆಯನ್ನು ಖಾಸಗೀಕರಿಸುವ ರಾಜ್ಯ ಸರ್ಕಾರದ ಪ್ರಸ್ತಾವನೆಯನ್ನು ವಿರೋಧಿಸಿ ಮಂಗಳೂರು ಜಿಲ್ಲಾಧಿಕಾರಿಗಳ ಕಚೇರಿಯ ಎದುರು ನಡೆದ ಪ್ರತಿಭಟನಾ ಪ್ರದರ್ಶನವನ್ನು ಉದ್ದೇಶಿಸಿ ಕರ್ನಾಟಕ ರಾಜ್ಯ ಬಿಸಿಯೂಟ ನೌಕರರ ಸಂಘ (ಸಿಐಟಿಯು) ಇದರ ಪ್ರಧಾನ ಕಾರ್ಯದರ್ಶಿ ಮಾಲಿನಿ ಮೇಸ್ತರವರು ಮಾತನಾಡಿದರು. ಗೌರವಧನವನ್ನು ಹೆಚ್ಚು ಮಾಡಿ ಎಂದು ಹೋರಾಟ ಮಾಡಿದ ಬಿಸಿಯೂಟ ನೌಕರರಿಗೆ ವೇತನ ಜಾಸ್ತಿ ಮಾಡುವ ಬದಲಿಗೆ ಅವರನ್ನು ಕೆಲಸದಿಂದ ತೆಗೆಯುವ ಹುನ್ನಾರ ನಡೆಯುತ್ತಿದೆ. ಬಿಸಿಯೂಟವನ್ನು ಕಾರ್ಪರೇಟ್ ಕಂಪೆನಿಗಳಿಗೆ ಮತ್ತು ಸ್ವಯಂ ಸೇವಾ ಸಂಸ್ಥೆಗಳಿಗೆ ವಹಿಸಿ ಕೊಡಲು ಸರಕಾರ ಮುಂದಾಗಿದೆ. ಅವ್ಯವಸ್ಥೆಗಳಿಂದ ಆಗುವ ಅನಾಹುತಗಳಿಗೆ ಬಿಸಿಯೂಟ ನೌಕರರನ್ನು ಬಲಿಪಶು ಮಾಡುವ ರೀತಿಯನ್ನು ಕೈಬಿಟ್ಟು, ಅವರನ್ನು ಖಾಯಂಗೊಳಿಸಿ ಸೇವಾ ಭದ್ರತೆ ಹಾಗೂ ಸಾಮಾಜಿಕ ಭದ್ರತೆ ನೀಡಬೇಕೆಂದು ಅವರು ಆಗ್ರಹಿಸಿದರು.



ವಾ.ಉ.

ಇದಕ್ಕೂ ಮೊದಲು ಆರ್‌ಟಿಒ ವೃತ್ತದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಮೆರವಣಿಗೆ ನಡೆಸಲಾಯಿತು. ಸಿಐಟಿಯು ಮುಖಂಡರಾದ ಜೆ.ಬಾಲಕೃಷ್ಣ ಶೆಟ್ಟಿ, ವಸಂತ ಆಚಾರಿ, ಸುನಿಲ್ ಕುಮಾರ್ ಬಜಾಲ್, ಜಯಂತಿ ಬಿ.ಶೆಟ್ಟಿ, ಬಿಸಿಯೂಟ ನೌಕರರ ಜಿಲ್ಲಾ ಸಂಘದ ಅಧ್ಯಕ್ಷೆ ಪದ್ಮಾವತಿ ಶೆಟ್ಟಿ ಮತ್ತು ಸಂಘದ ಮುಖಂಡರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಪ್ರತಿಭಟನೆಯ ಬಳಿಕ ಮಂಗಳೂರಿನ ನಾಸಿಕ್ ಸಭಾಭವನದಲ್ಲಿ ಪದ್ಮಾವತಿ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಬಿಸಿಯೂಟ ನೌಕರರ ಜಿಲ್ಲಾ ಸಮಾವೇಶ ನೆರವೇರಿತು. ಸಮಾವೇಶವನ್ನು ಉದ್ಘಾಟಿಸಿ ಮಾಲಿನಿ ಮೇಸ್ತ ಮಾತನಾಡಿದರು. ಜೆ.ಬಾಲಕೃಷ್ಣ ಶೆಟ್ಟಿ, ವಸಂತ ಆಚಾರಿ, ಬಿ.ಎಂ.ಭಟ್, ಜಯಂತಿ ಬಿ.ಶೆಟ್ಟಿ ಮಾತನಾಡಿದರು. ಸಮಾವೇಶವು 32 ಮಂದಿಯುಳ್ಳ ನೂತನ ಜಿಲ್ಲಾ ಸಮಿತಿಯನ್ನು ಆಯ್ಕೆ ಮಾಡಿರುತ್ತದೆ. ಅಧ್ಯಕ್ಷರಾಗಿ ಪದ್ಮಾವತಿ ಶೆಟ್ಟಿ, ಉಪಾಧ್ಯಕ್ಷರುಗಳಾಗಿ ಸೇವಂತಿ, ಬಬಿತಾ, ಜಯಂತಿ, ಪ್ರಧಾನ ಕಾರ್ಯದರ್ಶಿಯಾಗಿ ಗಿರಿಜ ಮೂಡಬಿದ್ರೆ, ಖಜಾಂಚಿಯಾಗಿ ಭವ್ಯಾ ಆಯ್ಕೆಯಾಗಿರುತ್ತಾರೆ.



ಉಡುಪಿ :

29 ರಂದು ಅಕ್ಷರ ದಾಸೋಹ ನೌಕರರ ಸಂಘ (ಸಿಐಟಿಯು) ಉಡುಪಿ ಜಿಲ್ಲಾ ಸಮಿತಿ ವತಿಯಿಂದ ಉಡುಪಿ ಜಿಲ್ಲಾಧಿಕಾರಿಗಳ ಕಚೇರಿ ಎದುರು ಪ್ರತಿಭಟನಾ ಪ್ರದರ್ಶನ ನಡೆಸಲಾಯಿತು.

ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಬಾಲಕೃ
ಶೆಟ್ಟಿ ಪ್ರತಿಭಟನಾಕಾರರ
ಉದ್ದೇಶಿಸಿ ಮಾತನಾಡಿ
ರಾಜ್ಯ ಸರಕಾರ ಖಾಸ
ಕಂಪೆನಿಗಳಿಗೆ ಲಾ
ಮಾಡಿಕೊಡುವ ಉದ್ದೇಶದಿಂ
ದಲ್ಲಾಳಿಯಂತೆ ಕಾರ್ಯ
ನಿರ್ವಹಿಸುತ್ತಿದೆ; ಕನಿಷ್ಟ ಸೇ
ಸೌಲಭ್ಯವಿಲ್ಲದೆ ಅತಿ ಕಡಿ
ಗೌರವಧನ ಪಡೆದು ಅಡು
ಕೆಲಸ ಮಾಡುತ್ತಿರುವ ಒಂದು ಲಕ್ಷಕ್ಕ
ಅಧಿಕ ಮಹಿಳೆಯರನ್ನು ಉದ್ಯೋ
ವಂಚಿತರನ್ನಾಗಿಸಲು ಹೊರಟಿದೆ;
ಧೋರಣೆಯನ್ನು ಕೈಬಿಟ್ಟು ಸರಕಾ
ಅಡುಗೆಯವರ ಮತ್ತು ಸಹಾಯಕರ ಹಿ
ಕಾಯಲು ಮುಂದಾಗಬೇಕು – ಎಂದ
ಅವರು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಸಿಐಟಿಯು ಉಡುಪಿ
ಜಿಲ್ಲಾ ಸಮಿತಿ ಅಧ್ಯಕ್ಷ ದಾಸು ಭಂಡಾ
ಅಕ್ಷರ ದಾಸೋಹ ಜಿಲ್ಲಾ ಸಂಘದ ಪ್ರಧಾ
ಕಾರ್ಯದರ್ಶಿ ಸುನಂದಾ, ಉಪಾಧ್ಯಕ್ಷ ದೋಗ
ಸುವರ್ಣ, ಕೆ.ಲಕ್ಷ್ಮಣ, ಸುಜಾತ ಶೆಟ್ಟಿ, ಕಮಲ
ಮತ್ತಿತರರು ಉಪಸ್ಥಿತರಿದ್ದರು.

ತಣ್ಣೀರುಬಾವಿ ಬಡವರಿಗೆ ಹಕ್ಕುಪತ್ರ ಒತ್ತಾಯ

ಜುಲಾಯಿ 29, 2013 ರಂದ
ಮಂಗಳೂರು ಜಿಲ್ಲಾಧಿಕಾರಿ ಕಚೇರಿ ಎದುರ
ದಲಿತ ಹಕ್ಕುಗಳ ಸಮಿತಿ ಮತ್ತು ಸಿಪಿಐ(ಎಂ
ಮಂಗಳೂರು ನಗರ ಸಮಿತಿ ನೇತೃತ್ವದ
ತಣ್ಣೀರುಬಾವಿ ಪ್ರದೇಶದ ಬಡಕುಟುಂಬಗಳಿ
ಹಕ್ಕುಪತ್ರ ನೀಡಲು ಒತ್ತಾಯಿಸಿ ಪ್ರತಿಭಟ
ನಡೆಸಲಾಯಿತು.


ಪ್ರತಿಭಟನೆಯನ್ನು ಉದ್ಘಾಟಿ
ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿ ಸದಸ



ಕೃಷ್ಣಪ್ಪ ಕೊಂಚಾಡಿ, ಹಲವಾರು ವರ್ಷಗಳಿಂ
ತಣ್ಣೀರುಬಾವಿಯಲ್ಲಿ ವಾಸವಾಗಿರು
ಮುನ್ನೂರಕ್ಕೂ ಮೀರಿದ ಕುಟುಂಬಗಳಿ
ಜಿಲ್ಲಾಡಳಿತ ಹಕ್ಕುಪತ್ರ ನೀಡದಿರುವುದರಿಂ
ವಿದ್ಯುತ್, ಬ್ಯಾಂಕ್‌ಸಾಲ ಇನ್ನಿತ
ಹಲವಾರು ಸೌಕರ್ಯಗಳಿಂದ ಅಲ್ಲಿನ ಜನ
ವಂಚಿತರಾಗಿದ್ದಾರೆ. ನಿವಾಸಿಗಳಲ್ಲಿ ಹೆಚ್ಚಿನ

ಪುಟ 15

ಜನಶಕ್ತಿ
ಕನ್ನಡ ವಾರಪತ್ರಿಕೆ



ಒಬ್ಬ ಶ್ರೇಷ್ಠ ಕ್ರಾಂತಿಕಾರಿ ಸಮರ್ ಮುಖರ್ಜಿಯವರ ಒಂದು ಭಾವ ಚಿತ್ರಣ

–ವಿಜೆಕೆ ನಾಯರ್

ಸಮರ ಎಂದರೆ ಹೋರಾಟ ಎಂದರ್ಥ. ಮುಖರ್ಜಿ ಎಂಬುದು ಮುಖ್ಯೋಪಾಧ್ಯಾಯ ಅಥವಾ ಮುಖ್ಯ ಶಿಕ್ಷಕ ಎಂಬರ್ಥದ ಆಂಗ್ಲ ರೂಪ. ಸಮರ ಮುಖರ್ಜಿಯವರು [illegible]ಮಂತವರು ಕ್ರಾಂತಿಕಾರಿಗಳಾಗುವ ನಿಟ್ಟಿನಲ್ಲಿ ಪ್ರೇರೇಪಿಸುವ ಮುಖ್ಯ ಶಿಕ್ಷಕರಷ್ಟೇ ಆಗಿರಲಿಲ್ಲ. ಅವರು ತಾವು ಭೋಧನೆ ಮಾಡಿದ್ದನ್ನು ಪರಿಪೂರ್ಣವಾಗಿ ಪಾಲಿಸಿದವರು. ಅವರು ಎಷ್ಟು ಉತ್ತಮ ಕ್ರಾಂತಿಕಾರಿಯೆಂದರೆ ಕಾಂ. ಜ್ಯೋತಿ ಬಸು ಅವರು ಸಮರ್ ಅವರನ್ನು "ದೇವರ ಸ್ವಂತ ಮನುಷ್ಯ" ಎಂದೇ ವರ್ಣಿಸುತ್ತಿದ್ದರು. ಅವರ ಈ ಎಂಥವರೆಂದರೆ ಅವರು ಬಂಗಾಳದ ಅತ್ಯುನ್ನತ ಕ್ರಾಂತಿಕಾರಿಗಳಾಗಿದ್ದರಷ್ಟೇ ಅಲ್ಲ; ಇಡೀ ಬಂಗಾಲದ ಚಿತ್ರಣವನ್ನೇ ಬದಲಾಯಿಸುವ ಕಮ್ಯುನಿಸ್ಟ್ ಚಳುವಳಿಯ ಅಗ್ರಗಣ್ಯ ನಾಯಕರಲ್ಲಿ ಒಬ್ಬರಾಗಿದ್ದರು. ಅವರು ನೂರು ವರ್ಷ ಬಾಳಿ ಆ [illegible]ದಲ್ಲೂ ಸಾರ್ಥಕತೆ ಮೆರೆದಿದ್ದರು. ಮಹಾನ್ ಅಕ್ಟೋಬರ್ ಕ್ರಾಂತಿಗೆ ನಾಲ್ಕು ವರ್ಷ ಮೊದಲು ಅಂದರೆ 1913 ರ ನವೆಂಬರ್ 7 ರಂದು ಅವರು ಹೌರಾ ಜಿಲ್ಲೆಯಲ್ಲಿ ಜನಿಸಿದರು. ವಿದ್ಯಾರ್ಥಿಯಾಗಿ ರಾಷ್ಟ್ರೀಯ ಹೋರಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡ ಕ್ರಾಂತಿಕಾರಿ ಅವರಾಗಿದ್ದರು. ಕಮ್ಯೂನಿಸ್ಟ್ ಪಕ್ಷದ ಸದಸ್ಯತ್ವ ಅವರಿಗೆ 1940ರಲ್ಲಿ ದೊರೆಯಿತು. 1947 ರಿಂದ 1971 ರವರೆಗೆ ಅವರು ಶಾಸಕರಾಗಿದ್ದರು. 1971 ರಿಂದ 1986 ರವರೆಗೆ ಅವರು ಲೋಕಸಭೆಯ ಸದಸ್ಯರಾಗಿದ್ದರು. 1977ರಿಂದ 1986 ರವರೆಗೆ ಅವರು ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದರು. ಅವರು ಎರಡು ಅವಧಿಗಳ ಕಾಲ ರಾಜ್ಯ ಸಭೆಯ ಸದಸ್ಯರಾಗಿದ್ದರು. [illegible] ಕೊನೆಯವರೆಗೂ ಸಿಪಿಐ(ಎಂ) ಕೇಂದ್ರ ಸಮಿತಿಯ ಸದಸ್ಯರಾಗಿದ್ದರು. ಪ್ರಸಕ್ತ ಕೇಂದ್ರ ಸಮಿತಿಯ ವಿಶೇಷ ಆಹ್ವಾನಿತರಾಗಿದ್ದ ಅವರು 1991 ರಿಂದ ಕಂಟ್ರೋಲ್ ಕಮಿಷನ್ನಿನ ಅಧ್ಯಕ್ಷರಾಗಿದ್ದರು. ಅವರು 1978 ರಿಂದ 91 ರವರೆಗೆ ಪೊಲಿಟ್ ಬ್ಯುರೋ ಸದಸ್ಯರಾಗಿದ್ದರು. ಅವರು 1983 ರಿಂದ 1991 ರವರೆಗೆ ಸಿಐಟಿಯುವಿನ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿಯಾಗಿದ್ದರು. ಇದಕ್ಕೂ ಮೊದಲು ಅವರು ಅದರ ಖಜಾಂಚಿಯಾಗಿದ್ದರು. ಇವೆಲ್ಲ ಗೊತ್ತಿರುವ ವಿಷಯಗಳೇ. ದಾಖಲೆಗಾಗಿ ಹೇಳಿರುವುದು ಅಷ್ಟೆ.

ಇಂದಿನ ಪೀಳಿಗೆಗೆ ಅವರ ಬಗ್ಗೆ ಗೊತ್ತಿಲ್ಲದೆ ಇರುವ ವಿಷಯವೆಂದರೆ [illegible]ರು ನಮ್ಮಲ್ಲಿ ಬಹುತೇಕರಿಗೆ ದುಡಿಯುವ ವರ್ಗದ ನಾಯಕತ್ವ ಮತ್ತು ಅದನ್ನು ರೂಪಿಸುವಲ್ಲಿ ಮತ್ತು ಮುಂದುವರೆಸುವಲ್ಲಿ ಕಮ್ಯೂನಿಸ್ಟರ ಬಹುಮುಖ್ಯ ಪಾತ್ರದ" ಬಗ್ಗೆ. ಅವರು ನಮಗೆ ಕಲಿಸಿದ್ದು: "ಫ್ಯಾಕ್ಟರಿಗಳಲ್ಲಿ ಕನಿಷ್ಠ ಶೇ.10 ರಷ್ಟು ಜನ ಕಮ್ಯೂನಿಸ್ಟರಾಗದೇ; ಈ ಫ್ಯಾಕ್ಟರಿ ದ್ವಾರಗಳಲ್ಲಿ ಕಮ್ಯೂನಿಸ್ಟರು ಕಾರ್ಮಿಕರ ನಾಯಕತ್ವ ವಹಿಸದೆ; ಕಮ್ಯೂನಿಸ್ಟರು ಆದರ್ಶದಿಂದ ನಡೆದುಕೊಳ್ಳುತ್ತಾ ಪ್ರತಿತಿಂಗಳು ಸಹಾನುಭೂತಿಪರರಿಂದ ಫ್ಯಾಕ್ಟರಿ ದ್ವಾರಗಳಲ್ಲಿ ಪಕ್ಷಕ್ಕೆ ನಿಧಿ ಸಂಗ್ರಹಿಸದೆ; ಕಮ್ಯೂನಿಸ್ಟರು ಧ್ವಜಗಳನ್ನು ಹಿಡಿದು ಫ್ಯಾಕ್ಟರಿ ದ್ವಾರಗಳಲ್ಲಿ ಪ್ರತಿ ಪ್ರತಿಭಟನೆಯಲ್ಲೂ ಪಾತ್ರವಹಿಸದೆ; ಬೀದಿಗಳ ಮೂಲಕ ಕಾರ್ಮಿಕರ ನಾಯಕತ್ವ ವಹಿಸಿ ಅವರನ್ನು ಮುನ್ನಡೆಸದೆ; ಕಾರ್ಮಿಕರ ವಸತಿಗಳಿಗೆ ಹೋಗಿ ಇನ್ನೂ ಒಳ್ಳೆಯ ಜೀವನ ಸೌಲಭ್ಯಗಳಿಗಾಗಿ ಹೋರಾಡುತ್ತಾ, ಈ ಹೋರಾಟಗಳಿಗೆ ಅವರ ಬೆಂಬಲ ಅಣಿನೆರೆಸದೆ ದುಡಿಯುವ ವರ್ಗದ ನಾಯಕ ಪಾತ್ರ ಆಧುನಿಕ ಸಮಾಜದಲ್ಲಿ ಸಾಮಾಜಿಕ ಆರ್ಥಿಕ ಬದಲಾವಣೆಯನ್ನು ತರಲು ಸಾಧ್ಯವಾಗದು."

ಕಾಂ. ಸಮರ್ ಮಾರ್ಕ್ಸ್ ಮತ್ತು ಲೆನಿನ್ನರ ಕ್ಲಾಸಿಕ್‌ಗಳ ಮೇಲೆ ಮತ್ತು ಪಕ್ಷದ ದಸ್ತಾವೇಜುಗಳ ಮೇಲೆ ಅವಲಂಬಿಸಿ ಲೈನುಗಳನ್ನು ನಮಗೆ ವಿವರಿಸಿ ಬದಲಾವಣೆಗೆ ಮೂಲ ಶಕ್ತಿ ಹೇಗೆ ಪಕ್ಷ ಮತ್ತು ದುಡಿಯುವ ವರ್ಗ ಎಂಬುದನ್ನು ವಿಷದ ಪಡಿಸುತ್ತಿದ್ದರು. ಸಾಮೂಹಿಕ ಸಂಘಟನೆಗಳು ಸಾಮಾಜಿಕ ಆರ್ಥಿಕ ಬದಲಾವಣೆಯ ಚಕ್ರಗಳು, ಟ್ರೇಡ್ ಯೂನಿಯನ್‌ಗಳು ದುಡುಯುವ ವರ್ಗದ ಚಕ್ರಗಳು ಮತ್ತು ಈ ಚಕ್ರಗಳನ್ನು ಚಲನ ಶಕ್ತಿಗೆ ಜೋಡಿಸುವ ಕ್ರಾಂಕ್ ಶಾಫ್ಟ್‌ಗಳೆಂದರೆ ಸಿಐಟಿಯುನಂತಹ ಬದ್ಧ ಫೆಡರೇಶನ್‌ಗಳು ಎಂಬುದನ್ನೂ ಅವರು ವಿವರಿಸಿ ಹೇಳುತ್ತಿದ್ದರು. ಅವರ ಈ ಜೀವಂತ ಧೃಷ್ಟಾಂತಗಳು ದುಡಿವ ವರ್ಗದ ಜನರ ಕಲ್ಪನೆಗಳನ್ನು ತಟ್ಟುತ್ತಿದ್ದವು. ದುಡಿಯುವ ಜನರನ್ನು ಅವರ ಈಗಿನ ಪರಿಸರದಿಂದ ನೂರಾರು ಮೈಲಿ ದೂರ ಬೇರೆ ದುಡಿವ ಜನರ ಉತ್ತಮ ಪರಿಸರಗಳನ್ನು ತೋರಿಸದೆ ಜೀವನ ಪರಿಸ್ಥಿತಿಗಳ ಕಲ್ಪನೆ ಬದಲಾಯಿಸಿ ಅವರ ಧೋರಣೆಗಳನ್ನು ರೂಪಿಸಲು ಸಾಧ್ಯವಿಲ್ಲ ಎಂಬುದನ್ನು ಅವರು ನಮಗೆ ಹೇಳುತ್ತಿದ್ದರು.


ನಾಯಕರುಗಳ ಪೈಕಿ ಸಮರ್ ಅವರ ಪಕ್ವತೆ ಇಲ್ಲದೆ ಇರುವವರಿಗೆ ಮತ್ತು ಇಂತಹ ಪಕ್ವತೆ ಕಷ್ಟ ಸಾಧ್ಯವಾಗುವವರಿಗೆ ಅವರು ಅತಿಶಯ ಆಶಯ ಹೊಂದಿದವರಂತೆ ಕಾಣುತ್ತಿದ್ದರು. ಅವರು ಪಕ್ಷದ ನಿಯಮಗಳ ನಿಷ್ಠುರ ಪಾಲನೆ ನಿರೀಕ್ಷಿಸುತ್ತಿದ್ದರು. ಅವರು ಸಿಐಟಿಯು ಪ್ರಧಾನ ಕಾರ್ಯದರ್ಶಿಗಳಾಗಿದ್ದ ಸಮಯದಲ್ಲಿ ಅವರು ಅಧ್ಯಕ್ಷರಾಗಿದ್ದ ಕಾಂ. ಬಿ ಟಿ ರಣದಿವೆ ಅವರ ಅಧ್ಯಕ್ಷೀಯ ಭಾಷಣದಲ್ಲಿನ ದಿಕ್ಸೂಚಿಗಳಂತೆ ನಡೆದುಕೊಳ್ಳುತ್ತಿದ್ದರು. ಅವರು ಅಧ್ಯಕ್ಷೀಯ ಭಾಷಣದ ಪ್ರಕಾರವೇ ತಮ್ಮ ವರದಿಗಳನ್ನು ತಯಾರಿಸಿ ಅದನ್ನು ಬಹಳ ಮುತುವರ್ಜಿಯಿಂದ ಸಿಐಟಿಯು ಅನುಷ್ಠಾನ ಮಾಡುವಂತೆ ನೋಡಿಕೊಳ್ಳುತ್ತಿದ್ದರು. ಐಎಂಎಫ್ ಶರತ್ತುಗಳಿಗನುಸಾರವಾಗಿ ನಡೆದುಕೊಳ್ಳುತ್ತಿದ್ದ ಇಂದಿರಾ ಅವರ ತುರ್ತು ಪರಿಸ್ಥಿತಿ ನಂತರದ ಅಧಿಕಾರಾವಧಿಯಲ್ಲಿ ಇಂತಹ ಪರಿಪೂರ್ಣತೆಯ ಜೋಡಿ ಸಿಐಟಿಯುವಿನ ನಾಯಕತ್ವ ವಹಿಸಿದ್ದು ಸಿಐಟಿಯುವಿನ ಅದೃಷ್ಟವೆ ಸರಿ. ಐಎಂಎಫ್‌ನ ಶರತ್ತುಗಳನ್ನು ಸಿಐಟಿಯು ಸತತವಾಗಿ ವಿರೋಧಿಸಿತು (ಬಿಟಿಆರ್ ಅವರ ಕೊನೆಯ ಅವಧಿಗಳೂ ಇವಾಗಿದ್ದವು).

ಪಾರ್ಲಿಮೆಂಟಿನ ನಡಾವಳಿಗಳ ಒತ್ತಡಗಳಿಗೆ ನಲುಗದೆ ಸಮರ್ ಅವರ ಭಾಷಣಗಳು ಪಕ್ಷದ ನೀತಿಗಳನ್ನು ಸದಾ ಪ್ರತಿನಿಧಿಸುತ್ತಿದ್ದವು. ಹೈದರಾಬಾದ್‌ನಲ್ಲಿ ನಡೆದ 17ನೇ ಸಮಾವೇಶದಲ್ಲಿ ಒಂದು ಕಷ್ಟಕರ ಸನ್ನಿವೇಶ ಎದುರಾಯಿತು. ಕೇರಳ ರಾಜ್ಯ ಸಮಿತಿ 'ಮಾರ್ಕ್ಸಿಸ್ಟರನ್ನು ಉಳಿಸಿ ವೇದಿಕೆ' ಯೊಂದಿಗೆ ಸಂಬಂಧ ಹೊಂದಿದ್ದ ಒಂದು ನಾಯಕ ತಂಡದ ಮೇಲೆ ಕ್ರಮಕೈಗೊಂಡಿತ್ತು. ಅವರು ಕಂಟ್ರೋಲ್ ಕಮಿಷನ್ ಮಧ್ಯ ಪ್ರವೇಶಿಸಿ ತಮ್ಮನ್ನು ರಕ್ಷಿಸಬೇಕೆಂದು ಕೋರಿದರು. ಕಂಟ್ರೋಲ್ ಕಮಿಷನ್‌ನ ಅಧಿಕಾರವನ್ನು ಈ ದಿಸೆಯಲ್ಲಿ ಮೊಟಕುಗೊಳಿಸಬೇಕೆಂದು ಗೊತ್ತುವಳಿ ಮಂಡಿಸಲು ಪ್ರಯತ್ನಿಸಲಾಯಿತು. ಪಕ್ಷದ ಸಮಾವೇಶ ಕೇರಳ ರಾಜ್ಯಸಮಿತಿ ತೆಗೆದುಕೊಂಡ ಕ್ರಮಗಳನ್ನು ಅನುಮೋದಿಸಿ ಸನ್ನಿವೇಶವನ್ನು ನಿಭಾಯಿಸಿತು. ಕಂಟ್ರೋಲ್ ಕಮಿಷನ್‌ನ ಅಧಿಕಾರಗಳನ್ನು ಮೊಟಕುಗೊಳಿಸುವ ಪ್ರಮೇಯವೇ ಬರಲಿಲ್ಲ.

ಕಾಂ. ಸಮರ್ ಅವರ ಬಗೆಗಿನ ಒಂದು ಬಹುಪ್ರಚಲಿತ ವಿಷಯವೆಂದರೆ ಅವರು ಅವರ ವಿದ್ಯಾರ್ಥಿ ದಿನಗಳನ್ನು ಹೊರತು ಪಡಿಸಿದರೆ ಉಳಿದ ದಿನಗಳನ್ನು ಪಕ್ಷದ ಕಮ್ಯೂನ್‌ಗಳಲ್ಲೇ ಕಳೆದರು ಎಂಬುದು. ಅವರು ತಮ್ಮಲ್ಲಿನ ಎಲ್ಲ ಹೆಚ್ಚಿನ ಹಣಕಾಸನ್ನು (ಪಕ್ಷ ನೀಡುವ ಅಲ್ಪ ಹಣಕಾಸಿನಲ್ಲೂ ಉಳಿತಾಯ ಮಾಡಿ) ಪಕ್ಷಕ್ಕೆ ಒಪ್ಪಿಸುತ್ತಿದ್ದರು ಎಂಬುದು.

ಹೀಗೆ ಸಮರ್ ಅವರನ್ನು ಅವರ ಹೆಸರಿನಂತೆ ಇರುವ ಕ್ರಾಂತಿಯ ಜೊತೆಗೆ ಗುರುತಿಸಬಹುದು. ಕ್ರಾಂತಿಯ(ಸ್ವಾತಂತ್ರ್ಯ ಮತ್ತು ಸಮಾಜವಾದಿ ಹೋರಾಟಗಳು), ಕ್ರಾಂತಿಯಿಂದ (ಸದಾ ದುಡಿವವರ್ಗದಿಂದ ಪೋಷಿತ) ಮತ್ತು ಕ್ರಾಂತಿಗಾಗಿ (ಪಕ್ಷ ಮತ್ತು ಸಾಮಾಜಿಕ ಬದಲಾವಣೆಗಾಗಿ ಬದುಕುವುದು)

ಸಮರ್ ಮುಖರ್ಜಿ= ಶ್ರೇಷ್ಠ ಕ್ರಾಂತಿಕಾರಿ. ಸಮರ್ ಅವರನ್ನು ಅನುಕರಿಸುವುದು ಕಷ್ಟಕರ. ಆದರೆ ಅವರಂತೆ ದುಡಿವ ವರ್ಗದ ಕ್ರಾಂತಿಕಾರಿ ರೀತಿಗಳಿಂದ ಬದುಕಲು ಪ್ರಯತ್ನಿಸುವುದು ಒಳ್ಳೆಯದು.



ಮೋದಿಯ ಅನಾಗರಿಕತೆ ಮತ್ತು 'ಕುತ್ತೇ ಕ ಬಚ್ಚಾ' ಎಂಬ ಹೋಲಿಕೆ

ಬೃಂದಾಕಾರಟ್
ಕನ್ನಡಕ್ಕೆ-ಸಿಮ್ಮಿಸಿ


2014ರ ಬಿಜೆಪಿ ಚುನಾವಣಾ ಪ್ರಚಾರದ ನಾಯಕತ್ವ ವಹಿಸಿರುವ ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿ ಇತ್ತೀಚಿನ ಪ್ರಚಾರದ ಮೂಲಕ ಮತೀಯವಾಗಿ ಅಥವಾ ಧರ್ಮದ ಆಧಾರದಲ್ಲಿ ಮತದಾರರ ಧ್ರುವೀಕರಣ ಮಾಡುತ್ತಿದ್ದಾರೆ. ದ್ವೇಷದ ಆಧಾರದಲ್ಲಿ ಮತಗಳ ಧ್ರುವೀಕರಣವಲ್ಲದೆ ಬೇರಾವ ರೀತಿಯಿಂದಲೂ ಬಿಜೆಪಿ ಚುನಾವಣೆಯಲ್ಲಿ ಯಶಸ್ಸುಗಳಿಸಲು ಸಾಧ್ಯವಿಲ್ಲ ಎಂದು ಆರ್‌ಎಸ್‌ಎಸ್ ನಂಬಿಕೊಂಡಿದೆ. ಕಾಂಗ್ರೆಸ್ ತನ್ನ ತಪ್ಪನ್ನು ಮುಚ್ಚಿಕೊಳ್ಳಲು ಜಾತ್ಯತೀತತೆ ಎಂಬ ಬುರ್ಖಾದೊಳಗೆ ತೂರಿಕೊಳ್ಳುತ್ತದೆ ಎಂಬ ಮೋದಿಯ



ಕೆಲವು ಭಾಷಣಗಳು ವ್ಯಾಪಕ ಚರ್ಚೆಗೆ ಗ್ರಾಸವಾಗಿವೆ. ಗುಜರಾತ್ ಮಾದರಿ ಎಂಬ ಅಭಿವೃದ್ಧಿಯ ಅಜೆಂಡಾವನ್ನು ಪ್ರತಿಫಲಿಸಲಾಗುತ್ತದೆ ಎಂದು ಹೇಳಲಾಗಿದ್ದರೂ ಭಾಷಣ ಕೀಳು ಅಭಿರುಚಿ ಹಾಗೂ ಬಹುತೇಕ ಅನಾಗರಿಕತೆಯಿಂದಾಗಿ ಕೂಡಿದ್ದಾಗಿದೆ.

'ಅಭಿವೃದ್ಧಿ ಅಜೆಂಡಾ'ದ ಆಧಾರದಲ್ಲಿ ಬಿಜೆಪಿಯ ಚುನಾವಣಾ ಸಾರಥ್ಯದ ಅತ್ಯುನ್ನತ ಸ್ಥಾನಕ್ಕೆ ಮೋದಿಯನ್ನು ಆರ್‌ಎಸ್‌ಎಸ್ ಆರಿಸಿದೆ ಎನ್ನಲಾಗಿದ್ದರೂ ಇದನ್ನು ಸಂಘಪರಿವಾರದ ರಾಜಕೀಯ ವರಸೆಗಳ ಗಂಧಗಾಳಿ ಅರಿಯದ ಅನನುಭವಿಗಳು ಮುಗ್ಧರಷ್ಟೆ ನಂಬಿರಬಹುದು. ಕಾರ್ಪೊರೇಟ್ ಕಾನ್‌ಕ್ಲೇವ್‌ನಲ್ಲಿ (ಕೈಗಾರಿಕಾ ಮಹಾಧಿವೇಶನದಲ್ಲಿ) ಗುಜರಾತನ್ನು ತಾನು ಹೇಗೆ ಬದಲು ಮಾಡಿದೆ ಎಂಬ ಬಗ್ಗೆ ಮೋದಿ ಮಾಡಿದ ಭಾಷಣವನ್ನು ಹಲವು ಪತ್ರಿಕೆಗಳು ಮೆಚ್ಚಿಕೊಂಡವು. ಕೆಲವೊಂದು ಪತ್ರಿಕೆಗಳೂ ತಮ್ಮ ಸಂಪಾದಕೀಯದ ಮೂಲಕ ಮೋದಿ ಮತ್ತೆ ಅಭಿವೃದ್ಧಿಯ ಹಳಿಗೆ ಮರಳಲಿ ಎಂದು ಒತ್ತಾಯಿಸಿದವು. ಇಲ್ಲಿ ಅಭಿವೃದ್ಧಿ ಎಂಬುದನ್ನು 'ಕಾರ್ಪೊರೇಟ್ ಅಜೆಂಡಾ'ಎಂದು ಓದಿಕೊಳ್ಳಬೇಕಷ್ಟೆ.

ನಿಜವಾಗಿಯೂ ತನ್ನನ್ನು ಯಾತಕ್ಕಾಗಿ ಆಯ್ಕೆ ಮಾಡಲಾಗಿದೆಯೋ ಮೋದಿ ಅದನ್ನೇ ಮಾಡುತ್ತಿದ್ದಾರೆ. ಕೋಮುವಾದಿ



ಪ್ರಚೋದನಕಾರಿ ಮಾತುಗಳೇ ಇದಕ್ಕೆ ಸಾಕ್ಷಿ. ಬಾಬರಿ ಮಸೀದಿ ಧ್ವಂಸದ ಮುನ್ನ ಮತ್ತು ಆ ಬಳಿಕ ಕಂಡುಬಂದ ಪ್ರಚೋದಕತ್ವ ಈ ಭಾಷೆಯಲ್ಲಿ ಸ್ಪಷ್ಟವಾಗಿ ಎದ್ದುಕಾಣುತ್ತದೆ.

ಇದಕ್ಕೂ ಮುಂಚೆ ಮೋದಿ 2002ರ ಗುಜರಾತ್ ನರಮೇಧದಲ್ಲಿ ಮೃತಪಟ್ಟವರ ಬಗ್ಗೆ ಅತ್ಯಂತ ಹೇಯವಾದ ಹಾಗೂ ಕೀಳುಮಟ್ಟದ ಅನಾಗರಿಕ ಭಾಷೆ ಬಳಸಿದ್ದರು. 'ನಾಯಿಯ ಮರಿಯೊಂದು ಕಾರಿನಡಿ ಬಿದ್ದು ಮೃತಪಟ್ಟಾಗ ಯಾರಿಗೇ ಆದರೂ ದು:ಖವಾಗುತ್ತದೆ' ಎಂದಿದ್ದರು. ಈ ವಿಷಯದಲ್ಲಿ ಕೆಲವು ಇಂಗ್ಲಿಷ್ ಪತ್ರಿಕೆಗಳು 'ಕುತ್ತೆ' ಎಂಬ ನಿಂದನಾತ್ಮಕ ಪದ-ಕ್ಕೆ ನಯವಾದ 'ಪಪ್ಪಿ' ಎಂಬ ಪದ ಬಳಸಿ ಮೋದಿಯ ಬೆಂಗಾವಲಿಗೆ ನಿಂತವು. ಕುತ್ತೇ ಕಾ ಬಚ್ಚಾ ಎಂಬ ಪದದ ಭಾಷಾಂತರದಲ್ಲಿ 'ಪಪ್ಪಿ' ಎಂಬ ಶಬ್ದ ಸರಿ ಹೊಂದುವುದಿಲ್ಲ.

ಇದಕ್ಕೆ ತೀವ್ರ ವಿರೋಧ ವ್ಯಕ್ತವಾಗುತ್ತಿದ್ದಂತೆಯೇ ಟ್ವಿಟ್ಟರ್‌ನಲ್ಲಿ ನರೇಂದ್ರ ಮೋದಿ ಒಂದು ಪ್ರತಿಕ್ರಿಯೆ ನೀಡಿದರು. "ನಮ್ಮ ಸಂಸ್ಕೃತಿಯಲ್ಲಿ ಎಲ್ಲ ಜೀವಿಗಳನ್ನೂ ಪೂಜ್ಯ ಮನೋಭಾವದಿಂದ ನೋಡಲಾಗುತ್ತಿದೆ" ಎಂದು ಟ್ವೀಟ್ ಮಾಡಿದ್ದರು. ಬಹುಷಃ, ಇದು ಮುಸ್ಲಿಂ ಮತ್ತು ಕ್ರಿಶ್ಚಿಯನ್ ಅವರನ್ನು ಹೊರತುಪಡಿಸಿ ಎಂದು ಮೋದಿ ಸೇರಿಸಬಹುದಿತ್ತು.

ಇನ್ನೊಂದು ಕೋನದಿಂದ ಈ ಹೇಳಿಕೆಯನ್ನು ನೋಡಬಹುದು. ಮೋದಿಯ 'ಕುತ್ತೇ ಕಾ ಬಚ್ಚಾ' ಪದದ ಹಿಂದಿನ ಕಾಳಜಿ ಹಿಟ್ಲರನ ನಾಯಿ ಪ್ರೀತಿಯ ತರಹ ಇದೆ. 1933ರಲ್ಲಿ ಆಗಿನ ಜರ್ಮನ್ ಸರ್ಕಾರ ಇಡೀ ಜಗತ್ತಿನಲ್ಲೇ ಅತಿ ಸಮಗ್ರವಾದ ಪ್ರಾಣಿ ರಕ್ಷಣೆ ಮತ್ತು ಹಕ್ಕುಗಳ ಕಾಯಿದೆಯನ್ನು ರೂಪಿಸಿತು. ಇದರ ಮೊದಲ ಹೆಜ್ಜೆ ಎಂಬಂತೆ ಪ್ರಾಣಿಗಳ ರಕ್ಷಣೆಗೆ ಸಾಕಷ್ಟು ಕಾಳಜಿ ವಹಿಸಿತ್ತು. ಮೀನುಗಳನ್ನು ತುಂಡು ಮಾಡುವ ಮೊದಲು ಅರೆವಳಿಕೆ ನೀಡುವುದು, ಸಾವಿನ ಬರ್ಬರತೆಯನ್ನು ಮೀನುಗಳೂ ಅನುಭವಿಸಬಾರದು ಎಂಬ ಕಾಳಜಿಯನ್ನು ಹೊಂದಿತ್ತು. ಅದನ್ನು ಬೇಯಿಸುವಾಗಲೂ ನಿಧಾನ ಉರಿಯಲ್ಲಿ ಬೇಯಿಸುವಂತೆ ತಾಕೀತು ಮಾಡಲಾಗಿತ್ತು.

ನಾಜಿಗಳ ವಿಕೃತವಾದ ಆಲೋಚನಾ ಕ್ರಮದ ಪ್ರಕಾರ ಪ್ರಾಣಿ ಮೇಲಿನ ಪ್ರೀತಿಗೂ ಯಹೂದಿಯರ ನರಮೇಧಕ್ಕೂ ಯಾವುದೇ ವೈರುಧ್ಯಾತ್ಮಕ ನಿಲುವುಗಳಿಲ್ಲ. ನಾಜಿಗಳ ಪ್ರಕಾರ ಯಹೂದಿಯರು ಎಂದರೆ ಎಲ್ಲ ಪ್ರಾಣಿ ಪ್ರಕಾರದ ಅತ್ಯಂತ ಕೆಳಸ್ಥರದ ಮಾನವ ಜಾತಿ. ಅವರನ್ನು ಕ್ರಿಮಿಗಳಿಗೆ ಹೋಲಿಸಬಹುದು ಎಂಬುದು ನಾಜಿಗಳ ವಾದ.

ಅದೇ ರೀತಿಯಲ್ಲಿ ತತ್ವ ಮತ್ತು ಆಚರಣೆ ಎರಡರಲ್ಲೂ ಅಲ್ಪಸಂಖ್ಯಾತರ ಕುರಿತು ದ್ವೇಷವನ್ನು ಬೋಧಿಸುವ 'ಆರ್‌ಎಸ್‌ಎಸ್ ಶಾಲೆಯ ವಿದ್ಯಾರ್ಥಿ' ನರೇಂದ್ರ ಮೋದಿ ತಮ್ಮ ಕಾರಿನ ಚಕ್ರದಡಿ ಸಿಲುಕುವ ನಾಯಿಯ ಬಗ್ಗೆ ವಿಷಾದವನ್ನು ವ್ಯಕ್ತಪಡಿಸಬಹುದು. ಆದ-ರೆ ಇದೇ ವೇಳೆ, 2002ರಲ್ಲಿ ನಡೆದ ನರಮೇಧದಲ್ಲಿ ತನ್ನ ಕಣ್ಣೆದುರೇ ಅಮಾನವೀಯವಾಗಿ ಕೊಚ್ಚಿಹಾಕಲಾದ ಸಹಸ್ರಾರು ಮುಸ್ಲಿಮರು, ಮಹಿಳೆಯರು, ಮಕ್ಕಳ ಬಗ್ಗೆ ಅವರು ಅಂತಹ ನೇರವಾಗಿ ವಿಷಾದ ವ್ಯಕ್ತಪಡಿಸುವುದಿಲ್ಲ.

ಈ ಹೋಲಿಕೆ ಇನ್ನೊಂದು ಕಾರಣ-ಕ್ಕೆ ಅಸಮಂಜಸ ಅನಿಸಬಹುದು. 2002ರ ನರಮೇಧದಲ್ಲಿ ಆಕಸ್ಮಿಕವಾದುದುದೇನೂ ಇಲ್ಲ. ಇದು ಘಟನೆಗೆ ಸಂಬಂಧಿಸಿದಂತೆ ತನಿಖೆ ನಡೆಸಿದ ವಿಶೇಷ ತನಿಖಾ ತಂಡದ ಬೃಹತ್ ದಾಖಲೆಗಳೇ ಈ ಅಂಶವನ್ನು ಸಾರಿ ಸಾರಿ ಹೇಳುತ್ತಿವೆ. ಪ್ರಭುತ್ವವೇ ಕೋಮು ದಂಗೆಯಲ್ಲಿ ಪಾಲ್ಗೊಂಡ ಬಗೆಯನ್ನು ಸ್ವತಃ ವಿಶೇಷ ತನಿಖಾ ತಂಡ(ಸಿಐಟಿ) ದಾಖಲಿಸಿದೆ.

ಹಿಂದೆ ಸುಪ್ರೀಂ ಕೋರ್ಟ್ ರಚಿಸಿದ ಈ ವಿಶೇಷ ತನಿಖಾ ತಂಡದ ನೇತೃತ್ವವನ್ನು ಸಿಬಿಐನ ನಿವೃತ್ತ ನಿರ್ದೇಶಕ ರಾಘವನ್ ವಹಿಸಿದ್ದರು. ಇದೇ ತಂಡ ನರೇಂದ್ರ ಮೋದಿಗೆ ಕ್ಲೀನ್ ಚಿಟ್-ಅಂದರೆ ನಿರ್ದೋಷಿತನ ನೀಡಿ ನಾಚಿಗೇಡಿತನ ಈಗ ಬಯಲಾಗಿದೆ.

ಮೋದಿ ಪರವಾಗಿ ಸಿಐಟಿ ತಾರತಮ್ಯದ ಹಾಗೂ ದೋಷಪೂರಿತ 'ಕ್ಲೀನ್ ಚಿಟ್' ನೀಡಿದೆ ಎಂಬ ಆಕ್ಷೇಪಗಳ ಹಿನ್ನೆಲೆಯಲ್ಲಿ ಸಿಐಟಿಯ ದಾಖಲೆಗಳನ್ನು ಪರಿಶೀಲಿಸಿದ ಕೋರ್ಟ್ ನೇಮಿಸಿದ ತಜ್ಞರ ತಂಡ ನರೇಂದ್ರ ಮೋದಿಗೆ ಕ್ಲೀನ್ ಚಿಟ್ ನೀಡಲು ನಿರಾಕರಿಸಿದೆ. ಮಾತ್ರವಲ್ಲ, 'ಹತ್ಯಾಕಾಂಡದಲ್ಲಿ ಮೋದಿ ಪಾತ್ರದ ಬಗ್ಗೆ ವಿಚಾರಣೆ ನಡೆಸಲು ಸಾಕಷ್ಟು ಸಾಕ್ಷ್ಯಾಧಾರಗಳಿವೆ. ಈ ಬಗ್ಗೆ ಸಿಐಟಿ ಸೂಕ್ತ ಕಾರ್ಯನಿರ್ವಹಣೆ ನಡೆಸಿಲ್ಲ' ಎಂದು ಅದು ಹೇಳಿದೆ. ಗುಲ್ಬರ್ಗಾ ಸೊಸೈಟಿ ಪ್ರಕರಣಕ್ಕೆ ಸಂಬಂಧಿಸಿದಂತೆ ಜಕಿಯಾ ಜಫ್ರಿ ಅರ್ಜಿಯಿಂದಾಗಿ ವಿಶೇಷ ತನಿಖಾ ತಂಡದ ವರದಿ ಬೆಳಕಿಗೆ ಬಂದು ಸಾರ್ವಜನಿಕರಿಗೆ ಸಿಗುವಂತಾಗಿದೆ. ಮೋದಿಗೆ ಸಿಐಟಿ

ಪುಟ 15 ಕ್ಕೆ

ಪ್ರತ್ಯೇಕ ತೆಲಂಗಾಣ ರಾಜ್ಯ



ಹೊಸ ತೆಲಂಗಾಣ ರಾಜ್ಯದ ಪ್ರಶ್ನೆಯ ಮೇಲೆ ಕಾಂಗ್ರೆಸ್ ಪಕ್ಷದ ತೂಗಾಟ ಹೊಸದೇನೂ ಅಲ್ಲ. ನಾಲ್ಕು ದಶಕಗಳಿಗೂ ಹೆಚ್ಚು ಕಾಲದಿಂದ ಅದು ನಡೆದು ಬಂದಿದೆ. ಕೇಂದ್ರದಲ್ಲಿನ ಮತ್ತು ರಾಜ್ಯಗಳಲ್ಲಿನ ಕಾಂಗ್ರೆಸ್ ಪಕ್ಷದ ನೇತೃತ್ವದ ಸರಕಾರಗಳು ಸನ್ನಿವೇಶವನ್ನು ಸರಿಯಾಗಿ ನಿಭಾಯಿಸದೇ ಹೋಗಿರುವುದರಿಂದಾಗಿ ದೇಶದ ಹಲವಾರು ಭಾಗಗಳಿಂದ ಪ್ರತ್ಯೇಕ ರಾಜ್ಯಗಳಿಗಾಗಿ ದೊಡ್ಡ ಸಂಖ್ಯೆಯಲ್ಲಿ ಬೇಡಿಕೆಗಳು ಏಳುವಂತಾಗಿದೆ. ವಿವಿಧ ಐಡೆಂಟಿಟಿಗಳ ಆಧಾರದಲ್ಲಿ ಹೊಸ-ಹೊಸ ರಾಜ್ಯಗಳ ನಿರ್ಮಾಣಕ್ಕೆ ಕರೆಗಳು ಬರುತ್ತಿದ್ದು, ಇದು ಭಾರತೀಯ ಸಂವಿಧಾನದ ಒಕ್ಕೂಟ ಸತ್ವಕ್ಕೆ ಮತ್ತು ಸ್ವರೂಪಕ್ಕೆ ಮಾತ್ರವೇ ಅಲ್ಲ, ದೇಶದಲ್ಲಿ ವಿಚ್ಛಿದ್ರಕಾರಿಯಾಗಬಲ್ಲ ಸೆಳೆತಗಳನ್ನು ಹರಿಯ ಬಿಡುವ ಗಂಭೀರ ಪರಿಣಾಮಗಳನ್ನು ಕೂಡ ಉಂಟು ಮಾಡಬಹುದು.

ಸೀತಾರಾಂ ಯೆಚುರಿ

ವರ್ಷಾನುಗಟ್ಟಲೆ ತೂಗಾಟದ ನಂತರ ಕಾಂಗ್ರೆಸ್ ಪಕ್ಷದ ಕಾರ್ಯಕಾರಿ ಸಮಿತಿ, ಈಗಿರುವ ಆಂಧ್ರಪ್ರದೇಶ ರಾಜ್ಯದಿಂದ ಕಡೆದು ತೆಗೆಯುವ ತೆಲಂಗಾಣ ರಾಜ್ಯವನ್ನು ಮುಂಬರುವ ತಿಂಗಳುಗಳಲ್ಲಿ ಶೀಘ್ರದಲ್ಲಿಯೇ ರಚಿಸಲಾಗುವುದು ಎಂಬ ಒಂದು ಒಮ್ಮತದ ನಿರ್ಣಯವನ್ನು ಅಂಗಿಕರಿಸಿದೆ. ಆದರೆ ಈ ನಿರ್ಧಾರ ವಾಸ್ತವಗೊಳ್ಳಬೇಕಾದರೆ ಹಲವು ಕ್ರಮಗಳನ್ನು ಕೈಗೊಳ್ಳಬೇಕಾಗಿದೆ.





ಕೇಂದ್ರ ಸಂಪುಟ ತೆಲಂಗಾಣದ ಪ್ರತ್ಯೇಕ ರಾಜ್ಯ ರಚನೆಯ ಈ ನಿರ್ಧಾರಕ್ಕೆ ಮಂಜೂರಾತಿ ನೀಡಿದ ನಂತರ, ಕೇಂದ್ರ ಸರಕಾರ ಈಗಿರುವ ಆಂಧ್ರಪ್ರದೇಶದ ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನಿಂದ ಪ್ರತ್ಯೇಕವಾಗಿ ಈ ಹೊಸ ರಾಜ್ಯದ ರಚನೆಗಾಗಿ ನಿರ್ಣಯಗಳನ್ನು ಕೇಳುತ್ತದೆ. ಭಾರತದ ರಾಷ್ಟ್ರಪತಿಗಳು ಅವನ್ನು ಪಡೆದು ಕೇಂದ್ರ ಸಂಪುಟಕ್ಕೆ ರವಾನಿಸುತ್ತಾರೆ. ಅದು ಆಗ ಒಂದು ಮಂತ್ರಿಗಳ ಗುಂಪ(ಜಿಒಎಂ)ನ್ನು ರಚಿಸುತ್ತದೆ. ಅದು ಈಗಿರುವ ಆಂಧ್ರಪ್ರದೇಶ ರಾಜ್ಯವನ್ನು ಇಬ್ಭಾಗ ಮಡುವ ವಿವರಗಳನ್ನು ಮತ್ತು ಪ್ರಕ್ರಿಯೆಯನ್ನು ರೂಪಿಸುತ್ತದೆ. ಈ ಯೋಜನೆಗಳನ್ನು ಪಡೆದ ನಂತರ ರಾಷ್ಟಪತಿಗಳು ಇದನ್ನು ಆಂಧ್ರಪ್ರದೇಶ ವಿಧಾನ ಸಭೆಗೆ ಒಂದು ಸಮಯ ಚೌಕಟ್ಟಿನೊಳಗೆ ತನ್ನ ಅಭಿಪ್ರಾಯಗಳನ್ನು ತಿಳಿಸಲು ಕಳಿಸುತ್ತಾರೆ. ನಂತರ ಕೇಂದ್ರ ಸಂಪುಟ ಒಂದು ಕರಡು ಮಸೂದೆಯನ್ನು ತಯಾರಿಸಿ, ಅದನ್ನು ಮಂಜೂರಾತಿಗಾಗಿ ಲೋಕಸಭೆಯಲ್ಲಿ ಮತ್ತು ರಾಜ್ಯಸಭೆಯಲ್ಲಿ ಪ್ರತ್ಯೇಕವಾಗಿ ಮಂಡಿಸುತ್ತದೆ. ಸಂಸತ್ತು ಅದನ್ನು ಅಂಗೀಕರಿಸಿತೆಂದರೆ ರಾಷ್ಟ್ರಪತಿಗಳು ಹೊಸ ರಾಜ್ಯದ ಜನನದ ದಿನಾಂಕವನ್ನು ನಿರ್ದಿಷ್ಟ ಪಡಿಸುತ್ತಾರೆ. ಆ ನಿರ್ದಿಷ್ಟ ಪಡಿಸಿದ ದಿನದಂದು ಆಂಧ್ರಪ್ರದೇಶ ಮತ್ತು ಕೇಂದ್ರ ಸರಕಾರದ ರಾಜಪತ್ರಗಳಲ್ಲಿ ರಾಷ್ಟ್ರಪತಿಗಳ ಆದೇಶದ ಪ್ರಕಟಣೆಯೊಂದಿಗೆ ತೆಲಂಗಾಣ ರಾಜ್ಯ ಅಸ್ತಿತ್ವಕ್ಕೆ ಬರುತ್ತದೆ.

ವಿಶ್ವಾಸಘಾತದ ಇತಿಹಾಸ

ಹೊಸ ತೆಲಂಗಾಣ ರಾಜ್ಯದ ಪ್ರಶ್ನೆಯ ಮೇಲೆ ಕಾಂಗ್ರೆಸ್ ಪಕ್ಷದ ತೂಗಾಟ ಹೊಸದೇನೂ ಅಲ್ಲ. ನಾಲ್ಕು ದಶಕಗಳಿಗೂ ಹಿಂದೆ(1968ರಿಂದ) ಒಂದು ಹಿಂಸಾತ್ಮಕ ಚಳುವಳಿಯಲ್ಲಿ ಅಪಾರ ಆಸ್ತಿನಾಶ ಮತ್ತು ಪೋಲೀಸದ ಗೋಲೀಬಾರಿನಲ್ಲಿ 300 ಕ್ಕೂ ಹೆಚ್ಚು ಪ್ರಾಣಗಳನ್ನು ಕಳೆದುಕೊಂಡ ನಂತರ ತೆಲಂಗಾಣ ಪ್ರದೇಶದ ಅಭಿವೃದ್ಧಿಗೆ ಮತ್ತು ರಾಜ್ಯದ ಇನ್ನುಳಿದ ಪ್ರದೇಶದ ಹೋಲಿಕೆಯಲ್ಲಿ ಅದರ ಆರ್ಥಿಕ ಹಿಂದುಳಿಕೆಯನ್ನು ನಿವಾರಿಸಲು ಒಂದು ಒಪ್ಪಂದಕ್ಕೆ ಬರಲಾಯಿತು. 1973ರಲ್ಲಿ ಕೇಂದ್ರದ ಆಗಿನ ಕಾಂಗ್ರೆಸ್ ಸರಕಾರ ಸಂವಿಧಾನಕ್ಕೆ 32ನೇ ತಿದ್ದುಪಡಿ ತಂದು ಕಲಮು 371 ಡಿ, "ಆಂಧ್ರಪ್ರದೇಶ ರಾಜ್ಯಕ್ಕೆ ಸಂಬಂಧಪಟ್ಟಂತೆ ವಿಶೇಷ ನಿಬಂಧನೆಗಳು' ಎಂಬುದನ್ನು ಸೇರಿಸಿತು. ಅದರಲ್ಲಿ ರಾಷ್ಟ್ರಪತಿಗಳು "ಆದೇಶದ ಮೂಲಕ... ರಾಜ್ಯದ ವಿವಿಧ ಭಾಗಗಳ ಜನತೆಗೆ ಸಾರ್ವಜನಿಕ ಉದ್ಯೋಗದ ವಿಷಯದಲ್ಲಿ ಮತ್ತು ಶಿಕ್ಷಣದ ವಿಷಯದಲ್ಲಿ ಸಮತ್ವಪೂರ್ಣ ಅವಕಾಶಗಳು ಮತ್ತು ಸೌಲಭ್ಯಗಳನ್ನು ಒದಗಿಸಬಹುದು, ಮತ್ತು ರಾಜ್ಯದ ವಿವಿಧ ಭಾಗಗಳಿಗೆ ವಿಭಿನ್ನ ನಿಬಂಧನೆಗಳನ್ನು ಮಾಡಬಹುದು" ಎಂಬ ಅಂಶವೂ ಇತ್ತು.

ಕಳೆದ ನಾಲ್ಕು ದಶಕಗಳ ಇತಿಹಾಸ, ತೆಲಂಗಾಣದ ಜನತೆಗೆ ಇತರರಿಗಿಂತ ಅವರು ಹಿಂದುಳಿದಿರುವುದನ್ನು ನಿವಾರಿಸಲು ನೀಡಿದ ಎಲ್ಲ ಭರವಸೆಗಳು, ಆಶ್ವಾಸನೆಗಳಲ್ಲಿ ಒಟ್ಟಾರೆಯಾಗಿ ವಿಶ್ವಾಸಘಾತ ಮಾಡಲಾಗಿದೆ ಎಂಬುದಕ್ಕೆ ಸಾಕ್ಷಿಯಾಗಿದೆ. ಜನತೆಗೆ ನೀಡಿದ ಆಶ್ವಾಸನೆಗಳು ಈಡೇರದಿರಲು ಈ ನಾಲ್ಕು ದಶಕಗಳಲ್ಲಿ ದೀರ್ಘ ಅವಧಿಗಳಲ್ಲಿ ಕೇಂದ್ರದಲ್ಲೂ, ರಾಜ್ಯದಲ್ಲೂ ಸರಕಾರದ ನೇತೃತ್ವ ವಹಿಸಿದ್ದ ಕಾಂಗ್ರೆಸ್ ಪಕ್ಷವೇ ಪ್ರಾಥಮಿಕವಾಗಿ ಹೊಣೆಗಾರನಾಗಿದೆ.

ಆದರೆ ತೆಲಂಗಾಣ ರಾಜ್ಯದ ರಚನೆಗೆ ದಾರಿ ಮಾಡಿಕೊಡಲು ಅಗತ್ಯವಾಗಬಹುದಾದ ಇನ್ನೊಂದು ಹೆಜ್ಜೆಯೆಂದರೆ ಭಾರತದ ಸಂವಿಧಾನದಿಂದ ಕಲಮು 371ಡಿಯನ್ನು ತೆಗೆದು ಹಾಕುವುದು. ಏಕೆಂದರೆ ಇದು ಈಗ ನಿಷ್ಫಲವಾಗುತ್ತದೆ. ತೆಲಂಗಾಣ ರಾಜ್ಯವನ್ನು ಕಾನೂನುಬದ್ಧವಾಗಿ ರಚಿಸುವ ಮೊದಲು ಈ ಬಗ್ಗೆ ಸಂಸತ್ತು ಒಂದು ಸಂವಿಧಾನ ತಿದ್ದುಪಡಿಯನ್ನು ಅಂಗೀಕರಿಸಬೇಕಾಗಬಹುದು.

ಚಾರಿತ್ರಿಕವಾಗಿ, ಸ್ವಾತಂತ್ರ್ಯದ ನಂತರ ರಾಜ್ಯಗಳ ಭಾಷಾವಾರು ಮರುಸಂಘಟನೆಗೆ ಮೊದಲ ಫಿರಂಗಿ ಹಾರಿಸಿದ್ದು ತೆಲುಗು ಭಾಷಿಕ ಜನತೆ. ಪೊಟ್ಟಿ ಶ್ರೀರಾಮುಲು ಅವರು ಹುತಾತ್ಮರಾದದ್ದು ವಿಶಾಲಾಂಧ್ರ ಆಂದೋಲನವನ್ನು ಚುರುಕುಗೊಳಿಸಿತು. ಸ್ವಲ್ಪ ಸಮಯದಲ್ಲೇ ಐಕ್ಯ ಕೇರಳ ಮತ್ತು ಸಂಯುಕ್ತ ಮಹಾರಾಷ್ಟ್ರ ಆಂದೋಲನಗಳಲ್ಲಿ ಇದು ಅನುರಣನಗೊಂಡಿತು. ಈ ಬೃಹತ್ ಜನತಾ ಹೋರಾಟಗಳ ಶಕ್ತಿಯೇ ಅಂತಿಮವಾಗಿ, ರಾಜರುಗಳ ಸಂಸ್ಥಾನಗಳನ್ನು ಸ್ವತಂತ್ರ ಭಾರತದೊಳಕ್ಕೆ ಸಮಗ್ರೀಕರಿಸಿದ ನಂತರ ಭಾರತೀಯ ಪ್ರಭುತ್ವದ ಭಾಷಾವಾರು ಮರುಸಂಘಟನೆಗೆ ದಾರಿ ಮಾಡಿಕೊಟ್ಟದ್ದು. ಸಿಪಿಐ(ಎಂ) ಸದಾ, ಭಾಷಾವಾರು ಮರುಸಂಘಟನೆಯ ಈ ಪ್ರಜಾಸತ್ತಾತ್ಮಕ

ಪುಟ 15 ಕ್ಕೆ



ಚುನಾವಣಾ-ಪೂರ್ವ ತುರ್ತು

ಒಳ್ಳೆ ಸುದ್ದಿ – ಅದು ಆಂಧ್ರ, ಇದು ತೆಲಂಗಾಣ ಎಂದು ಹೈಕಮಾಂಡ್ ನಿರ್ಧರಿಸಿದೆ. – 'ದಿ ಹಿಂದೂ'ನಲ್ಲಿ ಕೇಶವನ್ ವ್ಯಂಗ್ಯ

ಶಾಂತಿ ಮತ್ತು ಸೌಹಾರ್ದವನ್ನು ಕಾಪಾಡಲು ಸಿಪಿಐ(ಎಂ) ಪೊಲಿಟ್‌ಬ್ಯುರೋ ಮನವಿ

ದೀರ್ಘ ತೂಗಾಟ ಮತ್ತು ಶ್ರೀಕೃಷ್ಣ ಸಮಿತಿ ತನ್ನ ವರದಿಯನ್ನು ಸಲ್ಲಿಸಿದ ಎರಡು ವರ್ಷಗಳ ನಂತರ ಕಾಂಗ್ರೆಸ್ ಮುಖಂಡತ್ವ ಮತ್ತು ಯುಪಿಎ ಸರಕಾರ ಆಂಧ್ರಪ್ರದೇಶವನ್ನು ವಿಭಜಿಸಿ ತೆಲಂಗಾಣ ರಾಜ್ಯದ ರಚನೆ ಮಾಡಲು ನಿರ್ಧರಿಸಿವೆ. ಈ ನಿರ್ಧಾರ ಮುಂಬರುವ ಲೋಕಸಭಾ ಚುನಾವಣೆಗಳಿಂದ ಪ್ರೇರಿತವಾಗಿರುವಂತೆ ಕಾಣುತ್ತದೆ. ಇದು ಇತರ ಸ್ಥಳಗಳಲ್ಲಿ ಪ್ರತ್ಯೇಕ ರಾಜ್ಯಗಳ ಬೇಡಿಕೆಗಳಿಗೆ ಉತ್ತೇಜನೆ ನೀಡಬಹುದು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಅಭಿಪ್ರಾಯ ಪಟ್ಟಿದೆ.

ಸಿಪಿಐ(ಎಂ) ಸದಾ, ಭಾಷಾವಾರು ಮರುಸಂಘಟನೆಯ ಪ್ರಜಾಸತ್ತಾತ್ಮಕ ನೀತಿಯ ಆಧಾರದಲ್ಲಿ ರಾಜ್ಯಗಳ ಸಮಗ್ರತೆಗೆ ಬೆಂಬಲವಾಗಿ ನಿಂತಿದೆ.

ತೆಲಂಗಾಣ ರಾಜ್ಯ ರಚನೆಯ ಪ್ರಶ್ನೆಯನ್ನು ಈಗ ಸಂಸತ್ತು ನಿರ್ಧರಿಸಬೇಕಾಗಿದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ, ಈ ನಡುವೆ ಆಂಧ್ರಪ್ರದೇಶದ ಎಲ್ಲ ಪ್ರದೇಶಗಳ ಜನತೆ ಶಾಂತಿ ಮತ್ತು ಸೌಹಾರ್ದವನ್ನು ಕಾಪಾಡಿಕೊಳ್ಳಬೇಕು ಎಂದು ಮನವಿ ಮಾಡಿದೆ.

‘ಎನ್‌ಕೌಂಟರ್’ ಎಂಬ ಹೆಸರಿನ ನರಬೇಟೆ

ಇಂತಹ ಭೀಕರ ನಕಲಿ ಎನ್‌ಕೌಂಟರ್‌ಗಳು ಕಾಂಗ್ರೆಸ್ ಆಡಳಿತವಿರುವ ರಾಜ್ಯಗಳಲ್ಲಿಯೂ, ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲಿಯೂ ಏಕಪ್ರಕಾರವಾಗಿ ನಡೆಯುತ್ತಿವೆ. ಈ ಎರಡೂ ಪ್ರಮುಖ ರಾಜಕೀಯ ಪಕ್ಷಗಳ ಸರ್ಕಾರಗಳಿಂದ ಜನರ ಜೀವಕ್ಕೆ ರಕ್ಷಣೆ ಇಲ್ಲ ಎಂಬುದು ಸ್ಪಷ್ಟವಾಗುತ್ತದೆ. ಇವೇ ಎರಡು ಪಕ್ಷಗಳು ಪರಸ್ಪರ ಒಂದು ಇನ್ನೊಂದಕ್ಕೆ ಪರ್ಯಾಯ ಎಂದು ಬಿಂಬಿಸಲು ಹೆಣಗಾಡುತ್ತಿವೆ!

ಆರ್. ರಾಮಕೃಷ್ಣ

ಕೆಲ ವರ್ಷಗಳ ಹಿಂದೆ ಕನ್ನಡದಲ್ಲಿ ಒಂದು ಸಿನಿಮಾ ತೆರೆ ಕಂಡಿತು. ‘ದಯಾನಾಯಕ್–ಲೈಸೆನ್ಸ್‌ಡ್ ಟು ಕಿಲ್’ ಅಂತ ಸಿನಿಮಾದ ಹೆಸರು. (‘ಕೊಲ್ಲುವುದಕ್ಕೆ ಲೈಸೆನ್ಸ್ ಇರುವವ–ಈ ದಯಾನಾಯಕ್’ ಅಂತ ಅರ್ಥ) ದಯಾನಾಯಕ್ ಕರ್ನಾಟಕ ಮೂಲದ ವ್ಯಕ್ತಿ. ಮುಂಬೈನ ಪೋಲಿಸ್ ಅಧಿಕಾರಿ. 83 ಎನ್‌ಕೌಂಟರ್ ನಡೆಸಿದ ‘ಹೆಮ್ಮೆ’ ಆತನದ್ದು. ಆ ಸಿನಿಮಾ ಇಂತಹ ‘ಸಾಹಸಿ’ ಪೋಲಿಸ್ ಅಧಿಕಾರಿಯ ನಿಜ ಜೀವನದ ಕತೆಯನ್ನು ಆಧರಿಸಿದ್ದು ಎಂದು ದೊಡ್ಡ ಪ್ರಚಾರ ಆಗಿತ್ತು.

ಇಂತಹ ಸಂದರ್ಭಗಳಲ್ಲಿ ‘ಎನ್‌ಕೌಂಟರ್’ ಎಂದರೆ ಕಾನೂನು ಸುವ್ಯವಸ್ಥೆಯ ರಕ್ಷಣೆಗಾಗಿ ಇರುವ ಪೋಲಿಸರು ಸಮಾಜದ್ರೋಹಿ ದುಷ್ಕರ್ಮಿಗಳು ಅಥವಾ ಭಯೋತ್ಪಾದಕರನ್ನು ಬೆನ್ನಟ್ಟುವುದು, ಗುಂಪುಗಳ ಕಾದಾಟ, ಪರಸ್ಪರ ಗುಂಡಿನ ಚಕಮಕಿ, ಸಾವು ಎಂಬ ಚಿತ್ರಣ ಸಾಮಾನ್ಯ ಜನರ ಮನಸ್ಸಿನಲ್ಲಿ ಮೂಡುತ್ತದೆ. ಅಥವಾ ಮೂಡುವಂತೆ ಮಾಡಲಾಗಿದೆ.

*

ಜುಲೈ 12, 2013 ರಂದು ಮುಂಬೈನ ಸೆಷನ್ ನ್ಯಾಯಾಲಯವು 13 ಜನ ಪೋಲೀಸರು ಸೇರಿದಂತೆ ಒಟ್ಟು 21 ಜನರಿಗೆ ಜೀವಾವಧಿ ಶಿಕ್ಷೆ ವಿಧಿಸಿ ತೀರ್ಪೊಂದನ್ನು ನೀಡಿತು. ಹಿರಿಯ ಪೋಲಿಸ್ ಇನ್ಸ್‌ಪೆಕ್ಟರ್ ಪ್ರದೀಪ್ ಸೂರ್ಯವಂಶಿ ಪ್ರಕರಣದ ಪ್ರಮುಖ ಆರೋಪಿ. ಅವರಿಗೂ ಜೀವಾವಧಿ ಶಿಕ್ಷೆಯಾಯಿತು. 2006ರಲ್ಲಿ ‘ರಾಮ್ ನಾರಾಯಣ ಗುಪ್ತ’ ಎಂಬ ವ್ಯಕ್ತಿಯನ್ನು ಕೊಂದು ಹಾಕಿದ ಪೋಲಿಸ್ ಎನ್‌ಕೌಂಟರ್ ಪ್ರಕರಣ ಅಸಲಿ ಅಲ್ಲ. ಅದು ನಕಲಿ ಎನ್‌ಕೌಂಟರ್ ಎಂದು ನ್ಯಾಯಾಲಯದ ತೀರ್ಪು ಹೇಳಿತು.

ನೂರಕ್ಕೂ ಹೆಚ್ಚು ಎನ್‌ಕೌಂಟರ್ ನಡೆಸಿದ ‘ಖ್ಯಾತ ಎನ್‌ಕೌಂಟರ್ ಸ್ಪೆಷಲಿಸ್ಟ್’ ಪ್ರದೀಪ್ ಶರ್ಮ ಅವರನ್ನು ಇದೇ ಪ್ರಕರಣದಲ್ಲಿ ನ್ಯಾಯಾಲಯ ಖುಲಾಸೆ ಮಾಡಿತು. ಆದರೂ ತತಕ್ಷಣಕ್ಕೆ ಅವರು ದೇಶಬಿಟ್ಟು ಹೊರಹೋಗದಂತೆ ಆದೇಶಿಸಿತು.

*

ಫೆಬ್ರವರಿ 2006 ರಲ್ಲಿ ಸ್ವತಃ ದಯಾನಾಯಕ್ ಅವರನ್ನು ಸೇವೆಯಿಂದ ಅಮಾನತು ಮಾಡಲಾಯಿತು. ಅವರನ್ನು ಬಂಧಿಸಲಾಯಿತು. ಭೂಗತ ಲೋಕದ ವ್ಯಕ್ತಿಗಳೊಂದಿಗೆ ಅಕ್ರಮ ಸಂಪರ್ಕ ಹೊಂದಿರುವುದು ಮತ್ತು ತಮ್ಮ ಆದಾಯ ಪ್ರಮಾಣಕ್ಕೆ ಹೊಂದಾಣಿಕೆಯಾಗದಷ್ಟು ಅಕ್ರಮ ಆಸ್ತಿ ಹೊಂದಿರುವ ಗಂಭೀರ ಆರೋಪ ಅವರ ಮೇಲೆ ಬಂದಿತು.

*

ಜೂನ್ 15, 2004. ರಂದು 19 ವರ್ಷದ ಯುವತಿ ಇಶ್ರತ್ ಮತ್ತು ಮೂವರು ವ್ಯಕ್ತಿಗಳ ರಕ್ತಸಿಕ್ತ ದೇಹ ಗುಜರಾತ್‌ನ ಗಾಂಧಿನಗರ ಮತ್ತು ಅಹಮದಾಬಾದ್‌ನ ನಡುವಿನ ಹೆದ್ದಾರಿಯಲ್ಲಿ ಕಂಡುಬಂದವು. ಈ ಮೃತ ದೇಹಗಳ ಬಳಿ ಮಾರಕಾಸ್ತ್ರಗಳು ಬಿದ್ದಿದ್ದವು. ಅವರುಗಳು ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿ, ಬಿಜೆಪಿಯ ನಾಯಕ ಎಲ್. ಕೆ. ಅಡ್ವಾಣಿ, ವಿಎಚ್‌ಪಿ ನಾಯಕ ಪ್ರವೀಣ್ ಬಾಯಿ ತೊಗಾಡಿಯಾರನ್ನು ಕೊಲ್ಲಲು ಬಂದ ‘ಲಷ್ಕರ್–ಇ–ತೊಯ್ಬಾ’ದ ಉಗ್ರರು. ಪೋಲಿಸರೊಂದಿಗಿನ ಕಾದಾಟದಲ್ಲಿ ಸತ್ತಿದ್ದಾರೆ ಎಂದು ಗುಜರಾತ್ ಸರ್ಕಾರದ ಪೋಲಿಸರು ಹಾಕಿದ ಎಫ್‌ಐಆರ್ ಹೇಳಿತು.

*

ಇಶ್ರತ್ ಮತ್ತು ಮೂವರ ಪ್ರಕರಣದ ಕುರಿತು ವಿಚಾರಣೆ ನಡೆಸಿದ ಅಹಮದಾಬಾದ್‌ನ ಮೆಟ್ರೋ ಪಾಲಿಟನ್ ನ್ಯಾಯಾಲಯ ಈ ನಾಲ್ವರನ್ನು ಕೊಂದ ಎನ್‌ಕೌಂಟರ್ ಅಸಲಿ ಅಲ್ಲ, ನಕಲಿ ಎಂದು ತೀರ್ಪು ನೀಡಿತು.

*

ಗುಜರಾತ್ ಸರ್ಕಾರ ತೀರ್ಪಿನ ವಿರುದ್ಧ ಮೇಲಿನ ಕೋರ್ಟಿಗೆ ಮನವಿ ಮಾಡಿತು. ಈಗ ಇಶ್ರತ್ ಪ್ರಕರಣದಲ್ಲಿ ಸಿಬಿಐ ತನಿಖೆಯ ವರದಿಗಳು ಹೊರಬೀಳುತ್ತಿವೆ. ಮೃತರ ಬಳಿ ಸಿಕ್ಕಿರುವ ಶಸ್ತ್ರಗಳು ಮೃತರು ಬಳಸಿರುವುದಲ್ಲ. ನಾಲ್ವರನ್ನು ಮೊದಲೇ ಕೊಂದು ನಂತರ ಅವರ ದೇಹಗಳ ಬಳಿ ಶಸ್ತ್ರಗಳನ್ನು ಹಾಕಲಾಗಿದೆ ಎನ್ನುತ್ತಿದೆ ಕೇಂದ್ರ ರಾಸಾಯನಿಕ ವಿಧಿವಿಜ್ಞಾನ ಪ್ರಯೋಗಾಲಯ(ಸಿಎಫ್‌ಎಸ್‌ಎಲ್)ದ ವರದಿ. ಕಾರಿನಲ್ಲಿದ್ದ ನಾಲ್ವರ ದೇಹವನ್ನು ಒಟ್ಟು 80 ಗುಂಡುಗಳು ಹೊಕ್ಕಿವೆ. ಅದರಲ್ಲಿ 71 ಗುಂಡುಗಳು ಗುಜರಾತ್ ಪೋಲೀಸರ ಬಂದೂಕಿನಿಂದ ಹಾರಿರುವುದು. ಉಳಿದ 9 ಗುಂಡುಗಳನ್ನು ಯಾವ ಬಂದೂಕಿನಿಂದ ಹಾರಿಸಲಾಗಿದೆ ಎಂಬುದು ಗೊತ್ತಾಗಿಲ್ಲ. ಅಂದರೆ ಗುಜರಾತ್ ಪೋಲೀಸರ ಬಂದೂಕುಗಳಿಗೂ ಈ 9 ಗುಂಡುಗಳಿಗೂ ತಾಳೆಯಾಗುತ್ತಿಲ್ಲ. ನಾಲ್ವರನ್ನು ಎನ್‌ಕೌಂಟರ್ ನಡೆದಿದೆ ಎನ್ನಲಾದ ದಿನಾಂಕಕ್ಕಿಂತ ಮೊದಲೇ ಕೊಲ್ಲಲಾಗಿದೆ ಎಂದು ತನಿಖಾ ವರದಿ ಹೇಳುತ್ತಿದೆ. ಅವರನ್ನು ‘ಎನ್‌ಕೌಂಟರ್’ಗೂ ಮೊದಲೇ ಬಂಧಿಸಿ ಬೇರೆ ಬೇರೆ ತೋಟದ ಮನೆಗಳಲ್ಲಿಟ್ಟು ‘ವಿಚಾರಣೆ’ ನಡೆಸಲಾಗಿತ್ತು ಎಂದೂ ಸಿಬಿಐ ತನಿಖಾ ವರದಿ ಹೇಳುತ್ತಿದೆ.

ಗುಜರಾತಿನ ನಕಲಿ ಎನ್‌ಕೌಂಟರ್‌ಗಳಲ್ಲಿ ಪ್ರಾಣ ತೆತ್ತವರು



ವಿದ್ಯಾರ್ಥಿನಿ ಇಶ್ರತ್ ಜಹಾನ್ ಮತ್ತು ಮೂವರು



ಸೋಹ್ರಾಬುದ್ದೀನ್, ಕೌಸರ್ ಬಾಯ್, ತುಳಸಿ–ಪ್ರಜಾಪತಿ

*

ಈಗಲೂ ‘ಮೋದಿ ಹತ್ಯೆ ಸಂಚಿನ ಕತೆ’ಯ ಮಾರಾಟ ಭರ್ಜರಿಯಾಗಿಯೇ ನಡೆದಿದೆ. ‘ಇಶ್ರತ್’ ನಕಲಿ ಎನ್‌ಕೌಂಟರ್ ಪ್ರಕರಣದ ಒಬ್ಬ ಪ್ರಮುಖ ಆರೋಪಿ ಗುಜರಾತ್‌ನ ಹಿರಿಯ ಐಪಿಎಸ್ ಅಧಿಕಾರಿ ಡಿ.ಜಿ.ವಂಜಾರ ಮತ್ತು ಹಲವು ಹಿರಿಯ ಪೋಲಿಸ್ ಅಧಿಕಾರಿಗಳು ಈಗ ಜೈಲು ಕಂಬಿಗಳ ಹಿಂದೆ ಇದ್ದಾರೆ. ಅದು ‘ಇಶ್ರತ್’ ಪ್ರಕರಣದಲ್ಲಿ ಅಲ್ಲ. ಮತ್ತೊಂದು ‘ಸೊಹ್ರಬುದ್ದೀನ್ ಎನ್‌ಕೌಂಟರ್’ ಪ್ರಕರಣದಲ್ಲಿ.

*

‘ಸೊಹ್ರಬುದ್ದೀನ್’ ಎಂಬ ವ್ಯಕ್ತಿ 26, ನವೆಂಬರ್ 2005 ರಂದು ಈ ವ್ಯಕ್ತಿ ಗುಜರಾತ್ ಪೋಲೀಸರ ‘ಎನ್‌ಕೌಂಟರ್’ಗೆ ಬಲಿಯಾದ. ಆತನ ಜೊತೆಯಲ್ಲಿದ್ದ ಹೆಂಡತಿ ಕೌಸರ್ ಬಾಯ್ ‘ಕಾಣೆ’ಯಾದಳು. ಸೊಹ್ರಾಬುದ್ದೀನ್ ಎನ್‌ಕೌಂಟರ್ ಅಸಲಿ ಅಲ್ಲ ನಕಲಿ ಎಂಬ ಅಂಶ ಅವನನ್ನು ಕೊಂದವರು ಬಾರೊಂದರಲ್ಲಿ ಕುಡಿದ ಮತ್ತಿನ ಜೋಷ್‌ನಲ್ಲಿ ಆಡಿದ ಮಾತಿನಿಂದ ಹೊರಬಿತ್ತು. ತನಿಖೆ ಆರಂಭವಾಗಿ ಕೊನೆಗೆ ಅದು ನಕಲಿ ಎನ್‌ಕೌಂಟರ್ ಎಂದು ಗುಜರಾತ್ ಸರ್ಕಾರದ ವಕೀಲರೇ ಸುಪ್ರಿಂ ಕೋರ್ಟ್‌ನಲ್ಲಿ ಒಪ್ಪಿಕೊಳ್ಳಬೇಕಾಗಿ ಬಂತು. ನರೇಂದ್ರ ಮೋದಿಯ ಪರಮಾಪ್ತ, ಗುಜರಾತ್ ಸರ್ಕಾರದ ಗೃಹಮಂತ್ರಿ ಅಮಿತ್ ಷಾ ಮಟ್ಟದ ಹಲವು ‘ಗಣ್ಯ’ರು ಒಳಗೊಂಡಿರುವುದರಿಂದ ಈ ಪ್ರಕರಣವನ್ನು ಸಿಬಿಐಗೆ ವರ್ಗಾಯಿಸಿ ಎಂದು ಸುಪ್ರಿಂಕೋರ್ಟ್ ಆದೇಶ ನೀಡಿತು.

*

‘ಕಾಣೆ’ಯಾಗಿದ್ದ ಕೌಸರ್ ಬಾಯ್ ಈಗ ಬದುಕಿದ್ದಾರಾ ? ಇಲ್ಲ. ಏನಾದರು? ಗುಜರಾತ್ ಸರ್ಕಾರದ ಪರವಾಗಿ ಸರ್ಕಾರದ ಕೌನ್ಸಲರ್‌ಗಳಾದ ತುಳಸಿ ಮತ್ತು ಹೇಮಂತಿಕ ವಾಹಿಯವರು ಏಪ್ರಿಲ್ 30, 2007 ರಂದು ಸುಪ್ರಿಂ ಕೋರ್ಟ್‌ಗೆ ಈ ಬಗ್ಗೆ ಮುಚ್ಚಿದ ಲಕೋಟೆಯಲ್ಲಿ ನೀಡಿದ ವರದಿ ಪ್ರಕಾರವೇ ‘ಕೌಸರ್ ಬಾಯ್’ ಅವರನ್ನು ಕೊಲ್ಲಲಾಗಿದೆ. ಮತ್ತು ಅವರ ದೇಹವನ್ನು ಸುಟ್ಟುಹಾಕಲಾಗಿದೆ’. ‘ಸೊಹ್ರಾಬುದ್ದೀನ್’ನನ್ನು ಕೊಂದ ಗುಜರಾತ್ ಪೋಲಿಸರು ಆತನ ಹೆಂಡತಿ ಕೌಸರ್ ಬಾಯ್ ಅವರನ್ನು ಅಪಹರಿಸಿದರು. ಮೂ[illegible] ದಿನಗಳ ನಂತರ ಅವರನ್ನು ಕೊಂದು ಸುಟ್ಟು ಹಾಕಿ ಸಾಕ್ಷ್ಯ ಕೂಡ ಸಿಗದಂತೆ ಮಾಡುವ ಪ್ರಯತ್ನ ಮಾಡಿದರು ಎನ್ನುತ್ತಿದೆ ತನಿಖಾ ವರದಿ.

*

‘ಸೊಹ್ರಾಬುದ್ದೀನ್’ ಎನ್‌ಕೌಂಟರ್ ಪ್ರಕರಣದ ಮತ್ತೊಬ್ಬ ಪ್ರಮುಖ ಆರೋಪಿ ಗುಜರಾತ್ ಸರ್ಕಾರದ ಹಿರಿಯ ಪೋಲಿಸ್ ಅಧಿಕಾರಿ ರಾಜಕುಮಾರ್ ಪಾಂಡಿಯನ್ ಈಗ ಕಂಬಿಗಳ ಹಿಂದೆ ಇದ್ದಾರೆ. ಅವರನ್ನು ಸ್ಥಳೀಯ ನ್ಯಾಯಾಲಯದಲ್ಲಿ ಹಾಜರು ಪಡಿಸಲು ಏಪ್ರಿಲ್ 30, 2013 ರಂದು ಅಹಮದಾಬಾದ್‌ಗೆ ಕರೆತಂದಿದ್ದಾಗ ಸಬರಮತಿ ಕಾರಾಗೃಹಕ್ಕೆ ಕರೆದೊಯ್ಯುವ ಬದಲು ಕಾನೂನು ಕ್ರಮಗಳಿಗೆ ವಿರುದ್ಧವಾಗಿ ಅವರು ರಾತ್ರಿ ಪ್ರಹ್ಲಾದನಗರದ [illegible] ಮನೆಯಲ್ಲಿ ತಂಗಲು ಬಿಡಲಾಗಿದೆ. ಯಾ[illegible] ಪೋಲಿಸರ ಬೆಂಗಾವಲೂ ಇಲ್ಲದೇ ಅವರು ಮುಕ್ತರಾಗಿ ಓಡಾಡಲು ಹಾಗೂ

ತಮ್ಮ ಮನೆಗೆ ಹೋಗಿ ರಾತ್ರಿ ಕಳೆದು ಆರಾಮವಾಗಿ ಬೆಳಿಗ್ಗೆ ಕೋರ್ಟ್‌ಗೆ ತೆರಳಲು ಅವಕಾಶ ನೀಡಲಾಗಿದೆ ಎಂದು ಟಿವಿ ಚಾನೆಲ್‌ನಲ್ಲಿ ಪ್ರಸಾರವಾದ ದೃಶ್ಯಾವಳಿಗಳು ಹೇಳುತ್ತಿವೆ.


★

ಸುಮಾರು ಎರಡು ವರ್ಷಗಳ ಹಿಂದೆಯೇ ತಮ್ಮ ಮೇಲಿನ ಆರೋಪಗಳಿಂದ ಮುಕ್ತರಾಗಿದ್ದರೂ ಮುಂಬೈನ ದಯಾನಾಯಕ್ ಅವರ ಅಮಾನತು ರದ್ದು ಮಾಡಿ ಮಹಾರಾಷ್ಟ್ರದ ಪೋಲಿಸ್ ಇಲಾಖೆ ಅವರಿಗೆ 'ಡ್ಯೂಟಿ' ಕೊಟ್ಟಿರಲಿಲ್ಲ. ಜೂನ್ 16, 2012 ರಂದು ಅವರಿಗೆ ಡ್ಯೂಟಿ ಕೊಡಲಾಗಿದೆ. ಯಾಕೆ ?

ಮತ್ತೊಂದು 'ಎನ್‌ಕೌಂಟರ್'ನಲ್ಲಿ ಗುಜರಾತ್ ಪೋಲಿಸರಿಂದ ಹತನಾದ 'ಸಿದ್ದಿಕ್'ನನ್ನು ಗುಜರಾತ್ ಪೋಲಿಸರಿಗೆ ಒಪ್ಪಿಸಿದ ಸಂಬಂಧ ದಯಾನಾಯಕ್‌ರನ್ನೂ ಸಿಬಿಐ ತೀವ್ರ ವಿಚಾರಣೆಗೆ ಗುರಿ ಪಡಿಸಿದೆ.

★

ಜೈಲು ಕಂಬಿ ಎಣಿಸುತ್ತಿರುವ ಗುಜರಾತಿನ ಉನ್ನತ ಪೋಲೀಸ್ ಅಧಿಕಾರಿಗಳು



ಎಡದಿಂದ – ಡಿ.ಜಿ. ವಂಜಾರ, ರಾಜಕುಮಾರ್ ಪಾಂಡಿಯನ್, ದಿನೇಶ್ ಎಂ.ಎನ್, ಎನ್.ಕೆ. ಅಮೀನ್, ವಿ.ಎ. ರಾಥೋಡ್, ಪಿ.ಪಿ. ಪಾಂಡೆ, ನಿವೃತ್ತ ಎಸ್‌ಪಿ ಜೆ.ಪಿ. ಪಾರ್‌ಮರ್, ತರುಣ್ ಬಾರೋಟ್,

ಮತ್ತೊಂದು ಎನ್‌ಕೌಂಟರಾ ? ಹೌದು ಮತ್ತೊಂದು. ಇದು ಇನ್ನೂ ಹಳೆಯದು. 'ಸಿದ್ದಿಕ್' ಎಂಬ ವ್ಯಕ್ತಿ ಜನವರಿ 13, 2013 ರಂದು ಅಹಮದಾಬಾದ್‌ನ ಗೆಲಾಕ್ಸಿ ಚಿತ್ರಮಂದಿರದ ಬಳಿ ಗುಜರಾತ್‌ನ ಕ್ರೈಮ್ ಬ್ರಾಂಚ್ ಪೋಲೀಸರೊಂದಿಗಿನ 'ಎನ್‌ಕೌಂಟರ್'ನಲ್ಲಿ ಹತನಾದ. ಈತ ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿಯನ್ನು ಕೊಲ್ಲಲು ಹೊಂಚು ಹಾಕಿಕೊಂಡು ಬಂದಿದ್ದ ಒಬ್ಬ ಭಯೋತ್ಪಾದಕ ಎಂದಿತು ಗುಜರಾತ್ ಕ್ರೈಂ ಬ್ರಾಂಚ್ ವರದಿ.

★

ಜುಲೈ 4 2012 ರಂದು ಮುಂಬೈನ ಪ್ರರ್ತಕರ್ತ ಕೇತನ್ ತಿರೋಡ್ಕರ್‌ನನ್ನು ಬಂಧಿಸಲಾಯಿತು. ಸಿದ್ದಿಕ್ 'ಎನ್‌ಕೌಂಟರ್' ಪ್ರಕರಣದ ಸಂಚಿನಲ್ಲಿ ತಾನೂ ಕೂಡಾ ಭಾಗಿಯಾಗಿರುವುದಾಗಿ ಈತ 'ಮೋಕಾ' ಕೋರ್ಟಿನ ಎದುರು ತಪ್ಪೊಪ್ಪಿಗೆ ಹೇಳಿಕೆ ನೀಡಿದ.

ಸಿದ್ದಿಕ್ ಕೊಲೆ ಅದು ಸಾಚಾ ಎನ್‌ಕೌಂಟರ್ ಅಲ್ಲ. ಅದು ನಕಲಿ ಎನ್‌ಕೌಂಟರ್. ಗುಜರಾತ್ ಸರ್ಕಾರದ ಪೋಲಿಸರ ಮನವಿಯ ಮೇರೆಗೆ ಸಿದ್ದಿಕ್‌ನನ್ನು ಗುಜರಾತ್ ಪೋಲಿಸರ ವಶಕ್ಕೆ ಒಪ್ಪಿಸಿದ್ದು ಮುಂಬೈ ಪೋಲಿಸ್ ಅಧಿಕಾರಿ ದಯಾನಾಯಕ್ ಎಂಬ ಮಾಹಿತಿಯನ್ನು ನೀಡಿದ್ದಾನೆ.

★

ಡಿಸೆಂಬರ್ 29, 2012 ರಂದು 'ತುಳಸಿ ಪ್ರಜಾಪತಿ' ಪ್ರಕರಣದ ಆರೋಪಿ ಗುಜರಾತ್‌ನ ಐಪಿಎಸ್ ಅಧಿಕಾರಿ ರಾಜಕುಮಾರ್ ಪಾಂಡಿಯನ್ ತನ್ನನ್ನು ಮುಂಬೈನ ಜೈಲಿನಿಂದ ಚಿಕಿತ್ಸೆಗಾಗಿ ಅಹಮದಾಬಾದ್ ಆಸ್ಪತ್ರೆಗೆ ವರ್ಗಾಯಿಸಿ ಎಂದು ಕೋರಿದ ಅರ್ಜಿಯನ್ನು ಸಿಬಿಐನ ವಿಶೇಷ ನ್ಯಾಯಾಲಯ ತಿರಸ್ಕರಿಸುತ್ತದೆ. ಹಾಂ ! ಯಾವುದು ಈ 'ತುಳಸಿ ಪ್ರಜಾಪತಿ ಪ್ರಕರಣ' ಎಂದಿರಾ? ಬೆಚ್ಚಿ ಬೀಳದಿರಿ. ಗುಜರಾತ್ ಪೋಲಿಸರ ನಕಲಿ ಎನ್‌ಕೌಂಟರ್ ಪಟ್ಟಿ ಇನ್ನೂ ಮುಗಿದಿಲ್ಲ.

★

ತುಳಸಿ ಪ್ರಜಾಪತಿ ಸೊಹ್ರಾಬುದ್ದೀನ್ ನಕಲಿ ಎನ್‌ಕೌಂಟರ್ ಮತ್ತು ಆತನ ಪತ್ನಿ ಕೌಸರ್ ಬಾಯ್ ಅವರ ಅಪಹರಣದ 'ಜೀವಂತ' ಸಾಕ್ಷಿಯಾಗಿದ್ದ. ಪ್ರಜಾಪತಿ ಸೊಹ್ರಾಬುದ್ದೀನ್‌ನ ಜೊತೆಗಾರನಾಗಿದ್ದ. ಹಾಗಾಗಿ ಆತ ಗುಜರಾತ್ ಪೋಲಿಸರ 'ಅತಿಥಿ'ಯಾಗಿದ್ದ. ಡಿಸೆಂಬರ್ 28, 2006 ರಂದು ಪ್ರಜಾಪತಿ ಗುಜರಾತ್ ಪೋಲಿಸರ 'ಎನ್‌ಕೌಂಟರ್'ಗೆ ಬಲಿಯಾದ. ಆತನನ್ನು ರಾಜಸ್ತಾನಕ್ಕೆ ರೈಲಿನಲ್ಲಿ ಕರೆದುಕೊಂಡು ಹೋಗುತ್ತಿದ್ದ ಪೋಲಿಸರ ಕಣ್ಣಿಗೆ ಯಾರೋ ಖಾರದ ಪುಡಿ ಎರಚಿದರಂತೆ. ಪ್ರಜಾಪತಿ ಪೋಲಿಸರ ಹಿಡಿತದಿಂದ ತಪ್ಪಿಸಿಕೊಂಡು ಓಡಿದನಂತೆ. ಗುಜರಾತ್ ಪೋಲಿಸರು ಗುಂಡು ಹಾರಿಸಿದರಂತೆ. ಪ್ರಜಾಪತಿ ಹೆಣವಾದನಂತೆ. ಇದು ಗುಜರಾತ್ ಪೋಲಿಸರ ಹೇಳಿಕೆ.

★

ಡಿಸೆಂಬರ್ 10, 2005 ರಂದು ಗುಜರಾತ್‌ನ ಐಪಿಎಸ್ ಅಧಿಕಾರಿ ಡಿ.ಜಿ. ವಂಜಾರ 'ನಕಲಿ ಎನ್‌ಕೌಂಟರ್ ಕುರಿತು ಬಾಯಿ ಬಿಟ್ಟರೆ 'ಸೊಹ್ರಾಬುದ್ದೀನ್'ಗೆ ಬಂದ ಗತಿಯೇ ನಿನಗೂ ಬರುತ್ತದೆ' ಅಂತ ಪೋಲಿಸ್ ಕಸ್ಟಡಿಯಲ್ಲಿದ್ದ ಪ್ರಜಾಪತಿಗೆ ಬೆದರಿಕೆ ಹಾಕಿದ್ದರಂತೆ. ಪ್ರಾಣಭೀತಿಗೊಳಗಾದ ಪ್ರಜಾಪತಿ ಉದಯ್‌ಪುರದ ಅಡಿಷನಲ್ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್, ಉದಯಪುರದ ಕಲೆಕ್ಟರ್, ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗಗಳಿಗೆ ಮತ್ತು ಸೂಪರಿಂಟೆಂಡೆಂಟ್ ಅಫ್ ಕ್ರೈಂ ಡಿಪಾರ್ಟ್‌ಮೆಂಟ್, ಅಹಮದಾಬಾದ್–ಗಳಿಗೆ ಪತ್ರ ಬರೆದಿದ್ದಾನೆ. ಮಾನವ ಹಕ್ಕುಗಳ ಆಯೋಗಕ್ಕೆ ಆಗ ಆತ ಬರೆದಿದ್ದ ಪತ್ರದಲ್ಲಿ ವಿವರಿಸಿದ ಮಾದರಿಯಲ್ಲೇ ಪ್ರಜಾಪತಿಯ ಕೊಲೆ ಆಗಿದೆ ಎಂದು ಸಿಬಿಐ ಬಳಿ ಈಗ ಇರುವ ದಾಖಲೆಗಳು ಹೇಳುತ್ತಿವೆ. ಸಬ್ ಇನ್ಸ್‌ಪೆಕ್ಟರ್ ಅಶಿಶ್ ಪಾಂಡ್ಯ ಪ್ರಜಾಪತಿಯನ್ನು ಬಿಳಿ ಅಂಬಾಸಿಡರ್ ಕಾರಿನಲ್ಲಿ ಕರೆತಂದು ರಿವಾಲ್ವರ್‌ನಿಂದ ಆತನ ಮೇಲೆ ಗುಂಡು ಹಾರಿಸಿ ಆ ನಂತರ ಮತ್ತೊಂದು ರಿವಾಲ್ವರ್‌ನಿಂದ ತನಗೆ ಕೊಂಚ ಗಾಯವಾಗುವಂತೆ ಗುಂಡು ಹಾರಿಸಿಕೊಂಡು ಆ ರಿವಾಲ್ವರ್ ಅನ್ನು ಕುಸಿದು ಬಿದ್ದಿದ್ದ ಪ್ರಜಾಪತಿಯ ಬಳಿ ಎಸೆದದ್ದನ್ನು ಪ್ರತ್ಯಕ್ಷ ನೋಡಿದ ಸಾಕ್ಷಿಗಳನ್ನು ಈಗ ಸಿಬಿಐ ನ್ಯಾಯಾಲಯದ ಮುಂದೆ ತಂದು ನಿಲ್ಲಿಸಿದೆ.

★

ಸೊಹ್ರಾಬುದ್ದೀನ್ ಪ್ರಕರಣದಲ್ಲಿ ವಿಚಾರಣೆ ನಡೆಸುತ್ತಿದ್ದ ಸಿಐಡಿ ಅಧಿಕಾರಿ ಸೋಳಂಕಿಯವರು ಆಗ ಉದಯ್‌ಪುರ್ ಜೈಲಿನಲ್ಲಿದ್ದ ಪ್ರಜಾಪತಿಯ ಹೇಳಿಕೆ ಪಡೆಯಲು ಬಯಸಿದರೆ ಅವರಿಗೆ ಎಡಿಜಿ–ಸಿಐಡಿ ಜಿ.ಸಿ. ರಾಯ್‌ಗರ್ ಅನುಮತಿಯನ್ನೇ ನೀಡಲಿಲ್ಲವಂತೆ. ಇದಾದ ನಲವತ್ತು ದಿನಗಳ ನಂತರ ಪ್ರಜಾಪತಿ 'ಎನ್‌ಕೌಂಟರ್' ನಡೆಯುತ್ತದೆ.

★

'ಸೊಹ್ರಾಬುದ್ದೀನ್' ಪ್ರಕರಣದ ವಿಚಾರಣೆ ಹೊರಟಿರುವ ದಾರಿ ಸರಿಯಲ್ಲ, ಹೇಗಾದರೂ ಸರಿ ಪ್ರಕರಣ ಡಿ.ಜಿ.ವಂಜಾರ ಮತ್ತು ಅಂತಹ ಹಿರಿಯ ಪೋಲೀಸ್ ಅಧಿಕಾರಿಗಳ ವಿರುದ್ದ ತಿರುಗುವುದನ್ನು ತಡೆಯಬೇಕು ಎಂದು ಈ 'ಕೆಳಹಂತ'ದ ಅಧಿಕಾರಿಗೆ 'ತಿಳಿಹೇಳುವ' ಪೋಲಿಸ್ ಅಧಿಕಾರಿಗಳ ಸಭೆ ನಡೆಸಲಾದ ಬಗೆಗೆ ಪೂರ್ಣ ವಿವರಗಳನ್ನು ಸೋಳಂಕಿ ನೀಡಿದ್ದಾರೆ.

★

ಈಗ 'ನಿವೃತ್ತ ಪೋಲಿಸ್ ಅಧಿಕಾರಿ'ಯಾಗಿರುವ ಸೋಳಂಕಿಯವರು ಜನವರಿ 10, 2011 ರಂದು ಮೇಘನಿನಗರ್ ಪೋಲಿಸ್ ಠಾಣೆಯಲ್ಲಿ ಒಂದು ದೂರು ದಾಖಲಿಸಿದ್ದಾರೆ. 'ಸೊಹ್ರಾಬುದ್ದೀನ್'ನನ್ನು ಕೊಂದಾಗ ಜೊತೆಗಿದ್ದ ಮೂರನೇ ವ್ಯಕ್ತಿ 'ಪ್ರಜಾಪತಿ' ಅಲ್ಲ ಎಂದು ತಾವು ನೀಡಿದ ತನಿಖಾ ವರದಿಯಲ್ಲಿ ಹೇಳಿಲ್ಲ. ಆದರೆ ನಾನು ಹಾಗೆ ವರದಿ ನೀಡಿರುವುದಾಗಿ ಈಗಿನ ದಾಖಲೆಗಳು ಹೇಳುತ್ತಿವೆ. ನಾನು ಕೊಟ್ಟ ತನಿಖಾ ವರದಿಯ ನಡುವೆ ನನ್ನ ಹೆಸರಿನಲ್ಲಿ ಹೆಚ್ಚುವರಿ ದಾಖಲೆಯನ್ನು ಅಕ್ರಮವಾಗಿ ಸೇರಿಸಲಾಗಿದೆ. ಅದು ನಕಲಿ ಎಂದು ದೂರಿದ್ದಾರೆ ಸೋಳಂಕಿ.

★

ಈಗ ಮತ್ತೆ ದಯಾನಾಯಕ್‌ಗೆ ಡ್ಯೂಟಿ ಸಿಕ್ಕ ವಿಷಯಕ್ಕೆ ಬರೋಣ. ಸಿದ್ದಿಕ್ ಪ್ರಕರಣದಲ್ಲಿ ದಯಾನಾಯಕ್ ಕೊರಳಿಗೆ ಸಿಬಿಐನ ಬಂಧನದ ಕುಣಿಕೆ ಬೀಳುವ ಸಾಧ್ಯತೆ ಕಂಡಿತು. ಕುಣಿಕೆಯಿಂದ ಪಾರಾಗಬೇಕು. ಮಹಾರಾಷ್ಟ್ರದ ಅಧಿಕಾರಸ್ಥರು ಗಣ್ಯರೊಂದಿಗೆ ತೀರಾ 'ಆಪ್ತ' ಸಂಬಂಧ ಹೊಂದಿರುವ ಇವರ ಬಂಧನವಾದರೆ ಎಲ್ಲರಿಗೂ 'ಕಷ್ಟ'ವಂತೆ. ಬಂಧನ ತಪ್ಪಿಸಲು ಡ್ಯೂಟಿಯಂತೆ. ಡ್ಯೂಟಿಯಲ್ಲಿದ್ದರೆ ಬಂಧನಕ್ಕೆ ಸರ್ಕಾರದ ಅನುಮತಿ ಬೇಕು. ಹೀಗೆಂದು ಅಭಿಪ್ರಾಯಗಳು ಅನುಮಾನಗಳು ಹರಿದಾಡುತ್ತಿವೆ.

★

ಸಿದ್ದಿಕ್, ಸೊಹ್ರಾಬುದ್ದೀನ್ ಮತ್ತು ಕೌಶರ್ ಬಾಯ್, ಇಶ್ರತ್ ಮತ್ತು ಮೂವರು, ಪ್ರಜಾಪತಿ...ಈ ಎಲ್ಲ ಪ್ರಕರಣಗಳಲ್ಲಿ 'ಬೇಕಾಗಿರುವ' ಒಂದು ಪ್ರಮುಖ 'ವಾಂಟೆಡ್' ಹೆಸರು ಅಮಿತ್ ಷಾ. ಅಮಿತ್ ಷಾ ಗುಜರಾತ್ ರಾಜ್ಯದ ಗೃಹ ಮಂತ್ರಿ. ಅಂದರೆ 'ಕಾನೂನಿನ ಆಡಳಿತ'ವನ್ನು ಖಾತ್ರಿಪಡಿಸುವ ಮಹತ್ವದ ಹೊಣೆ ಹೊತ್ತ ವ್ಯಕ್ತಿ. ಈತ ರಾಜ್ಯದ ಮುಖ್ಯಮಂತ್ರಿ ನರೇಂದ್ರ ಮೋದಿಯ ಪರಮಾಪ್ತ ವ್ಯಕ್ತಿ. ರಾಜ್ಯದ ಗೃಹಮಂತ್ರಿಯೇ ಕೊಲೆ, ಸುಲಿಗೆ, ಅಪಹರಣಗಳಂತಹ ಗಂಭೀರ ಕ್ರಿಮಿನಲ್ ಪ್ರಕರಣಗಳಲ್ಲಿ ಜೈಲು ಪಾಲಾದ 'ಅದ್ಭುತ'ವು ಸಂಘಪರಿವಾರದ ಕರ್ಮಭೂಮಿ, ಹಿಂದುತ್ವದ ಪ್ರಯೋಗಶಾಲೆ ಗುಜರಾತ್‌ನಲ್ಲಿ ಜರುಗಿತು.

★

ಅಮಿತ್ ಷಾ ಈಗ ಜೈಲಿನಿಂದ ಹೊರಗಿರುವುದು 'ಬೈಲ್'ನ ಮೇಲೆ. ಪ್ರಕರಣ ಮುಂದುವರಿದಿದೆ. ಈಗ ಬಿಜೆಪಿ ಪಕ್ಷದಲ್ಲಿ ಆತನಿಗೆ ಬಾರಿ ಬಡ್ತಿ ಸಿಕ್ಕಿದೆ. ಆತ ಈಗ ಆ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಮತ್ತು ಉತ್ತರ ಪ್ರದೇಶಕ್ಕೆ ಆತನದೇ ಉಸ್ತುವಾರಿ. ಈ ಮನುಷ್ಯ ಇತ್ತೀಚೆಗೆ ಉತ್ತರ ಪ್ರದೇಶಕ್ಕೆ ಭೇಟಿ ನೀಡಿ ಅಯೋಧ್ಯೆಯ 'ರಾಮಲಲ್ಲಾ' ವಿಗ್ರಹಕ್ಕೆ ಪೂಜೆ ಸಲ್ಲಿಸಿ ಮಂದಿರ 'ಅಲ್ಲೇ ಕಟ್ಟುವೆವು' ಮತ್ತೆ ಪೂತ್ಕರಿಸಿದ್ದಾನೆ.

ಹಾಗಲಕಾಯಿಗೆ ಬೇವಿನ ಕಾಯಿ ಸಾಕ್ಷಿಯಂತೆ.!! ಯೋಗ್ಯ ವ್ಯಕ್ತಿಗೆ ಯೋಗ್ಯ ವಿಷಯದ ಉಸ್ತುವಾರಿಯನ್ನೇ ವಹಿಸಿದೆ ಬಿಜೆಪಿ.

ಈ ಎಲ್ಲ ಒಟ್ಟು ಪ್ರಕರಣ ಬೆಳವಣಿಗೆಗಳಲ್ಲಿ ಕಂಡು ಬರುತ್ತಿರುವುದೇನು ?.

ಸ್ಥಾಪಿತ ಹಿತಾಸಕ್ತಿಗಳು

ಮುಂಬೈ ಮಹಾನಗರದ ಎನ್‌ಕೌಂಟರ್‌ಗಳಲ್ಲಿ ಭೂಗತ ಪಾತಕಿಗಳ ಗ್ಯಾಂಗುಗಳು ತಮ್ಮ ವಿರೋಧಿ ಗ್ಯಾಂಗಿನ ಸದಸ್ಯರನ್ನು ಮುಗಿಸಲು 'ಎನ್‌ಕೌಂಟರ್ ಸ್ಪೆಷಲಿಸ್ಟ್'ರಾದ ಪೋಲಿಸ್ ಅಧಿಕಾರಿಗಳನ್ನು ಬಳಸಿಕೊಂಡಿವೆಯಂತೆ !! ಅಧಿಕಾರಸ್ಥ ಜನರ ಆಶೀರ್ವಾದ–ಶಾಮೀಲಾತಿ ಇಲ್ಲದೇ ಇಂತಹ ನೂರಾರು ಎನ್‌ಕೌಂಟರ್‌ಗಳು ನಡೆಯುವುದು ಸಾಧ್ಯವೇ ? ಹುಳುಹುಪ್ಪಟೆಗಳಂತೆ ನರಮನುಷ್ಯರನ್ನು ಕೊಲ್ಲುವುದು ಅಂದರೆ ಏನರ್ಥ. ಉತ್ತರ ಕೊಡುವವರು ಯಾರು ?

ಪುಟ 12 ಕ್ಕೆ

ಒಂಟಿ ಮಹಿಳೆಯರ ಸಮಾವೇಶ

ಕೆ. ನೀಲಾ

ದುಡಿಮೆಯ ಇನ್ನೊಂದು ಹೆಸರೇ ಮಹಿಳೆ. ಹೆಣ್ಣುಮಗುವಿದ್ದಾಗಿನಿಂದಲೂ ಮುಪ್ಪಾಗಿ ಮಣ್ಣು ಸೇರುವವರೆಗೆ ನಿರಂತರ ಕೆಲಸದೊಂದಿಗೆ ಹೆಜ್ಜೆ ಹಾಕುವ ಮಹಿಳೆಯರನ್ನು ಯಾವುದೇ ಆರ್ಥಿಕ ಉತ್ಪಾದನಾ ಲೆಕ್ಕಕ್ಕೆ ಪರಿಗಣಿಸುವುದೇ ಇಲ್ಲ. ಹೀಗಾಗಿ ಮಹಿಳೆಯು ಜೀವನದುದ್ದಕ್ಕೂ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಅನೇಕ ತಾರತಮ್ಯಕ್ಕೆ ಬಲಿಯಾಗುತ್ತಿರುವಳು. ಕಾನೂನು ರೀತ್ಯಾ ಆಸ್ತಿ ಹಕ್ಕಿದ್ದರೂ ಸಮಾಜದ ಮನಸ್ಥಿತಿಯು ಅವಳಿಗೆ ಆಸ್ತಿಯಲ್ಲಿ ಪಾಲು ಕೊಡಲು ಸಿದ್ಧವಾಗಿಲ್ಲ. ಇದರಿಂದ ಎಷ್ಟೋ ಸಾರಿ ಅನುಕೂಲಸ್ಥರ ಮನೆಯ ಹೆಣ್ಣುಮಗಳು ಸಹ ಬಡವಳಂತೆ ಬದುಕು ದೂಡಬೇಕಾಗುತ್ತಿದೆ. ಅದರಲ್ಲಿಯೂ ಗಂಡನನ್ನು ಕಳೆದುಕೊಂಡ ಮಹಿಳೆಯರು, ಮದುವೆಯಾದರೂ ಪರಿತ್ಯಕ್ತೆಯಾದವಳು ಹಾಗೂ ಮದುವೆಯೇ ಆಗದೆ ಉಳಿದವರು ಅನೇಕ ರೀತಿಯ ಸಂಕಟಗಳಿಗೆ ಬಲಿಯಾಗುತ್ತಿರುವರು. ವೈಯಕ್ತಿಕ ಬದುಕಿನ ದು:ಖ ದುಮ್ಮಾನ ಸಂಕಟಗಳು ಒಂದೆಡೆಯಾದರೆ, ಸಮಾಜದ ನಿಲುವು, ನಂಬಿಕೆಗಳು ಅವಳನ್ನು ಇನ್ನಷ್ಟು ಹೈರಾಣುಗೊಳಿಸುತ್ತಿವೆ. ಯಾರಿಗೂ ಹೇಳಿಕೊಳ್ಳಲಾಗದಂಥ ಬಡತನ ಮತ್ತು ಸಾಮಾಜಿಕ ತಾರತಮ್ಯವು ತೀವ್ರ ಘಾಸಿಗೊಳಿಸುತ್ತಿವೆ.

ಪರಿತ್ಯಕ್ತೆ ಮಹಿಳೆರ ಗೋಳು ಇನ್ನೂ ಕಠಿಣ. ಜೀವನಾಂಶ ಭತ್ಯೆಗಾಗಿ ವರ್ಷಗಳೇ ಕಾಯಬೇಕು. ಕೋರ್ಟಿನ ಆದೇಶದಷ್ಟು ಜೀವನಾಂಶ ಭತ್ಯೆ ಸಿಗದೆ ಒದ್ದಾಡುವ ಪರಿಸ್ಥಿತಿ. ಮಕ್ಕಳನ್ನು ನೋಡಿಕೊಳ್ಳಬೇಕು. ವಿಚ್ಛೇದಿತ ಮಹಿಳೆಯರಲ್ಲಿ ಶೇ.85 ರಷ್ಟು ಮಹಿಳೆಯರಿಗೆ ಮಕ್ಕಳಿರುತ್ತವೆ. ಅವರನ್ನು ನೋಡಿಕೊಳ್ಳುವ ಹೊಣೆ ಅವಳ ಮೇಲೆಯೇ ಇರುತ್ತದೆ. ವಿಚ್ಛೇದನದ ನಂತರ ವೈಭೋಗದ ಬದುಕು ನಡೆಸುವ ಗಂಡಸರು 88%ರಷ್ಟು. ಆದರೆ ಇದೇ ಹೊತ್ತಿನಲ್ಲಿ ವಿಚ್ಛೇದಿತ ಮಹಿಳೆಯು ಸಮಾಜದ ಕುಟುಂಬದ ಭೇದಭಾವಕ್ಕೆ, ಅವಜ್ಞೆಗೆ ಬಲಿಯಾಗುತ್ತ ಬದುಕುತಿರುತ್ತಾಳೆ. ವಿಚ್ಛೇದನದ ನಂತರ ತವರಿನಲ್ಲಿಯೇ ಇರುವವರ ಸಂಖ್ಯೆ ಶೇ.71. ಅವರ ಬದುಕು ಸಹ ಪರಾವಲಂಬನೆಯಿಂದಲೇ ಕೂಡಿರುತ್ತದೆ.

ಹೆಂಡತಿ ಸತ್ತ ಮೇಲೆ ಯಾವ ವಯಸ್ಸಿನ ಗಂಡಸಾದರೂ ಹೆಣ್ಣು ಕೊಡುವವರ ಸಂಖ್ಯೆಯಲ್ಲಿ ಯಾವ ಕೊರತೆಯೂ ಇಲ್ಲ. ಅವರು ಮತ್ತೆ ಹೊಸ ಬದುಕು ಕಟ್ಟಿ-ಕೊಂಡು ಜೀವನ ನಡೆಸುವರು. ಆದರೆ ಗಂಡ ಸತ್ತ ಮಹಿಳೆಯ ಪಾಲಿಗೆ ಮಾತ್ರ ಕಣ್ಣೀರ ಕಡಲೇ. ಮದುವೆಯಾಗದೆ ಉಳಿದ ಮಹಿಳೆಯರ ಸಂಖ್ಯೆಯು ಹೆಚ್ಚಿಗಿದೆ. ಅವರಿಗೂ ಅನೇಕ ಕಷ್ಟಗಳಿವೆ.



ಜನವಾದಿ ಮಹಿಳಾ ಸಂಘಟನೆಯು ಈ ತೆರನ ಒಂಟಿ ಮಹಿಳೆಯರ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಡುತ್ತಲೇ ಬಂದಿದೆ. ಈ ಮಹಿಳೆಯರ ಕುರಿತು ಸಮಾಜದ ದೃಷ್ಟಿಕೋನವು ಬದಲಾಗಬೇಕಾದ ಜರೂರಿ ಇದೆ. ಅಂತೆಯೇ ಮಹಿಳೆಯರಿಗಾಗಿ ಇರುವ ಕಾನೂನುಗಳನ್ನು ಜಾರಿ ಮಾಡಬೇಕು. ಈ ಮಹಿಳೆಯರ ರಕ್ಷಣೆಗೆ ಸರಕಾರವು ಗಮನ ಹರಿಸಬೇಕಿದೆ. ಒಂಟಿ ಮಹಿಳೆಯರು ನಾನಾ ನಮೂನೆಯ ಕೀಟಲೆ, ಸಂಕಷ್ಟಗಳಿಗೆ ತಲ್ಲಣಿಸುತ್ತಿರುವರು. ಸಾಮಾಜಿಕ ಅಪಮಾನ, ಅಭದ್ರತೆ, ಬಡತನ, ಹೀಗೆ ಅನೇಕ ಸಮಸ್ಯೆಗಳು ಇವೆ. ಈ ಒಂಟಿ ಮಹಿಳೆಯರಿಗೆ ಆರ್ಥಿಕ ನೆರವು ಮತ್ತು ಸುರಕ್ಷಿತ ಬದುಕು ಕೊಡಬೇಕೆಂದು ಜನವಾದಿ ಮಹಿಳಾ ಸಂಘಟನೆಯು ಸರಕಾರಕ್ಕೆ ಆಗ್ರಹಿಸಿತ್ತು. ಇತ್ತೀಚೆಗಿನ ಬಜೆಟು ಮಂಡನೆಯ ಸಂದರ್ಭದಲ್ಲಿ ಸರಕಾರವು ಒಂಟಿ ಮಹಿಳೆಯರಿಗೆ ತಿಂಗಳಿಗೆ ರೂ.500 ಮಾಶಾಸನ ಕೊಡಲು ತೀರ್ಮಾನಿಸಿದೆ. ಗಂಡ ಸತ್ತ ಎಲ್ಲ ಮಹಿಳೆಯರನ್ನೂ ಯಾವ ಷರತ್ತಿಲ್ಲದೆ ಒಂಟಿ ಮಹಿಳೆಯರ ವ್ಯಾಪ್ತಿಗೊಳಪಡಿಸಬೇಕಿದೆ. ಮಾಶಾಸನ ಹೆಚ್ಚಳದೊಂದಿಗೆ ಸುರಕ್ಷಿತ ವಾತಾವರಣವೂ ಕಲ್ಪಿಸಬೇಕಿದೆ. ಹಾಗೂ ಈ ಎಲ್ಲ ಮಹಿಳೆಯರು ಭದ್ರತೆಯ ಬದುಕಿನೊಂದಿಗೆ ಘನತೆಯಿಂದ ಗೌರವದಿಂದ ಬದುಕಿ ಬಾಳುವ ಹಕ್ಕು ಅವರಿಗಿದೆ ಎಂಬುದು ಸಮಾಜ ಅರಿಯಬೇಕಿದೆ.

ಈ ದಿಕ್ಕಿನಲ್ಲಿ ಜನವಾದಿ ಮಹಿಳಾ ಸಂಘಟನೆಯು ಜುಲೈ 28,13 ರಂದು ಬೆಳಿಗ್ಗೆ 10.30 ಗಂಟೆಗೆ ಹುಮನಾಬಾದ್ ನಗರದ ಭವಾನಿ ಮಂದಿರಲ್ಲಿ ಪ್ರಥಮ ಒಂಟಿ ಮಹಿಳೆಯರ ಸಮಾವೇಶವನ್ನು ಹಮ್ಮಿಕೊಂಡಿದೆ.

ಹಕ್ಕೊತ್ತಾಯಗಳು:-

1.ಒಂಟಿ ಮಹಿಳೆಯರ ಸಂಪೂರ್ಣ ಸಮೀಕ್ಷೆ ನಡೆಸಬೇಕು.

2.ಗಂಡ ಸತ್ತ ಮಹಿಳೆಯರನ್ನು ಒಂಟಿ ಮಹಿಳೆಯರ ವ್ಯಾಪ್ತಿಗೊಳಪಡಿಸಬೇಕು. ವಯಸ್ಸಿನ ಅಥವ ಮಕ್ಕಳ ಕುರಿತು ಯಾವುದೆ ಷರತ್ತುಗಳಿರಬಾರದು.

3.ತಿಂಗಳಿಗೆ ಮಾಸಾಶನ ಕನಿಷ್ಠ 1500 ನೆರವು ಕೊಡಬೇಕು

4.ಒಂಟಿ ಮಹಿಳೆಯರಿಗೆ ಕೆಲಸದಲ್ಲಿ, ಸರಕಾರಿ ಯೋಜನೆಗಳಲ್ಲಿ, ಸಾಲ ಸೌಲಭ್ಯದಲ್ಲಿ, ಇತ್ಯಾದಿಗಳಲ್ಲಿ ಪ್ರತ್ಯೇಕ ಮೀಸಲಾತಿ ಕಲ್ಪಿಸಬೇಕು.

5.ಈ ಮಹಿಳೆಯರ ಹಕ್ಕುಗಳ ಸಂರಕ್ಷಣೆಗಾಗಿ ಇರುವ ಎಲ್ಲ ಕಾನೂನುಗಳನ್ನು ಜಾರಿ ಮಾಡಬೇಕು. (ಆಸ್ತಿ ಹಕ್ಕು, ಓದುವ ಹಕ್ಕು, ದೌರ್ಜನ್ಯ ತಡೆ ಕಾನೂನು ಲಾಗು ಮಾಡುವುದು ಇತ್ಯಾದಿ)

6.ಸಾಲ ಸೌಲಭ್ಯದಲ್ಲಿ ಶೇ.50 ರಿಯಾಯಿತಿ ಕಲ್ಪಿಸಬೇಕು.

7.ಆರ್ಥಿಕವಾಗಿ ಹಿಂದುಳಿದ ಮಹಿಳೆಯರಿಗಾಗಿ ಆರ್ಥಿಕ ಸಬಲೀಕರಣದ ವಿಶೇಷ ಪ್ಯಾಕೇಜ್ ಘೋಷಿಸಬೇಕು.

8.ಯುವತಿಯರು ಹೊಸ ಬದುಕು ಕಟ್ಟಿಕೊಳ್ಳುವಲ್ಲಿ ಸರಕಾರ ಮುತುವರ್ಜಿ ವಹಿಸಬೇಕು. ಅವರಿಗೆ ಸೂಕ್ತವಾದ ಉದ್ಯೋಗ ನೀಡಿ ಸ್ವಾವಲಂಬಿಗಳನ್ನಾಗಿ ಮಾಡಬೇಕು.

ಎನ್‌ಕೌಂಟರ್.....

ಪುಟ 11 ರಿಂದ

ಅಲ್ಲಿ ಕಾಂಗ್ರೆಸ್-ಎನ್‌ಸಿಪಿ ಆಡಳಿತ.

ಮತಾಂಧ ಉನ್ಮಾದ

ಇನ್ನು ಗುಜರಾತ್ ವಿಷಯ. ನಕಲಿ ಎನ್‌ಕೌಂಟರ್ ಪ್ರಕರಣಗಳಲ್ಲಿ ಅತಿ ಹೆಚ್ಚು ಪೋಲೀಸರು ಜೈಲಿನಲ್ಲಿರುವ ರಾಜ್ಯ ಗುಜರಾತ್. ಷಹಬ್ಬಾಸ್!! ಗುಜರಾತ್‌ಗೆ 1ನೇ ರ್‍ಯಾಂಕ್ ಸಿಕ್ಕಿದೆ.

ಇಲ್ಲಿ ನಕಲಿ ಎನ್‌ಕೌಂಟರ್‌ಗಳಲ್ಲಿ ಹತರಾದವರ ಮೇಲೆ ಹಾಕಲಾಗಿರುವ ಒಂದು ಸಾಮಾನ್ಯ ಆರೋಪ ಎಂದ-ರೆ ಅವರುಗಳು ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿಯನ್ನು ಕೊಲ್ಲಲು ಸಂಚು ಮಾಡಿಕೊಂಡು ಬಂದಿದ್ದ 'ಲಷ್ಕರ್ ಇ ತೊಯ್ಬಾ' ಉಗ್ರರು ಎಂಬುದು. ಅವರುಗಳು ನಿಜವಾದ ಉಗ್ರರಾಗಿದ್ದರೆ ಅವರನ್ನು ಬಂಧಿಸಿದ ಮೇಲೆ ಸರಿಯಾದ ವಿಚಾರಣೆ-ಯ ಮೂಲಕ ಸತ್ಯವನ್ನು ಹೊರ ತರುವ ಕೆಲಸವನ್ನು ಪೋಲಿಸರು ಮಾಡಬೇಕಿತ್ತು. ಕಾನೂನುಬಾಹಿರವಾಗಿ ನಕಲಿ ಎನ್‌ಕೌಂಟರ್ ನಡೆಸಿ ಕೊಂದುಹಾಕುವ ಯಾವ ಅಗತ್ಯವೂ ಪೋಲಿಸರಿಗೆ ಇರಲೇ ಇಲ್ಲ. ಅಂ-ದರೆ ಗುಜರಾತ್ ಪೋಲಿಸರಿಗೆ 'ಸತ್ಯ' ಬೇಕಿಲ್ಲ ಎಂದಾಯಿತು. ಈ ಎಲ್ಲವುಗಳ ಮೂಲಕ ಅವರು ಬೇರೆನೋ ಸಾಧಿಸಲು ಪ್ರಯತ್ನಿಸಿದ್ದಾರೆ. ನರೇಂದ್ರ ಮೋದಿಯನ್ನು ಮತ್ತು ಬಿಜೆಪಿ, ವಿಶ್ವ ಹಿಂದೂ ಪರಿಷತ್ ಮುಖಂಡರನ್ನು 'ಮುಸ್ಲಿಂ ಉಗ್ರರು' ಕೊಲ್ಲಲು ಸತತ ಸಂಚು ನಡೆಸುತ್ತಿದ್ದಾರೆ ಎಂದು ಬಿಂಬಿಸಿ ಮೋದಿ ಮತ್ತು ಸಂಘದ ಮುಖಂಡರನ್ನು 'ಹಿಂದೂಗಳ ಹೀರೋ'ಗಳನ್ನಾಗಿ ಮಾಡುವ ಘೋರ ಮತಾಂಧ ಸಂಚು ಇದರಲ್ಲಿ ಇಲ್ಲವೇ ? ಈ ಪ್ರಶ್ನೆಗೆ ನಿಖರ ಉತ್ತರ ಸಿಗಬೇಕಿದೆ. ಸ್ವತಃ ನರೇಂದ್ರ ಮೋದಿ ಈ ಸಂಚಿನಲ್ಲಿ ಭಾಗಿಯಾಗಿಲ್ಲವೇ ? ಈ ಪ್ರಶ್ನೆಗಳಿಗೂ ಇಷ್ಟರಲ್ಲೇ ಉತ್ತರ ಸಿಗುವ ಸಾಧ್ಯತೆಗಳು ಕಾಣುತ್ತಿವೆ. ನರೇಂದ್ರ ಮೋದಿ ಎಂಬ ವ್ಯಕ್ತಿಯ ಅಸಹ್ಯಕರ ನಡವಳಿಕೆಗಳನ್ನು ಮತ್ತು ಮಾತುಗಳನ್ನು ಗಮನಿಸುತ್ತ ಬಂದವರಿಗೆ ಕೂಡ ಮೋದಿ ಈ ಸಂಚುಗಳಲ್ಲಿ ಇಲ್ಲ ಎನ್ನಲು ಮನಸಾಗುವುದಿಲ್ಲ. ಸಂಘಪರಿವಾರ ಮೋದಿಗಿಂತ ಭಿನ್ನವೇನಲ್ಲ.

ನಕಲಿ ಎನ್‌ಕೌಂಟರ್ ಪ್ರಕರಣಗಳಲ್ಲಿ ಬಲಿಯಾದ ಎಲ್ಲರೂ ಮುಗ್ದರಾ ? ಅಮಾಯಕರಾ ? ಎಂಬ ಪ್ರಶ್ನೆಯನ್ನು ಎತ್ತುವವರಿದ್ದಾರೆ. ಯಾರು ಅಮಾಯಕರು. ಯಾರು ಮುಗ್ದರು. ಯಾರು ಕ್ರಿಮಿನಲ್‌ಗಳು, ಯಾರು ಭಯೋತ್ಪಾದಕರು ಎಂದು ತೀರ್ಮಾನಿಸಲು ನಾಗರೀಕ ಸಮಾಜ ಒಪ್ಪಿಕೊಂಡಿರುವ ಸಂವಿಧಾನ ಬದ್ದವಾದ ಕ್ರಮಗಳಿವೆ. ಕಾನೂನು ಕೋರ್ಟುಗಳಿವೆ. ಸೂಕ್ತ ತನಿಖೆ ಸಾಕ್ಷಿ, ಆಧಾರ, ವಿಚಾರಣೆ, ಪರಿಶೀಲನೆ, ವಾದ, ಪ್ರತಿವಾದ, ವಿವರಣೆ, ವಿಶ್ಲೇಷಣೆ, ವಿವೇಚನೆಗಳೇ ಇಲ್ಲದೇ ನಕಲಿ ವಿಧಾನದಲ್ಲಿ ಯಾರಾದರೂ ಯಾರನ್ನಾದರೂ ತಮಗೆ ಬೇ... ಬೇಕಾದಂತೆ ಕೊಂದು ಹಾಕಿಬಿಡಬಹುದು. ಸಾಕ್ಷಿಗಳನ್ನು, ಜೀವಂತ ಸಾಕ್ಷಿದಾರರನ್ನು ಸುಟ್ಟು ಬೂದಿಮಾಡಿಬಿಡಬಹುದು ಎನ್ನುವ ಸ್ಥಿತಿಯನ್ನು 'ಪ್ರಜಾಪ್ರಭುತ್ವ' ಎನ್ನಲಾಗುವುದಿಲ್ಲ. . ಅದು ನಿರಪರಾಧಿ ಜನಗಳ ಹೆಣಗಳ ಮೇಲೆ ಭೂತ ಪ್ರೇತಗಳು ಕರುಣೆ ಇಲ್ಲದೇ ಕುಣಿಯುವ ಒಂದು 'ಫ್ಯಾಸಿಸ್ಟ್ ಸರ್ವಾಧಿಕಾರ'ದ ಕಡೆಗಿನ ಹೆಜ್ಜೆಗಳು ಎನ್ನಬೇಕಾಗುತ್ತದೆ. ಇದು ಗಂಭೀರವಾಗಿ ಯೋಚಿಸಬೇಕಾದ ಪ್ರಶ್ನೆ. ಜಾತೀಯತೆ, ಕೋಮುವಿದ್ವೇಷ, ಪುರುಷ ಪ್ರಧಾನ ಮೌಲ್ಯಗಳ ಕ್ರೌರ್ಯ, ಭೂಮಾಲಕರು-ಪಟ್ಟಭದ್ರ ಶಕ್ತಿಗಳ ಹಿಡಿತ ಮುಂತಾದ ನಾನಾ ರೀತಿಯ ಇಕ್ಕಳಗಳ ನಡುವೆ ಸಿಲುಕಿ ನರಳುವ ನಮ್ಮ ಸಮಾಜದ ಶೋಷಿತರು, ನೊಂದವರು, ದುರ್ಬಲರ ಬದ್ಕು ಇಂತಹ ಸನ್ನಿವೇಶಗಳಲ್ಲಿ ಏನಾಗುತ್ತದೆ ? ಊಹಿಸಿಕೊಳ್ಳಲು ಭಯವಾಗುತ್ತದೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಯುಪಿಎ ದರ್ಬಾರಿನಲ್ಲಿ ಈಗ 'ಊಟ'ದ ಹರಾಜು! 12ರೂ., 5ರೂ., 20/8 ರೂಪಾಯಿ!

ಬಡತನ ಎಷ್ಟೊಂದು ಇಳಿದಿದೆ ಎಂಬ ಅಪಲಾಪದ ನಂತರ ಈಗ ಯುಪಿಎ-2 ದರ್ಬಾರಿನಲ್ಲಿ ಊಟ ಎಷ್ಟು ಅಗ್ಗವಾಗಿದೆ ಎಂಬ ಬಗ್ಗೆ ಯುಪಿಎ ನೇತೃತ್ವದಲ್ಲಿರುವ ಪಕ್ಷದ ಮುಖಂಡರೊಳಗೇ ಪೈಪೋಟಿ ಆರಂಭವಾಗಿದೆ. ಕಾಂಗ್ರೆಸಿನ ಒಬ್ಬ ಮುಖಂಡ (ಅವರು ಪಕ್ಷದ ವಕ್ತಾರರು ಕೂಡ) ಮುಂಬೈಯಲ್ಲಿ 12ರೂ.ಗೆ ಹೊಟ್ಟೆ ತುಂಬಾ ಊಟ ಸಿಗುತ್ತದೆ ಎಂದರು, ಅದರಿಂದ ಸುಧಾರಿಸಿಕೊಳ್ಳುವಷ್ಟರಲ್ಲಿ ಇನ್ನೊಬ್ಬ ಮುಖಂಡರು ದಿಲ್ಲಿಯಲ್ಲಿ ಒಂದು ಊಟಕ್ಕೆ 5ರೂ. ಸಾಕು ಎಂದರು. ಅದನ್ನು ಅರಗಿಸಿಕೊಳ್ಳುವಷ್ಟರಲ್ಲಿ ಅಸ್ಸಾಂನ ಒಬ್ಬ ಮಂತ್ರಿಯಂತೂ ಗುವಾಹಾಟಿಯಲ್ಲಿ 20ರೂ.ಗಳಲ್ಲಿ 8 ಮಂದಿ ಹೊಟ್ಟೆ ತುಂಬಿಸಿಕೊಳ್ಳಬಹುದು ಎಂದು ಸಾರಿದರು.


ಯೋಜನಾ ಆಯೋಗದ ಬಡತನ ರೇಖೆಯ ಪ್ರಕಟಣೆಗೆ ದೇಶಾದ್ಯಂತ ಪ್ರಕಟವಾದ ಆಕ್ರೋಶಕ್ಕೆ ಉತ್ತರಿಸಬೇಕಾದ ಕಾಂಗ್ರೆಸ್ ವಕ್ತಾರರಿಗೆ ಅದು ಸರಕಾರದ್ದಲ್ಲ, ಯೋಜನಾ ಆಯೋಗದ ಲೆಕ್ಕಾಚಾರ ಎಂದು ಹೇಳಿ ತಪ್ಪಿಸಿಕೊಳ್ಳುವಷ್ಟರಲ್ಲಿ ಸುಸ್ತಾಗಿತ್ತು. ನಂತರ ಯುಪಿಎ ಮಂತ್ರಿಗಳೊಬ್ಬರು ಯೋಜನಾ ಆಯೋಗದ ಲೆಕ್ಕಾಚಾರಕ್ಕೆ ಸವಾಲನ್ನೇ ಹಾಕಿದರು. ಮಾಸಿಕ 5,000 ರೂ.ಗಳಲ್ಲಿ ಒಂದು ಕುಟುಂಬ ಹೇಗೆ ಬದುಕಲು ಸಾಧ್ಯ ಎಂದು ಪ್ರಶ್ನಿಸಿದರು. ಇನ್ನೊಬ್ಬ ಹಿರಿಯ ಕಾಂಗ್ರೆಸ್ ವಕ್ತಾರರು ಅದಕ್ಕೆ ದನಿಗೂಡಿಸಿದರು, ಅದರ ಮಾನದಂಡವೇ ತನಗೆ ಅರ್ಥವಾಗುತ್ತಿಲ್ಲ. ಅದು ಏಕೆ ಅಮೂರ್ತ ಮಾನದಂಡವನ್ನು ಅನುಸರಿಸುತ್ತಿದೆ ಎಂದೆಲ್ಲ ಪ್ರಶ್ನಿಸಿದರು.

ಆದರೆ ಇದರ ಬೆನ್ನಹಿಂದೆಯೇ ಈಗ ತಮ್ಮದೇ ಮುಖಂಡರುಗಳ 'ಊಟ'ದ ಈ ಪೈಪೋಟಿ ಅವರಿಗೆಲ್ಲ ಮುಜುಗರ ಉಂಟು ಮಾಡಿದೆಯಂತೆ. ಆ ಪಕ್ಷದ ಸಂಪರ್ಕ ವಿಭಾಗದ ಉಸ್ತುವಾರಿ ನೋಡಿಕೊಳ್ಳುವ ಪ್ರಧಾನ ಕಾರ್ಯದರ್ಶಿ "ನಾವು ಕೆಲವು ಮುಖಂಡರ 12ರೂ., 5ರೂ. ಹೇಳಿಕೆಗಳನ್ನು ಒಪ್ಪುವುದಿಲ್ಲ" ಎಂದಿದ್ದಾರೆ. ಆದರೆ ಯುಪಿಎ ದರ್ಬಾರಿನಲ್ಲಿ ಬಡತನ 37.2 ಶೇ.ದಿಂದ 21.9ಶೇ.ಕ್ಕೆ ಇಳಿದಿದೆ ಎಂದು ಅದೇ ಯೋಜನಾ ಆಯೋಗದ ಲೆಕ್ಕಾಚಾರದ ಆಧಾರದಲ್ಲಿಯೇ ಪುನರುಚ್ಚರಿಸಿದ್ದಾರೆ. ಬಡತನ ಅಷ್ಟೊಂದು ಇಳಿದಿರುವಾಗ ಊಟದ ಬೆಲೆ ಇಳಿದಿರಲೇಬೇಕು ಎಂದು ಕಾಂಗ್ರೆಸ್ ಮುಖಂಡರುಗಳು ತರ್ಕಿಸಿದರೆ ತಪ್ಪೇನು ಎಂಬುದಕ್ಕೆ ಅವರ ಬಳಿ ಸಮಜಾಯಿಷಿಯೇನೂ ಇರಲಿಲ್ಲ.


ಆದ್ದರಿಂದಲೇ ಬಹುಶಃ ಅಸ್ಸಾಂನ ಕೃಷಿ ಮಂತ್ರಿಗಳು ಇನ್ನು ಒಂದು ವಾರದಲ್ಲೇ 20ರೂ.ಗಳಲ್ಲಿ 8 ಮಂದಿ ಹೇಗೆ ಊಟ ಮಾಡಬಹುದು ಎಂಬುದನ್ನು ಒಂದು ಪತ್ರಿಕಾ ಸಮ್ಮೇಳನವನ್ನು ಕರೆದು ತೋರಿಸುತ್ತೇನೆ ಎಂದು ಸವಾಲು ಹಾಕಿದ್ದಾರೆ.

ಇದು 'ಜನರ ಭಾವನೆಗಳನ್ನು ಘಾಸಿಗೊಳಿಸುವ' ಹೇಳಿಕೆ ಎಂದು ಅವರ ಒಬ್ಬ ಸಹಯೋಗಿ ಮಂತ್ರಿಯೇ ಒಪ್ಪಿಕೊಂಡಿದ್ದಾರೆ. ಮಂತ್ರಿಗಳು, ಶಾಸಕರು ಇಂತಹ ಹೇಳಿಕೆಗಳನ್ನು ಕೊಡಬಾರದು ಎಂಬುದು ಅವರ ಅಭಿಪ್ರಾಯ. ಇಂತಹ ಹೇಳಿಕೆಗಳು

ಪುಟ 15 ಕ್ಕೆ



ವೇದರಾಜ ಎನ್.ಕೆ.



'ದಿ ಹಿಂದೂ'ನಲ್ಲಿ ಸುರೇಂದ್ರನ್ ವ್ಯಂಗ್ಯ

ಮತ್ತೆ ಹಣದುಬ್ಬರ ಏರಿಕೆ, ಮತ್ತೆ ಪೆಟ್ರೋಲ್ ಬೆಲೆಯೇರಿಕೆ!

ಈ ತಲೆಬರಹವನ್ನು ಈ ಅಂಕಣದಲ್ಲಿ ನಮ್ಮ ಓದುಗರು ಹಲವು ಬಾರಿ ನೋಡಿದ್ದಾರೆ. ಆದರೇನು ಮಾಡುವುದು, ಮತ್ತೆ ಅದೇ ತಲೆಬರಹ. ಯುಪಿಎ ದರ್ಬಾರಿನಲ್ಲಿ ಇದು ಮತ್ತೆ-ಮತ್ತೆ ಸಂಭವಿಸುತ್ತಲೇ ಇದೆ. **ಇದರ ನಡುವೆಯೂ ಬಡತನ ಇಳಿಯುತ್ತಿದೆ, ಊಟ ಅಗ್ಗವಾಗಿದೆ ಎಂದರೆ ಅದು ಯುಪಿಎ ಪವಾಡವೇ ತಾನೇ?**

ಜೂನ್ 1ರಿಂದ ಜುಲೈ 31ರ ನಡುವೆ ಪೆಟ್ರೋಲ್ ದರಗಳನ್ನು ಈಗ ಐದನೇ ಬಾರಿಗೆ ಹೆಚ್ಚಿಸಲಾಗಿದೆ, 7ರೂ.ಗಿಂತಲೂ ಹೆಚ್ಚಿನ ಏರಿಕೆಯಾಗಿದೆ. ಡೀಸೆಲ್ ಬೆಲೆಗಳ ಏರಿಕೆಯ ಮಾಸಿಕ ಕಂತುಗಳು ಸಾಗಿಯೇ ಇವೆ. ಸರಕಾರದ ಜನವರಿ ತಿಂಗಳ ಪ್ರಕಟಣೆಯ ಪ್ರಕಾರ ಡೀಸೆಲ್ ಮೇಲಿನ 'ಸಬ್ಸಿಡಿ' ಈ ಮಾಸಿಕ ಏರಿಕೆಗಳಿಂದ ಈಗ ಸೊನ್ನೆಗೆ ಇಳಿಯಬೇಕಾಗಿತ್ತಂತೆ. ಆದರೆ ರೂಪಾಯಿ ಬೆಲೆ ಕುಸಿದಿರುವುದರಿಂದ ಮತ್ತು ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಪೆಟ್ರೋಲಿಯಂ ದರಗಳು ಏರಿದ್ದರಿಂದಾಗಿ ಇನ್ನೂ ತೈಲ ಮಾರಾಟ ಕಂಪನಿಗಳು 'ನಷ್ಟ' ಅನುಭವಿಸುತ್ತಲೇ ಇವೆಯಂತೆ! ಆದ್ದರಿಂದಲೇ ಈ ದರ ಏರಿಕೆಗಳು!

ಈ ನಡುವೆ ಚಿಲ್ಲರೆ ಕೈಗಾರಿಕಾ ಕಾರ್ಮಿಕರ ಗ್ರಾಹಕ ಬೆಲೆ ಸೂಚ್ಯಂಕದಲ್ಲಿ 3 ಪಾಯಿಂಟುಗಳ ಹೆಚ್ಚಳವಾಗಿದೆ, ಇದರ ಆಧಾರದಲ್ಲಿ ಲೆಕ್ಕ ಹಾಕಿದಾಗ **ಹಣದುಬ್ಬರ ದರ ಮೇ ತಿಂಗಳಲ್ಲಿ 10.68ಶೇ. ಇದ್ದದ್ದು, ಜೂನ್ ತಿಂಗಳಲ್ಲಿ 11.06ಶೇ.ಕ್ಕೆ ಏರಿದೆ.** ಆಹಾರದ ಬೆಲೆಗಳು, ವಿದ್ಯುತ್ ದರಗಳು, ಡಾಕ್ಟರುಗಳ ಶುಲ್ಕಗಳು, ಔಷಧಿಗಳ ಬೆಲೆಗಳು ಮತ್ತು ಪೆಟ್ರೋಲ್ ಬೆಲೆಗಳು ಏರಿದ್ದರಿಂದಾಗಿ ಈ ಏರಿಕೆ ಆಗಿದೆ ಎಂದು ಯುಪಿಎ-2 ಸರಕಾರದ ಕಾರ್ಮಿಕ ಇಲಾಖೆಯ ಹೇಳಿಕೆ ತಿಳಿಸಿದೆ. ಇದರಲ್ಲಿ ಈ ಐದು ಪೆಟ್ರೋಲ್ ದರ ಏರಿಕೆಗಳ ಪೂರ್ಣ ಪರಿಣಾಮ ಇನ್ನೂ ಕಂಡಿಲ್ಲ ಎಂಬುದನ್ನೂ ಗಮನಿಸಬೇಕು.

ಅಗತ್ಯ ಮಾಹಿತಿ ಹಂಚಿಕೊಳ್ಳುವಲ್ಲಿ 'ಜಿಪುಣತನ' ತೋರುವ ಅಮೆರಿಕಾದ ಈ ಪರಿಯ 'ಆಯಕಟ್ಟಿ'ನ ವಿಶ್ವಾಸ!

ಜುಲೈ 2ನೇ ವಾರದಲ್ಲಿ ವಾಶಿಂಗ್ಟನ್‌ನಲ್ಲಿ ಅಮೆರಿಕ-ಭಾರತ ವ್ಯವಹಾರ ಮಂಡಳಿ(ಯುಎಸ್‌ಐಬಿಸಿ) ಸಭೆ ನಡೆಯಿತು. ಯುಪಿಎ-2 ಸರಕಾರ ತನ್ನ ಸುಧಾರಣೆಗಳ, ಎಫ್‌ಡಿಐಗಳ ಹೊಸ ಕಂತನ್ನು ಪ್ರಕಟಿಸಿದ್ದು ಅದರ ನಂತರವೇ ಎನ್ನಲಾಗುತ್ತದೆ. ಅಲ್ಲಿ ಅಮೆರಿಕಾ ವಿದೇಶಾಂಗ ವ್ಯವಹಾರಗಳ ಇಲಾಖೆಯ ಉಪ ಸಹಾಯಕ ಕಾರ್ಯದರ್ಶಿಗಳು ಭಾರತ-ಅಮೆರಿಕಾ ಪರಮಾಣು ಒಪ್ಪಂದವನ್ನು ನೆನಪಿಸಿದರು, ಮುಖ್ಯವಾಗಿ ಅದರ ವಾಣಿಜ್ಯ ಭರವಸೆಯನ್ನು ಬೇಗನೇ ಈಡೇರಿಸಬೇಕಾಗಿದೆ ಎಂದು ಭಾರತಕ್ಕೆ ನೆನಪಿಸಿದರಂತೆ, ಅಂದರೆ ಭಾರತದ ಸರಕಾರ ಆ ವಿಷಯದಲ್ಲಿ ನಿಧಾನ ಗತಿಯಲ್ಲಿ ಸಾಗಿದೆ ಎಂಬುದು ಅವರ ಇಂಗಿತವಾಗಿರಬಹುದು.

ನಿಜ, ಭಾರತ-ಅಮೆರಿಕಾ ಸಂಬಂಧಗಳು ಅಪಾರವಾಗಿ ಬೆಳೆದಿವೆ, ಅದರಲ್ಲೂ ರಕ್ಷಣಾ ವಲಯದಲ್ಲಿ ಅಪಾರ ಪ್ರಗತಿಯಾಗಿದೆ, ಏಕೆಂದರೆ ಭಾರತ ಆ ದೇಶದಿಂದ ಬಹಳಷ್ಟು ಮಿಲಿಟರಿ ಸರಕುಗಳನ್ನು ಖರೀದಿಸುವ 20 ಒಪ್ಪಂದಗಳನ್ನು ಮಾಡಿಕೊಂಡಿದೆ, ಇದು ಬರೀ ವ್ಯಾಪಾರವಲ್ಲ, ಭಾರತದೊಂದಿಗೆ ಪರಸ್ಪರ ವಿಶ್ವಾಸದ, ಸಹಕಾರದ ಒಂದು 'ಆಯಕಟ್ಟಿನ ಸಂಬಂಧ'ಗಳ ಆಧಾರ, ಇದಕ್ಕೆ ಅಮೆರಿಕಾ ಬಹಳ ಬೆಲೆ ಕೊಡುತ್ತದೆ ಎಂದೆಲ್ಲ ಇತರ ಅಮೆರಿಕನ್ ಆಳರಸರ ಪ್ರತಿನಿಧಿಗಳು ಆಗಾಗ ಹೇಳುತ್ತಿರುವುದನ್ನು ಪುನರುಚ್ಚರಿಸಿದರು.

ರಕ್ಷಣಾ ವಲಯದಲ್ಲಿಯೇ ಇಷ್ಟೊಂದು ವ್ಯವಹಾರ ನಡೆಸಿದ ನಂತರವೂ 'ಪರಸ್ಪರ ಹಿತ'ದ ದೃಷ್ಟಿಯಿಂದ, ವಿಶ್ವಾಸದಿಂದ ಅದು ವ್ಯವಹರಿಸುತ್ತಿದೆಯೇ ಎಂಬ ಬಗ್ಗೆ ಸಂದೇಹ ಭಾರತದ ರಾಷ್ಟ್ರೀಯ ಭದ್ರತಾ ಸಲಹೆಗಾರರಿಗೂ ಉಂಟಾದಂತಿದೆ.

ಅವರು ಗೃಹ ಮಂತ್ರಿಗಳಿಗೆ ಜೂನ್ 27ರಂದು ಒಂದು ಟಿಪ್ಪಣಿ ಸಲ್ಲಿಸಿದ್ದು, ಅದರಲ್ಲಿ ಅಮೆರಿಕಾ ಜಗತ್ತಿನಾದ್ಯಂತದಿಂದ ಬಹಳಷ್ಟು ಮಾಹಿತಿಗಳನ್ನು, ಭಾರತೀಯರ ಬಗ್ಗೆಯೂ ಕಲೆ ಹಾಕುತ್ತಿದೆ, ಆದರೆ ಅದನ್ನು ನಮ್ಮೊಂದಿಗೆ ಹಂಚಿಕೊಳ್ಳುವಲ್ಲಿ ಬಹಳ 'ಜಿಪುಣತನ' ತೋರುತ್ತಿದೆ ಎಂದು ಅವರು ಬೇಸರದಿಂದ, ಹತಾಶೆಯಿಂದ ಅಭಿಪ್ರಾಯ ಪಟ್ಟಿರುವುದಾಗಿ ವರದಿಯಾಗಿದೆ. ಈ ಟಿಪ್ಪಣಿಯನ್ನು ಕಾನೂನು ಮಂತ್ರಿಗಳಿಗೆ, ಸಂಪರ್ಕ ಮಂತ್ರಿಗಳಿಗೆ ಮತ್ತು ಇನ್ನೂ ಕೆಲವು ಉನ್ನತ ಅಧಿಕಾರಿಗಳಿಗೂ ಕಳಿಸಲಾಗಿದೆಯಂತೆ.

ಕಳೆದ ಬೇಸಗೆಯಲ್ಲಿ ಬೆಂಗಳೂರು ಸೇರಿದಂತೆ, ದಕ್ಷಿಣ ಮತ್ತು ಪಶ್ಚಿಮ ಭಾರತದಲ್ಲಿ ಈಶಾನ್ಯ ಭಾರತದಿಂದ ಬಂದು ನೆಲೆಸಿದ್ದ ಜನರಲ್ಲಿ ಭೀತಿ ಸೃಷ್ಟಿಸಿ, ಅವರು ದೊಡ್ಡ ಪ್ರಮಾಣದಲ್ಲಿ ಓಡಿ ಹೋಗುವಂತೆ ಮಾಡಲು ಅಂತರ್ಜಾಲವನ್ನು ಬಳಸಲಾಗಿತ್ತು. ಯಾರು, ಎಲ್ಲಿಂದ ಈ ಕ್ರಿಮಿನಲ್ ಚಟುವಟಿಕೆಗಳನ್ನು ನಡೆಸಿದ್ದು ಎಂಬ ಮಾಹಿತಿ ಅಮೆರಿಕಾ ಅಂತರ್ಜಾಲ ಕಂಪೆನಿಗಳ ಮೂಲಕ ಅಮೆರಿಕಾ ಆಡಳಿತದ ಬಳಿಯಿದ್ದರೂ, ಖಾಸಗಿ ಗುಪ್ತತೆಯ ಕಾನೂನುಗಳ ಹೆಸರಿನಲ್ಲಿ ಅದನ್ನು ಕೊಡಲಿಲ್ಲ ಎಂಬ ಒಂದು ಉದಾಹರಣೆ ಆ ಟಿಪ್ಪಣಿಯಲ್ಲಿ ಇದೆ ಎಂದು ತಿಳಿದು ಬಂದಿದೆ. ಅಮೆರಿಕನ್ ಸರಕಾರ ಆ ಕಾನೂನನ್ನೂ ಮೀರಿ ಜಗತ್ತಿನಾದ್ಯಂತ ಬೇಹುಗಾರಿಕೆಯಲ್ಲಿ ತೊಡಗಿರುವುದು ಬಟಾ ಬಯಲಾಗಿರುವಾಗ ಇದು ಕೇವಲ ಸಬೂಬು ಎಂಬುದರಲ್ಲಿ ಯಾರಿಗೂ ಸಂದೇಹ ಉಳಿದಿಲ್ಲ. ಸಂದೇಹವೇನಾದರೂ ಇದ್ದರೆ ಈಗ ಅಮೆರಿಕಾ ಟಾಂಟಾಂ ಮಾಡುತ್ತಿರುವ ಭಾರತದೊಂದಿಗಿನ ವಿಶ್ವಾಸದ ಸಂಬಂಧಗಳ ಬಗ್ಗೆ. ಅಮೆರಿಕಾಕ್ಕೆ ಭಾರತ ಒಂದು 'ಅಡಿಯಾಳು ಮಿತ್ರ' ಮಾತ್ರ ಎಂಬ ಎಡಪಕ್ಷಗಳ ಟೀಕೆ ಈಗ ಮತ್ತೊಮ್ಮೆ ನಿಜವಾಗಿದೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಅಮೆರಿಕಾದ ಬಂಡವಾಳಶಾಹಿಯ ಕ್ಷೀಣಿಸುವ ಪ್ರಕ್ರಿಯೆಯಲ್ಲಿ 'ಡೆಟ್ರಾಯಿಟ್ ದಿವಾಳಿ' ಒಂದು ಚಿಕ್ಕ ಸಾಕ್ಷಿ

ಬಂಡವಾಳಗಾರರ ಸ್ವರ್ಗವೆಂದೇ ಪ್ರಚಾರದಲ್ಲಿರುವ ಅಮೆರಿಕಾ (ಅಮೆರಿಕಾ ಸಂಯುಕ್ತ ಸಂಸ್ಥಾನಗಳು) ದೇಶದಲ್ಲಿ ಜನರ ಸಂಕಷ್ಟಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿವೆ. ಅಮೆರಿಕಾದ ದೊಡ್ಡ ಬಂಡವಾಳಗಾರರು ಲಾಭದ ಬೇಟೆಯಲ್ಲಿ ಜಗತ್ತಿನ ಎಲ್ಲ ದೇಶಗಳ ಜನರನ್ನು ಸುಲಿಗೆ ಮಾಡುವುದಷ್ಟೇ ಅಲ್ಲ, ಅವರದೇ ದೇಶದ ದುಡಿಯುವ ಜನರನ್ನು ಹಿಂಡಿ ಹಿಪ್ಪಿ ಮಾಡಿ ಕಸದ ತೊಟ್ಟಿಗೆ ತಳ್ಳುತ್ತಿದ್ದಾರೆ. ಇಂತಹ ಪ್ರಕ್ರಿಯೆಯಲ್ಲಿ ಅಮೆರಿಕಾ ನಗರ ಪಟ್ಟಣಗಳ ಆಡಳಿತಗಳು ದಿವಾಳಿ ಅರ್ಜಿಗಳನ್ನು ನ್ಯಾಯಾಲಯಗಳಿಗೆ ಸಲ್ಲಿಸಿ ಜನ ಸಾಮಾನ್ಯರಿಗೆ ಕನಿಷ್ಠ ನಾಗರೀಕ





ಸೌಲಭ್ಯಗಳನ್ನು ನಿರಾಕರಿಸುತ್ತಿವೆ. ಕಾರ್ಮಿಕರ ವೇತನ ಭತ್ಯೆಗಳನ್ನು ಕಡಿತ ಮಾಡುವುದಷ್ಟೆ ಅಲ್ಲ, ನಿವೃತ್ತ ಕಾರ್ಮಿಕರಿಗೆ ಅವರ ಜೀವಮಾನದ ಉಳಿತಾಯಗಳಿಂದ ಪಡೆಯಬೇಕಾದ ಪಿಂಚಣಿಯನ್ನು ಕಡಿತ ಮಾಡುವುದು ಅಥವಾ ನುಂಗಿ ಹಾಕುವ ವಿಧಾನಗಳನ್ನು ಅನುಸರಿಸಲಾಗುತ್ತಿದೆ.

ಅಮೆರಿಕಾದಲ್ಲಿ 2010 ರಿಂದ ಕಳೆದ 3 ವರ್ಷಗಳಲ್ಲಿ 36 ನಗರ ಪಟ್ಟಣಗಳ ಆಡಳಿತಗಳು ದಿವಾಳಿ ತಾವು ಆಗಿರುವುದಾಗಿ ನ್ಯಾಯಾಲಯಗಳಿಗೆ ಅರ್ಜಿ ಹಾಕಿ ನಾಗರೀಕ ಸೌಲಭ್ಯಗಳನ್ನು ಒದಗಿಸುವ ಜವಾಬ್ದಾರಿಯನ್ನು ನಿಭಾಯಿಸಲಾಗುವುದಿಲ್ಲ ಮತ್ತು ಸಾರ್ವಜನಿಕ ಹೊಣೆಗಾರಿಕೆಗಳನ್ನು ನಿರ್ವಹಿಸಲು ಸಾಧ್ಯವಾಗುವುದಿಲ್ಲವೆಂದು ಅರ್ಜಿಗಳನ್ನು ಸಲ್ಲಿಸಿವೆ. ಸದರಿ ನಗರ ಆಡಳಿತಗಳ ಅಡಿಯಲ್ಲಿ ದುಡಿಯುತ್ತಿರುವ ಕಾರ್ಮಿಕರಿಗೆ ಕನಿಷ್ಠ ಕೂಲಿಯನ್ನು ಪಾವತಿ ಮಾಡದೇ ಕೂಲಿ ಕಡಿತದ ಪ್ರಕ್ರಿಯೆಗೆ ಚಾಲನೆ ನೀಡಲಾಗಿದೆ. ಅಲ್ಲದೇ ಕೊನೆಗೆ ಶಾಲೆಗಳನ್ನು ಮುಚ್ಚುವುದು, ಆಸ್ಪತ್ರೆಗಳನ್ನು ಮುಚ್ಚುವುದು ಮತ್ತು ಸಾರ್ವಜನಿಕ ರಸ್ತೆಗಳಲ್ಲಿ ಬೀದಿ ದೀಪಗಳನ್ನು ರಾತ್ರಿ ಹೊತ್ತು ಬೆಳಕು ನೀಡದಂತೆ ಮಾಡಿ ಹಲವು ನಗರಗಳಲ್ಲಿ ಅಪರಾಧಗಳ ಸಂಖ್ಯೆಯು ಏರಿಕೆ ಆಗುತ್ತಿದೆ.

ದಿವಾಳಿ ಅರ್ಜಿ ಸಲ್ಲಿಸಿರುವ ನಗರ, ಪಟ್ಟಣಗಳಲ್ಲಿ ಅಮೆರಿಕಾ ಇತಿಹಾಸದಲ್ಲೇ 2ನೇ ದೊಡ್ಡ ನಗರದ ಹೆಗ್ಗಳಿಕೆಯನ್ನು ಪಡೆದಿದ್ದ 'ಡೆಟ್ರಾಯಿಟ್ ನಗರ' ದಿವಾಳಿ ಅರ್ಜಿಯನ್ನು ಜುಲೈ 18, 2013 ರಂದು ನ್ಯಾಯಾಲಯದ ಮುಂದೆ ಸಲ್ಲಿಸಿರುವುದು ಪ್ರಪಂಚದ ಎಲ್ಲಾ ಸುದ್ದಿ ಮಾಧ್ಯಮಗಳ ಗಮನ ಸೆಳೆದ ಪ್ರಮುಖ ಸುದ್ದಿ ಆಗಿದೆ. ಅಮೆರಿಕಾ ದೇಶದ 'ಮೋಟಾರ್ ನಗರ' ಎಂದೆ ಖ್ಯಾತಿ ಪಡೆದಿದ್ದ ಡೆಟ್ರಾಯಿಟ್ ನಗರವು 1,701 ರಲ್ಲಿ ಫ್ರಾನ್ಸ್ ದೇಶದ ಅಧಿಕಾರಿಯೊಬ್ಬರ ಮುತುವರ್ಜಿಯಿಂದ ಡೆಟ್ರಾಯಿಟ್ ನದಿಯ ದಡದಲ್ಲಿ ಸ್ಥಾಪನೆ ಆಗಿತ್ತು. 2ನೇ ಪ್ರಪಂಚ ಯುದ್ಧದ ಕಾಲಘಟ್ಟದಿಂದ ಇಂಗ್ಲೆಂಡ್ (ಬ್ರಿಟೀಷ್) ಕೇಂದ್ರಿತ ವಿಶ್ವ ಆರ್ಥಿಕ ವ್ಯವಸ್ಥೆಯು ಅಮೆರಿಕಾ ಕೇಂದ್ರಿತ ಆರ್ಥಿಕ ವ್ಯವಸ್ಥೆಯಾಗಿ ಬದಲಾದ ಸನ್ನಿವೇಶದಲ್ಲೇ ಅತ್ಯಂತ ತೀವ್ರಗತಿಯಲ್ಲಿ ಬೆಳವಣಿಗೆ ಹೊಂದಿದ ನಗರವೆಂದರೆ ಡೆಟ್ರಾಯಿಟ್ ನಗರ. ಅಮೆರಿಕಾದ ಈಶಾನ್ಯ ಭಾಗದ ತುದಿಯಲ್ಲಿರುವ ಡೆಟ್ರಾಯಿಟ್ ನಗರವು 1950ರ ಜನಗಣತಿಯಂತೆ 18 ಲಕ್ಷ ಜನಸಂಖ್ಯೆ ಹೊಂದಿದ ಒಂದು ಮಹಾನಗರವಾಗಿ ರೂಪುಗೊಂಡಿತು. ಡೆಟ್ರಾಯಿಟ್ ನಗರವು 'ಮೋಟಾರ್ ನಗರ' ಎಂದು ಹೆಸರು ಪಡೆಯಲು ಮುಖ್ಯ ಕಾರಣ ಇಡೀ ಜಗತ್ತಿನ ಕಾರುಗಳು ಮತ್ತು ಆಟೋಮೊಬೈಲ್ ಉತ್ಪಾದನೆಯ ದೈತ್ಯ ಕಂಪನಿಗಳಾದ ಫೋರ್ಡ್, ಜನರಲ್ ಮೋಟಾರ್ಸ್ ಮತ್ತು ಕ್ರಿಸಲರ್ ಕಂಪನಿಗಳು ಈ ನಗರದಲ್ಲೇ ಕಾರ್ಯನಿರ್ವಹಿಸುತ್ತಿರುವುದು. ವಿಶ್ವದ ಕಾರು ಮತ್ತು ಆಟೋಮೊಬೈಲ್ ಮಾರುಕಟ್ಟೆಯ ಶೇ. 80 ರಷ್ಟು ವ್ಯವಹಾರವನ್ನು ನಿಯಂತ್ರಿಸುವ ಜಗತ್ತಿನ 6 ಕಂಪನಿಗಳಲ್ಲಿ ಮೇಲಿನ ಮೂರು ಕಂಪನಿಗಳು ಪ್ರಮುಖವಾಗಿವೆ.

2008 ರಲ್ಲಿ ಅಮೆರಿಕಾದ ಹಲವು ಹಣಕಾಸು ಸಂಸ್ಥೆಗಳು ಅವ್ಯವಹಾರದ ಕಾರಣದಿಂದ ಲೇಮನ್ ಬ್ರದರ್ಸ್ ಮುಂತಾದ ಕಂಪನಿಗಳು ದಿವಾಳಿ ಘೋಷಣೆ ಮಾಡಿದ ಪರಿಣಾಮವಾಗಿ ಅಮೆರಿಕಾದ ಲಕ್ಷಾಂತರ ಹೂಡಿಕೆದಾರರಾಗಿರುವ ಜನ ಸಾಮಾನ್ಯರು ಅವರ ಹಣವನ್ನು ಷೇರು ಪೇಟೆಯೆಂಬ ಮಾಯಾಜಾಲದಲ್ಲಿ ಕಳೆದುಕೊಂಡರು.

ಅದರ ಪರಿಣಾಮವಾಗಿ ಲಕ್ಷಾಂತರ ಅಮೆರಿಕಾದ ಹೂಡಿಕೆದಾರರು ಮಾತ್ರವಲ್ಲ ಜಗತ್ತಿನ ಲಕ್ಷಾಂತರ ಕಂಪನಿಗಳ ಹೂಡಿಕೆಗಳು ಆವಿ ಆಗಿಹೋಯಿತು. ಈ ಪ್ರಕ್ರಿಯೆಯಲ್ಲಿ ಡೆಟ್ರಾಯಿಟ್ ನಗರದಿಂದ ಉತ್ಪಾದನಾ ಕಾರ್ಯನಿರ್ವಹಿಸುತ್ತಿರುವ ಪ್ರಮುಖ ಕಾರು ಮತ್ತು ಆಟೋಮೊಬೈಲ್ ಮೂರು ಕಂಪನಿಗಳು

ಎಸ್. ಪ್ರಸನ್ನ ಕುಮಾರ್



ಆರ್ಥಿಕ ಸಂಕಷ್ಟಕ್ಕೆ ಗುರಿಯಾಗಿರುವುದಾಗಿ ಒಬಾಮಾ ಸರಕಾರಕ್ಕೆ ಅರ್ಜಿ ಹಾಕಿ ಅಮೆರಿಕಾ ತೆರಿಗೆದಾರರಿಂದ ಸಂಗ್ರಹವಾಗಿದ್ದ ಖಜಾನೆ ಹಣದಿಂದ ಕೋಟ್ಯಾಂತರ ಡಾಲರುಗಳ ಪರಿಹಾರವನ್ನು ಪಡೆದರು. ಜಗತ್ತಿನ ದೊಡ್ಡ ಬಂಡವಾಳಗಾರರಿಗೆ ಕೋಟ್ಯಂತರ ಡಾಲರುಗಳ ಉದಾರ ಸಹಾಯವನ್ನು ಜನ ಸಾಮಾನ್ಯರ ತೆರಿಗೆ ಹಣದಿಂದ ನೀಡಿದ ಅಮೆರಿಕಾ ಸರಕಾರವು ಜನಸಾಮಾನ್ಯರ ಅಗತ್ಯಗಳನ್ನು ಪೂರೈಸಲು ಅವಶ್ಯಕತೆ ಇರುವ ಸಹಾಯಧನ ನೀಡದೇ ಡೆಟ್ರಾಯಿಟ್ ನಗರ ಆಡಳಿತ ಮತ್ತು ಮಿಚಿಗನ್ ರಾಜ್ಯ ಸರಕಾರ ನ್ಯಾಯಾಲಯಕ್ಕೆ ದಿವಾಳಿ ಅರ್ಜಿಯನ್ನು ಸಲ್ಲಿಸಬೇಕಾಗಿ ಬಂದಿದೆ.

2010 ರಿಂದ 8 ಲಕ್ಷದ 50 ಸಾವಿರದಷ್ಟು ಕಾರ್ಮಿಕರು ಉತ್ಪಾದನಾ ಕ್ಷೇತ್ರದಲ್ಲಿ ದುಡಿಯುತ್ತಿದ್ದಲ್ಲಿ ಸು. ಲಕ್ಷದಷ್ಟು ಕಾರ್ಮಿಕರನ್ನು ಕೆಲಸದಿಂದ ತೆಗೆದುಹಾಕಲಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಡೆಟ್ರಾಯಿಟ್‌ನಿಂದ ಅತ್ಯಂತ ಹೆಚ್ಚು ರಫ್ತಾಗುತ್ತಿರುವ ಸರಕು ಅಥವಾ ಸಂಪನ್ಮೂಲ ಯಾವುದು ಎಂದರೆ ಅದು ಮಾನವ ಸಂಪನ್ಮೂಲ ಎಂದು ವ್ಯಾಖ್ಯಾನಿಸಲಾಗುತ್ತಿದೆ. 1950ರಲ್ಲಿ 18 ಲಕ್ಷದಷ್ಟಿದ್ದ ಜನಸಂಖ್ಯೆಯು ಈಗ 7ಲಕ್ಷಗಳಿಗೆ ಕುಸಿದಿದೆ. ಅಲ್ಲದೆ ನಗರದಲ್ಲಿ 76,000 ಕಟ್ಟಡಗಳು ಖಾಲಿಯಾಗಿ ಬಿಕೋ ಎನ್ನುತ್ತಿವೆ. ರಾತ್ರಿ ಹೊತ್ತು ಬೀದಿ ದೀಪ ಉರಿಯುತ್ತಿಲ್ಲ. ಅಮೆರಿಕಾ ದೇಶದ ಅತ್ಯಂತ ಹೆಚ್ಚು ಅಪರಾಧಗಳು ಡೆಟ್ರಾಯಿಟ್ ನಗರದಲ್ಲಿ ನಡೆಯುತ್ತಿವೆ ಎಂದು ಅಮೆರಿಕಾದ ಅಪರಾಧ ತನಿಖಾ ಸಂಸ್ಥೆ ಎಫ್‌ಬಿಐ ವರದಿಯಲ್ಲಿ ನಮೂದಿಸಲಾಗಿದೆ. ಬಂಡವಾಳಗಾರರು ಲಾಭದ ಬೇಟೆಯಲ್ಲಿ ಮನುಷ್ಯನಿಗೆ ಮತ್ತು ಮಾನವೀಯ ಮೌಲ್ಯಗಳಿಗೆ ಯಾವುದೇ ಮಹತ್ವವಿಲ್ಲ ಎಂಬುದು ಡೆಟ್ರಾಯಿಟ್ ದಿವಾಳಿ ಮತ್ತು ದುಸ್ಥಿತಿಯಿಂದ ಸಾಬೀತಾಗುತ್ತದೆ. ಬಂಡವಾಳಗಾರರ ನಿಯಂತ್ರಿತ ಸಾಮಾಜಿಕ ಪದ್ಧತಿ ಹೆಚ್ಚುಕಾಲ ಮನುಷ್ಯರಿಗೆ ನೆಮ್ಮದಿಯಿಂದ ಬದುಕಲು ಅವಕಾಶ ನೀಡುವುದಿಲ್ಲ ಮತ್ತು ಇಂತಹ ಮಾನವ ವಿರೋಧಿ ವ್ಯವಸ್ಥೆ ಬಾಳಿಕೆ ಬರುವುದಿಲ್ಲ ಎನ್ನುವುದಕ್ಕೆ ಡೆಟ್ರಾಯಿಟ್ ಪರಿಸ್ಥಿತಿ ತಾಜಾ ಉದಾಹರಣೆಯಾಗಿದೆ.

'ಜನಶಕ್ತಿ'ಯ ಆಡಳಿತ ವ್ಯವಸ್ಥೆ ಬದಲಾಗಿದೆ
ಚಂದಾದಾರರೇ? ಏಜೆನ್ಸಿದಾರರೇ? ದಯವಿಟ್ಟು ಗಮನಿಸಿ

'ಜನಶಕ್ತಿ ಕನ್ನಡ ವಾರ ಪತ್ರಿಕೆ'ಯ ಆಡಳಿತ ಮತ್ತು ಪ್ರಸಾರ ನಿರ್ವಹಣೆಯ ಜವಾಬ್ದಾರಿ ಬದಲಾವಣೆಯಾಗಿರುವುದನ್ನು ಈಗಾಗಲೇ ಗಮನಿಸಿದ್ದೀರಿ ಎಂದು ಭಾವಿಸುತ್ತೇವೆ. ಹೊಸ ಚಂದಾಗಳ ನೀಡಿಕೆ, ವಿಳಾಸ ಬದಲಾವಣೆ, ಪತ್ರಿಕೆ ತಲುಪದಿರುವ ಬಗೆಗಿನ ದೂರುಗಳು, ಏಜೆನ್ಸಿದಾರರ ಪತ್ರಿಕೆಗಳ ಹೆಚ್ಚಳ, ಬಾಕಿ ವಿಚಾರಣೆ, ಹಣ ಪಾವತಿ, ದೂರುಗಳು ಹಾಗೂ ಜಾಹಿರಾತುಗಳಿಗೆ ಸಂಬಂಧಿಸಿದ ಎಲ್ಲ ವ್ಯವಹಾರ, ವಿಚಾರಣೆ ಇತ್ಯಾದಿಗಳನ್ನು ಇನ್ನು ಮುಂದೆ ಈ ಕೆಳಗಿನ ವಿಳಾಸದಲ್ಲೇ ಮಾಡುವುದು. ಕಚೇರಿಯ ನೇರ ಸಂಪರ್ಕವು ಕಛೇರಿ ಕಾರ್ಯ ನಿರ್ವಹಿಸುವ ನಿರ್ದಿಷ್ಟ ಅವಧಿಯಲ್ಲಿ ಮಾತ್ರ ಲಭ್ಯವಿರುತ್ತದೆ ಎಂಬುದನ್ನು ಗಮನಿಸ ತಕ್ಕದ್ದು.

ವಿಳಾಸ : 'ಜನಶಕ್ತಿ' ಆಡಳಿತ ಕಚೇರಿ,
c/o. ಕ್ರಿಯಾ ಪ್ರಕಾಶನ, ಸೂರಿ ಭವನ, # 40/5, 2ನೇ 'ಬಿ' ಮೈನ್, 16ನೇ ಕ್ರಾಸ್, ಸಂಪಂಗಿರಾಮನಗರ, ಬೆಂಗಳೂರು-560027
email : janashakthi13.admn@gmail.com
Phone : 22234369
ಹೆಚ್.ಆರ್.ಸವಿತ ರಾಣಿ : 9483966467,
ಜಿ.ಚಂದ್ರಶೇಖರ್ : 9448578021
(ಕಾರ್ಯಾಲಯದ ಸಮಯ: ಬೆಳಿಗ್ಗೆ 10.00 ರಿಂದ ಸಂಜೆ 6.00 ಗಂಟೆವರೆಗೆ)

ೂಟ'ದ ಹರಾಜು...

3 13 ರಿಂದ

ಂಬರುವ ಲೋಕಸಭಾ ಚುನಾವಣೆಗಳಲ್ಲಿ ಸ್ಥಾನಗಳನ್ನು ಗೆದ್ದುಕೊಳ್ಳುವಲ್ಲಿ ಅಡ್ಡಿ ಟು ಮಾಡುತ್ತದೆ ಎಂದೂ ಅವರು ಿದ್ದಾರೆ. ಅಂದರೆ ಇವೆಲ್ಲ ಬಡತನ ರೆ, ಅಗ್ಗದ ಊಟ, ಆಹಾರ ಭದ್ರತಾ ೂದೆ ಎಲ್ಲವೂ ಚುನಾವಣಾ ಗೆಲುವಿಗಾಗಿ ಬುದನ್ನೂ ಅ ಮಂತ್ರಿಗಳು ಪರೋಕ್ಷವಾಗಿ ಕೊಂಡಿದ್ದಾರೆ. ಪಾಪ, ಅವರ ಕೃಷಿ ಖೆಯ ಸಹಯೋಗಿ, ತಾನು ಕೂಡ ಕ್ಕಾಗಿಯೇ ಇಂತಹ 'ಘಾಸಿಗೊಳಿಸುವ' ತು ಹೇಳಿದ್ದು ಎಂಬುದನ್ನು ಸಾಬೀತು ಸಲು ಹೊರಟಿದ್ದಾರೆ– ರಾಜ್ಯಾದ್ಯಂತ ರ 'ಭೂತದಹನ' ಮಾಡಿದರೂ, ಯುವಕರ ಪೊಂದು ಅವರ ಪ್ರತಿಕೃತಿಯನ್ನು ಖುಪುರ ಹುಚ್ಚಾಸ್ಪತ್ರೆಗೆ 'ಸೇರಿಸಿ'ದರೂ ಸದೆ!

ಟ್ಟಿನಲ್ಲಿ ಕಠೋರ ವಾಸ್ತವತೆಯನ್ನು ುವ ಪ್ರಯತ್ನ ಇವರನ್ನೆಲ್ಲ ಗೊಂದಲದಲ್ಲಿ ಳುಗಿಸುತ್ತಿರುವುದು ಸ್ಪಷ್ಟವಾಗಿ ುತ್ತಿದೆ. ●

ಡುಗಳ ಸೀಡಿ ....

3 06 ರಿಂದ

ತರು ಹಾಗೂ ಅಲ್ಪಸಂಖ್ಯಾತರು. ರ್‌ಜೆಡ್ ನೀತಿಯ ನೆವ ಹೇಳಿಕೊಂಡು ಜನರನ್ನು ವಂಚಿಸುತ್ತಿರುವುದು ಡನೀಯ ಎಂದರು.

ಸಿಆರ್‌ಜೆಡ್‌ನ ನಿಯಮಗಳಲ್ಲಿ ನಗರ ೇಶದ ಎರಡನೇ ಮೂರನೇ ವಲಯಗಳಲ್ಲಿ ೆ ರಚಿಸಬಾರದು ಎಂಬ ನಿಯಮವೇ ುವುದಿಲ್ಲ ಎಂಬುದನ್ನು ಸಾರ್ವಜನಿಕರ ನಕ್ಕೆ ಅವರು ತಂದರು.

ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಂಡಳಿ ಸದಸ್ಯ ವಸಂತ ಆಚಾರಿ ತನಾಡಿ, ಸಿಆರ್‌ಜೆಡ್ ವಲಯದಲ್ಲಿ ೋದ್ಯಮ ಉದ್ದಿಮೆಗೆ ಶ್ರೀಮಂತರಿಗೆ ೂಡಲು ಜಿಲ್ಲಾಡಳಿತ ಮುಂದಾಗಿದೆ; ರೆ ವಾಸವಾಗಿರುವ ಬಡವರಿಗೆ ಹಕ್ಕುಪತ್ರ ಡಲು ಸಿದ್ಧರಿಲ್ಲ ಎಂದು ಟೀಕಿಸಿದರು. ನಾವಣೆಯ ಸಂದರ್ಭದಲ್ಲಿ ಬಡವರಿಗೆ ನೆ, ಹಕ್ಕುಪತ್ರ ನೀಡುತ್ತೇವೆ ಎಂಬ ಭರವಸೆ ಡಿದ ಕಾಂಗ್ರೆಸ್‌ನವರು ಶಾಸಕರಾಗಿ ಬಾಯಿ ತೆರೆಯುತ್ತಿಲ್ಲ ಎಂದು ಟೀಕಿಸಿದರು. ಲ್ಕನೇ ಬಾರಿಗೆ ನಡೆಯುತ್ತಿರುವ ಈ ಭಟನೆಗೆ ಸ್ಪಂದಿಸದಿದ್ದಲ್ಲಿ, ಶಾಸಕರುಗಳ ನೆ ಮುತ್ತಿಗೆ ಹಾಕಲೂ ಹಿಂಜರಿಯುವುದಿಲ್ಲ ದು ಎಚ್ಚರಿಕೆ ನೀಡಿದರು.

ಪ್ರತಿಭಟನೆಯನ್ನು ಉದ್ದೇಶಿಸಿ ಸಿಪಿಐ(ಎಂ) ಂಗಳೂರು ನಗರ ಸಮಿತಿ ಕಾರ್ಯದರ್ಶಿ ನಿಲ್ ಕುಮಾರ್ ಬಜಾಲ್, ಜಿಲ್ಲಾ ಸಮಿತಿ ಸ್ಯ ವಾಸುದೇವ ಉಚ್ಚಿಲ, ಡಿವೈಎಫ್‌ಐ ರ ಅಧ್ಯಕ್ಷ ಬಿ.ಕೆ.ಇಮ್ತಿಯಾಜ್, ದಲಿತ ುಗಳ ಸಮಿತಿ ಸಂಚಾಲಕ ಲಿಂಗಪ್ಪ ರು ಮಾತನಾಡಿದರು. ಜಯಕುಮಾರ್ ಗತಿಸಿದರು. ಕಿಶೋರ್ ಪೊರ್ಕೋಡಿ ದಿಸಿದರು. ●

ಮೋದಿಯ ಅನಾಗರಿಕತೆ.....

ಪುಟ 08 ರಿಂದ

ನೀಡಿದ 'ಕ್ಲೀನ್‌ಚಿಟ್' ಆದೇಶವನ್ನು ಪ್ರಶ್ನಿಸಿರುವ ಅರ್ಜಿಯನ್ನು ನ್ಯಾಯಾಲಯವು ಅಂಗೀಕರಿಸಿದ್ದು ಮುಂದಿನ ವಿಚಾರಣೆಗೆ ಆದೇಶ ನೀಡಿದೆ.

ಗೋಧ್ರಾ ಬಳಿಕದ ಹಿಂಸಾಚಾರದ ಸಂದರ್ಭದಲ್ಲಿ ಪೊಲೀಸ್ ಇಲಾಖೆಯ ಕೇಂದ್ರ ಕಛೇರಿಗೆ ಹರಿದು ಬಂದಿರುವ ಪೋಲಿಸ್ ಇಲಾಖೆಯ ಭಾವೋದ್ರಿಕ್ತ ಸಂದೇಶಗಳ ರಾಶಿ ರಾಶಿ ದಾಖಲೆಗಳು ಹತ್ಯಾಕಾಂಡವನ್ನು ನಡೆಸುತ್ತಿರುವ ಪ್ರತಿಯೊಂದು ಹೆಜ್ಜೆಗಳ ವಿವರ ನೀಡುತ್ತವೆ. ವಿಶ್ವ ಹಿಂದೂ ಪರಿಷತ್, ಭಜರಂಗ ದಳ ಮತ್ತು ಸ್ವತಃ ಮೋದಿ ಈ ಹತ್ಯಾಕಾಂಡದಲ್ಲಿ ಮಹತ್ವದ ಪಾತ್ರ ವಹಿಸಿದ್ದರ ಮಾಹಿತಿಗಳನ್ನು ನೀಡುತ್ತವೆ. ಇದರಿಂದಾಗಿಯೇ ಪೊಲೀಸ್ ಇಲಾಖೆ ಹತ್ಯಾಕಾಂಡದ ಆರೋಪಿಗಳು ಮತ್ತು ದಂಗೆಕೋರರ ಮೇಲೆ ಕ್ರಮ ಕೈಗೊಳ್ಳುವ ರಗಳೆಗೆ ಮುಂದಾಗಿಲ್ಲ. ಸಾಕಷ್ಟು ಎಚ್ಚರಿಕೆಯ ನಂತರವೂ ಸರ್ಕಾರ ಕ್ರಮ ಕೈಗೊಳ್ಳಲಿಲ್ಲ.

ಅಯೋಧ್ಯೆಗೆ ಕರ ಸೇವಕರು ಹೊರಡುವ ವಾರದ ಮುನ್ನವೇ ರಾಜ್ಯ ಗುಪ್ತಚರ ವಿಭಾಗ ಮಾಹಿತಿಯನ್ನು ನೀಡಿತ್ತು. ಈ ಸಂದರ್ಭದಲ್ಲಿ ನಾಯಕರು ನೀಡಿದ ಮುಸ್ಲಿಮ್ ವಿರೋಧಿ ಘೋಷಣೆಗಳು ಮತ್ತು ಕೋಮು ಪ್ರಚೋದಿತ ವಾಕ್ಯಗಳನ್ನೂ ಈ ಗುಪ್ತಚರ ವರದಿಯಲ್ಲಿ ಉಲ್ಲೇಖಿಸಲಾಗಿತ್ತು. ಇದು ಬರ್ಬರ ಗೋದ–್ರಾ ಹಿಂಸಾಚಾರ ನಡೆಯುವ ಮುನ್ನವೇ ನೀಡಲಾಗಿತ್ತು.

ಇಷ್ಟೆಲ್ಲಾ ಇರುವಾಗ ಗುಜರಾತ್ ನರಮೇಧವು ಒಂದು ಸಾಂಧರ್ಭಿಕವಾಗಿ ನಡೆದು ಹೋದ ಅನಿರೀಕ್ಷಿತ ಆಕಸ್ಮಿಕ ಘಟನೆ ಹೇಗಾಗುತ್ತದೆ ? ಮುನ್ನೆಚ್ಚರಿಕೆಗಳ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳದಿರುವುದು ಉತ್ತಮ ಆಡಳಿತದ ಲಕ್ಷಣವೇ? ಗೋಧ್ರಾ ಘಟನೆಯ ಕುರಿತು ರೈಲ್ವೇ ಪ್ಲ್ಯಾಟ್‌ಫಾರಂನಲ್ಲಿ ಸಾರ್ವಜನಿಕವಾಗಿ ಮೋದಿ ಹೇಳಿಕೆ ನೀಡಿದ್ದು ಉತ್ತಮ ಆಡಳಿತದ ಲಕ್ಷಣವೇ...? ವಿಶೇಷ ತನಿಖಾ ತಂಡದ ದಾಖಲೆಗಳ ಪ್ರಕಾರ ಮೃತದೇಹಗಳ ಮರಣೋತ್ತರ ಪರೀಕ್ಷೆಯನ್ನು ರೈಲ್ವೆ ಪ್ಲಾಟ್‌ನಲ್ಲಿ ಬಹಿರಂಗವಾಗಿ ನಡೆಸಲಾಯಿತು. ನರೇಂದ್ರ ಮೋದಿ ಗೋಧ್ರಾ ನಿಲ್ದಾಣದಲ್ಲಿ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಕೋಮು ಹಿಂಸಾಚಾರಗಳನ್ನು ನಡೆಸಬಹುದು ಎಂದು ಗುಪ್ತಚರ ಇಲಾಖೆಗಳು ಆಡಳಿತಕ್ಕೆ ಎಚ್ಚರಿಕೆ ನೀಡಿದ್ದ ವಿಎಚ್‌ಪಿ ಎಂಬಂತಹ ಸಂಘಟನೆಗಳಿಗೆ ಗೋದ–್ರಾ ಘಟನೆಯಲ್ಲಿ ಮೃತಪಟ್ಟವರ ದೇಹಗಳನ್ನು ಹಸ್ತಾಂತರಿಸಿದ್ದು ಉತ್ತಮ ಆಡಳಿತದ ಲಕ್ಷಣವೇ...? ಬಾಬಾ ಸಾಹೇಬ್ ಅಂಬೇಡ್ಕರ್ ಅವರು ರಚಿಸಿದ ದೇಶದ ಸಂವಿಧಾನಕ್ಕಿಂತಲೂ ಹಿಟ್ಲರ್‌ನ ಜರ್ಮನಿಯೇ ಆದರ್ಶ ಎಂಬ ನಿಲುವು ಹೊತ್ತ ಹಿಂದೂ ರಾಷ್ಟ್ರೀಯವಾದಿ ಶಕ್ತಿಗಳು ಈ ಮೂಲಕ ಏನನ್ನು ಸಾಧಿಸಲು ಹೊರಟಿವೆ...? ಸುದ್ದಿ ಮಾಧ್ಯಮ ರಾಯ್ಟರ್ಸ್ ಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಹೇಳಿದ ಹಾಗೆ ಮೋದಿ ಅವರ ಮಿಂಚುವ ನಾಯಕತ್ವಕ್ಕೆ ನೀಡಬಹುದಾದ ಉದಾಹರಣೆಯೇ?

ಅಲ್ಲಿ ಕೇಳಲಾದ ಪ್ರಶ್ನೆಗಳು ಯಾರಿಗೆ ನಿರ್ಣಾಯಕ? ಯಾರ ಹಿತಾಸಕ್ತಿಯನ್ನು ಇಟ್ಟುಕೊಂಡು ಈ ಪ್ರಶ್ನೆಗಳನ್ನು ಹೆಣೆಯಲಾಗಿದೆ. ಖಂಡಿತವಾಗಿಯೂ ನ್ಯಾಯದ ಉದ್ದೇಶದಿಂದ ಅಲ್ಲ.

ನಕಲಿ ಎನ್‌ಕೌಂಟರ್‌ನಲ್ಲಿ ಆರೋಪಿಯಾಗಿರುವ ತಮ್ಮ ಆಪ್ತ ಬೆಂಬಲಿಗ ಅಮಿತ್ ಶಾನನ್ನು ನರೇಂದ್ರ ಮೋದಿ ಇತ್ತೀಚೆಗಷ್ಟೇ ಉತ್ತರಪ್ರದೇಶದ ತಮ್ಮ ಪ್ರತಿನಿಧಿಯಾಗಿ ಕಳುಹಿಸಿಕೊಟ್ಟಿದ್ದಾರೆ. ಇಶ್ರಾತ್ ಜಹಾನ್ ಕೋಲ್ಡ್ ಬ್ಲಡ್ಡೆಡ್ ಮರ್ಡರ್‌ನಲ್ಲಿ ಈತನ ಪಾತ್ರವನ್ನು ನರೇಂದ್ರ ಮೋದಿ ಸಮರ್ಥಿಸಿಕೊಂಡಿದ್ದಾರೆ. 'ಗುಜರಾತ್ ಮಾದರಿ' ಎಂಬ ಪದಗುಚ್ಛವನ್ನು ಗುಜರಾತ್‌ನಲ್ಲಿ ಅಲ್ಪಸಂಖ್ಯಾತರಿಗೆ ಸಿಗುವ ಸಾಮಾಜಿಕ ನ್ಯಾಯದ ವ್ಯಾಖ್ಯೆಯಲ್ಲಿ ಇಟ್ಟು–ಕೊಂಡು ರಚಿಸಲಾಗಿದೆಯೇ ಎಂಬ ಪ್ರಶ್ನೆ ಎದುರಾಗುತ್ತದೆ.

ಅಲ್ಲಿ ಬಡವರಿಗೆ ನ್ಯಾಯ ಸಿಗುತ್ತಿಲ್ಲ. ಮಕ್ಕಳು ಅಪೌಷ್ಟಿಕತೆಯಿಂದ ನರಳುತ್ತಾರೆ. ಶಿಕ್ಷಣದ ಹಕ್ಕುಗಳು ಮೊಟಕುಗೊಂಡಿವೆ. ಏಕೆಂದರೆ ಗುಜರಾತ್ ಮಾದರಿಯ ವಿಶ್ಲೇಷಕರು ಈ ಬಗ್ಗೆ ಮರೆಮಾಚುತ್ತಾರೆ. ಸಾಮಾಜಿಕ ಅಸಮಾನತೆಗಳು ಈಗಲೂ ಗುಜರಾತ್‌ನಲ್ಲಿ ದೊಡ್ಡ ಪ್ರಮಾಣದಲ್ಲಿದೆ. ಆದರೂ ಮೋದಿ ಕ್ಷಿಪ್ರ ನಿರ್ಧಾರಗಳನ್ನು ಪ್ರಕಟಿಸಿ ಕಾರ್ಪೊರೇಟ್ ಸಂಸ್ಥೆಗಳಿಗೆ ಅಗಾಧ ಪ್ರಮಾಣದ ರಿಯಾಯಿತಿಗಳನ್ನು ಘೋಷಿಸುತ್ತಾರೆ. ದೇಶದ ಕಾರ್ಮಿಕ ವರ್ಗಕ್ಕೆ ಇದರಿಂದ ಯಾವ ಲಾಭವೂ ಇಲ್ಲ.

ವೈಯಕ್ತಿಕ ಬದಕಿನಲ್ಲಿ ಕಷ್ಟವನ್ನು ಅನುಭವಿಸಿ ಗೊತ್ತಿದ್ದವರು, ಅದರ ನೋವು ಉಂಡವರು ಅಳಲಿನ ನೋವನ್ನು ಮರೆಯಲು ಕಾಲವನ್ನೇ ಅವಲಂಬಿಸುತ್ತಾರೆ. ಏಕೆಂದರೆ ಬದುಕು ಮುಂದುವರಿಯುವುದು ಅವರಿಗೆ ಅನಿವಾರ್ಯ. ಆದರೆ, ಉದ್ದೇಶಪೂರ್ವಕ ನೀತಿಗಳು, ಸಂಚುಗಳು, ಅಧಿಕಾರವನ್ನು ಬಳಸಿಕೊಂಡು ನಡೆಸಿರುವ ಕಾನೂನುಬಾಹಿರ ಅಪಕೃತ್ಯಗಳನ್ನು, ವಿಧ್ವಂಸಕ ಕೃತ್ಯ ಮಾಡಿದವರು ಅದಕ್ಕೆ ಜವಾಬ್ದಾರರಾಗಿದ್ದಾರೆ. ಮತ್ತು ಅದಕ್ಕೆ ಸೂಕ್ತ ಶಿಕ್ಷೆಗೂ ಅರ್ಹರಾಗಿದ್ದಾರೆ. ಇಡೀ ಗುಜರಾತ್ ಹೊತ್ತಿ ಉರಿಯುತ್ತಿರುವಾಗ ಮೋದಿ ಇದಕ್ಕೆಲ್ಲ ಹೊಣೆಗಾರರಾಗಿದ್ದರು. 2002ರ ಭಯಾನಕ ಕೃತ್ಯಗಳನ್ನು ಸಮರ್ಥಿಸಿಕೊಳ್ಳುವ ಮೋದಿಯವರ ಇತ್ತೀಚಿನ ಹೇಳಿಕೆಗಳನ್ನು ನೋಡಿದರೆ ಇಂತಹ ಬರ್ಬರ ಕೃತ್ಯಗಳು ಮತ್ತೊಮ್ಮೆ ನಡೆಯಲು ಅವಕಾಶ ನೀಡಬೇಕೆ ಎಂಬ ಪ್ರಶ್ನೆಯನ್ನು ನಾವು ಕೇಳಬೇಕಾಗಿದೆ. ಇಂತಹ ಮಾದರಿ ದೇಶಕ್ಕೆ ಅಗತ್ಯವಿದೆಯೇ ಎಂದು ಪ್ರಶ್ನಿಸಬೇಕಾಗಿದೆ.

ಯುಪಿಎ ಸರ್ಕಾರ ಜನವಿರೋಧಿ ನವ ಉದಾರೀಕರಣ ನೀತಿಗಳನ್ನು ಅನುಸರಿಸುತ್ತಿದ್ದು, ದೇಶದ ಆಡಳಿತದಲ್ಲಿ ದಯನೀಯ ವೈಫಲ್ಯ ಅನುಭವಿಸಿದೆ. ಭ್ರಷ್ಟಾಚಾರದಲ್ಲಿ ಅದು ತೋರಿದ ದಾರಿಯಿಂದಾಗಿ ಬಿಜೆಪಿಗೆ ಸಾರ್ವಜನಿಕ ಆಕ್ರೋಶವನ್ನು ಪರವಾಗಿ ಬಳಸಿಕೊಳ್ಳುವ ಒಂದು ಉತ್ತಮ ಅವಕಾಶ ನಿರ್ಮಾಣವಾಗಿತ್ತು. ಸರ್ಕಾರದ ವಿರುದ್ಧದ ಆಕ್ರೋಶವನ್ನು ಕೋಮುವಾದಿ ಅಜೆಂಡಾದ ಮೇಲೆ ರಾಜಕೀಯ ಮಾಡಲು ಬಿಜೆಪಿ ಬಯಸುತ್ತಿದೆ. ಇದೇ ವೇಳೆ, ಕಾಂಗ್ರೆಸ್ ಕೋಮುವಾದಿ ಶಕ್ತಿಗಳನ್ನು ಸಮರ್ಥವಾಗಿ ಎದುರಿಸುವಲ್ಲಿ ಸೋತಿದೆ.

ಕೇವಲ ಎಡಪಕ್ಷಗಳು ಮಾತ್ರ ಕಾಂಗ್ರೆಸ್ಸೇತರ ಜಾತ್ಯತೀತ ಶಕ್ತಿಗಳನ್ನು ಸಂಘಟಿಸಿ ಕೋಮುವಾದಿ ಅಪಾಯದ ವಿರುದ್ಧ ಹೋರಾಟ ನಡೆಸುವ ಸಾಮರ್ಥ್ಯ ಹೊಂದಿವೆ. ಜನರ ಹಕ್ಕುಗಳನ್ನು ರಕ್ಷಿಸುವ ಪರ್ಯಾಯ ರಾಜಕೀಯ ನೀತಿಗಳನ್ನು ರೂಪಿಸುವಲ್ಲಿ ಎಡಪಕ್ಷಗಳು ಮಹತ್ವದ ಪಾತ್ರ ವಹಿಸಿವೆ.

ಈ ಹಿನ್ನೆಲೆಯಲ್ಲಿ ಜನ ಚಳವಳಿ ಹಾಗೂ ಸತತ ಹೋರಾಟಗಳ ಮೂಲಕ ಎಡ ಪಕ್ಷಗಳನ್ನು ಬಲಿಷ್ಟಗೊಳಿಸಬೇಕೆಂಬ ಎಡಪಕ್ಷಗಳ ರಾಷ್ಟ್ರೀಯ ರಾಜಕೀಯ ಸಮಾವೇಶ ನೀಡಿದ ಕರೆ ಭಾರೀ ಮಹತ್ವ ಪಡೆದುಕೊಂಡಿದೆ. ●

ಪ್ರತ್ಯೇಕ ತೆಲಂಗಾಣ.....

ಪುಟ 09 ರಿಂದ

ನೀತಿಯ ಆಧಾರದಲ್ಲಿ ಭಾರತೀಯ ರಾಜ್ಯಗಳ ಸಂಘದ ಸಮಗ್ರತೆಗೆ ಬೆಂಬಲವಾಗಿ ನಿಂತಿದೆ.

ಗಂಭೀರ ಪರಿಣಾಮ

ಕೇಂದ್ರದಲ್ಲಿನ ಮತ್ತು ರಾಜ್ಯಗಳಲ್ಲಿನ ಕಾಂಗ್ರೆಸ್ ಪಕ್ಷದ ನೇತೃತ್ವದ ಸರಕಾರಗಳು ಸನ್ನಿವೇಶವನ್ನು ಸರಿಯಾಗಿ ನಿಭಾಯಿಸದೇ ಹೋಗಿರುವುದರಿಂದಾಗಿ ದೇಶದ ಹಲವಾರು ಭಾಗಗಳಿಂದ ಪ್ರತ್ಯೇಕ ರಾಜ್ಯಗಳಿಗಾಗಿ ದೊಡ್ಡ ಸಂಖ್ಯೆಯಲ್ಲಿ ಬೇಡಿಕೆಗಳು ಏಳುವಂತಾಗಿದೆ. ತೆಲಂಗಾಣ ಕುರಿತ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಈ ನಿರ್ಧಾರ ಪ್ರಕಟವಾದ ಕೂಡಲೇ, ಪಶ್ಚಿಮ ಬಂಗಾಲದ ದಾರ್ಜಿಲಿಂಗ್ ಪರ್ವತ ಪ್ರದೇಶಗಳಲ್ಲಿ ಒಂದು ಪ್ರತ್ಯೇಕ ಗೋರ್ಖಾಲ್ಯಾಂಡ್ ರಾಜ್ಯ ಬೇಕೆಂದು ಆಗ್ರಹಿಸಿ ಮೂರು ದಿನಗಳ ಬಂದ್ ಕರೆ ನೀಡಲಾಗಿದೆ. ಪ್ರತ್ಯೇಕ ಬೋಡೋಲ್ಯಾಂಡ್ ರಾಜ್ಯಕ್ಕಾಗಿ ಕೂಡ ಇಂತಹ ಕರೆ ನೀಡಲಾಗಿದೆ. ವಿವಿಧ ಐಡೆಂಟಿಟಿಗಳ ಆಧಾರದಲ್ಲಿ ಹೊಸ–ಹೊಸ ರಾಜ್ಯಗಳ ನಿರ್ಮಾಣಕ್ಕೆ ಇಂತಹ ಕರೆಗಳು ಭಾರತೀಯ ಸಂವಿಧಾನದ ಒಕ್ಕೂಟ ಸತ್ವಕ್ಕೆ ಮತ್ತು ಸ್ವರೂಪಕ್ಕೆ ಮಾತ್ರವೇ ಅಲ್ಲ, ದೇಶದಲ್ಲಿ ವಿಚ್ಛಿದ್ರಕಾರಿಯಾಗಬಲ್ಲ ಸೆಳೆತಗಳನ್ನು ಹರಿಯಬಿಡುವಲ್ಲಿ ಕೂಡ ಗಂಭೀರ ಪರಿಣಾಮಗಳನ್ನು ಉಂಟು ಮಾಡಬಹುದು.

ಆದ್ದರಿಂದ ತೆಲಂಗಾಣ ರಾಜ್ಯ ರಚನೆಯ ಪ್ರಸಕ್ತ ಪ್ರಕ್ರಿಯೆ ನಡೆಯುತ್ತಿರುವಾಗಲೇ, ಜನತೆ ಶಾಂತಿ ಮತ್ತು ನೆಮ್ಮದಿಯನ್ನು ಕಾಪಾಡಿಕೊಳ್ಳುವುದು ಹಾಗೂ ಯಾವುದೇ ಉದ್ರೇಕಕ್ಕೆ ಬಲಿ ಬೀಳುವತ್ತ ವಾಲದಿರುವುದು ಈಗಿನ ಪರಮ ಆವಶ್ಯಕತೆ. ಅದೇ ವೇಳೆಗೆ ಶಾಂತಿ ಮತ್ತು ಸಾಮಾನ್ಯ ಸ್ಥಿತಿಯನ್ನು ಕಾಯ್ದುಕೊಳ್ಳುವುದು ಕಾಂಗ್ರೆಸ್ ಪಕ್ಷದ ಕೇಂದ್ರ ಮತ್ತು ರಾಜ್ಯ ಸರಕಾರಗಳ ಜವಾಬ್ದಾರಿಯಾಗಿದೆ. ●

JANASHAKTHI KANNADA VARA PATRIKE AUG 11, 2013 Price : Rs. 10/-
"REGISTERD" Postal Reg. No. RNP/KA/BGS/2078/2013-15 Posted at MBC Bangalore GPO Licensed to Post without prepayment License No. WP

ಈಜಿಪ್ಟಿನಲ್ಲಿ ಜನ ಮತ್ತೆ ಬೀದಿಗೆ

ಈಜಿಪ್ಟಿನಲ್ಲಿ ಜನ ಮತ್ತೆ ಬೀದಿಗೆ ಬಂದಿದ್ದಾರೆ. ಮೊರ್ಸಿಯನ್ನು ಪದಚ್ಯುತಿ ಮಾಡಿದ್ದರ ವಿರುದ್ಧ ಮುಸ್ಲಿಂ ಬ್ರದರ್ ಹುಡ್ ತೀವ್ರ ಪ್ರತಿಭಟನೆ ನಡೆಸಿತು. ಸರ್ವಪಕ್ಷಗಳ ಸರ್ಕಾರದಲ್ಲಿ ಪಾಲ್ಗೊಳ್ಳಲು ಆಹ್ವಾನವನ್ನು ನಿರಾಕರಿಸಿತು. ಸರ್ವಪಕ್ಷಗಳ ಮಾತುಕತೆ ಸಹ ವಿಫಲವಾಯಿತು. ಮೊರ್ಸಿಯನ್ನು ಅಧ್ಯಕ್ಷರಾಗಿ ಮತ್ತೆ ವಾಪಸು ತರಬೇಕೆಂದು ಒತ್ತಾಯಿಸಿತು. ಈ ಒತ್ತಾಯದ ಮೇಲೆ ಬೀದಿಗಿಳಿಯಿತು. ತೀವ್ರ ಹಿಂಸಾಚಾರದಲ್ಲಿ ತೊಡಗಿ-ತು. ಮೊರ್ಸಿಯನ್ನು ಬಂಧಿಸಿ ಇಟ್ಟ ಕಡೆಗೆ ಸಾವಿರಾರು ಮುಸ್ಲಿಂ ಬ್ರದರ್ ಹುಡ್ ಮುತ್ತಿಗೆ ಹಾಕಿದರು. ಪ್ರಜಾಪ್ರಭುತ್ವವಾದಿಗಳು ಸಹ ಬೀದಿಗಿಳಿದರು. ಇದು ಸಾಲದೆಂಬಂತೆ ಮುಸ್ಲಿಂ ಬ್ರದರ್‌ಹುಡ್ ಪ್ರತಿಭಟನಾಕಾರರ ಮೇಲೆ ಮಿಲಿಟರಿ ಪೋಲಿಸರು ಮಾಡಿದ ಗೋಳಿಬಾರಿನಲ್ಲಿ ನೂರಕ್ಕೂ ಹೆಚ್ಚು ಜನ ಸತ್ತು ಪರಿಸ್ಥಿತಿ ವಿಕೋಪಕ್ಕೆ ಹೋಯಿತು.

ಮುಸ್ಲಿಂ ಬ್ರದರ್ ಹುಡ್ ಹಿಂಸಾಚಾರದ ವಿರುದ್ಧ ಪ್ರಜಾಪ್ರಭುತ್ವವಾದಿಗಳು ಸಹ ಪ್ರತಿಭಟಿಸಿದರು. ತೆಹ್ರಿರ್ ಚೌಕ ಪುನಃ ಜನಸಾಗರದಿಂದ ತುಂಬಿತು. ಆದ-ರೆ ಮಧ್ಯಂತರ ಸರ್ಕಾರದ ಜನರಲ್ ಅಲ್ ಸಿಸಿ ಮುಸ್ಲಿಂ ಬ್ರದರ್ ಹುಡ್ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಜನ ಬೀದಿಗಿಳಿದು ಸರ್ಕಾರಕ್ಕೆ ಜನಾದೇಶ ಕೊಡುವಂತೆ ಮಾಡಿದ ಮನವಿ ವಿವಾದಾತ್ಮಕವಾಗಿದೆ. ಈ ಸರ್ಕಾರ ಈಜಿಪ್ಟ್‌ನಲ್ಲಿ ಆಂತರಿಕ ಯುದ್ಧ-ಕ್ಕೆ ಆಹ್ವಾನ ಕೊಡುತ್ತಿದೆ. ಪುನಃ ಮಿಲಿಟರಿ ಸರ್ಕಾರ ಸ್ಥಾಪಿಸಲು ಹವಣಿಸುತ್ತಿದೆ ಎಂಬ ಆಪಾದನೆ ಮಾಡಲು ಮುಸ್ಲಿಂ ಬ್ರದರ್‌ಹುಡ್ ಗೆ ಎಡೆ ಮಾಡಿಕೊಟ್ಟಿತು.

ಆ ಮೇಲಿನ ಮೊರ್ಸಿ ಸರ್ಕಾರ ನೇಮಿಸಿದ ಬ್ರದರ್ ಹುಡ್ ಕಾರ್ಯಕರ್ತರ ಜಾಗದಲ್ಲಿ ಮುಬಾರಕ್-ಆಡಳಿತದ ಕೆಲವು ಹಳೆಯ ತಲೆಗಳನ್ನು ನೇಮಿಸಿದ್ದು ಇತ್ಯಾದಿ ಕ್ರಮಗಳು ಈ ಸಂಶಯ ಬಲಗೊಳ್ಳುವಂತೆ ಮಾಡಿದೆ. ಮೊರ್ಸಿ ಪದಚ್ಯುತಿಗೆ ವ್ಯಾಪಕ ಜನಾಭಿಪ್ರಾಯದ ಆಧಾರದ ಮೇಲೆ ತೆಗೆದುಕೊಂಡ ಮತ್ತು ಆ ಮೇಲೆ ಮಧ್ಯಂತರ ಸರ್ಕಾರ ಸ ಪ್ರಜಾಪ್ರಭುತ್ವ ವ್ಯವಸ್ಥೆಯತ್ತ ಸಾಗುವ ವೇಳಾಪಟ್ಟಿ ಘೋಷಿಸಿದ ಕ್ರಮಗಳು ಮಾಡಿದ ವಿಶ್ವಾಸಾರ್ಹತೆಯನ್ನು ಕ ಮಾಡಿವೆ. ಸ್ವಲ್ಪ ಮಟ್ಟಿಗೆ ವಿರೋಧಿ ಪ್ರಜಾಪ್ರಭುತ್ವ ರಂಗದ ಅಂಗಗಳ ಪ ಭಿನ್ನಾಭಿಪ್ರಾಯ ಉಂಟಾಗುವಂತೆ ಮಾಡಿದೆ. ರಾಷ್ಟ್ರೀಯ ವಿಮೋಚನಾ ರಂಗ ಮತ್ತು ತಮ್ರೂದ್ ಜನರಲ್ ಸಿಸಿ ಕರೆ ಬೆಂಬಲಿಸಿದರೆ, ಹೆಚ್ಚು ಎ ಪಂಥೀಯವಾದ ಎಪ್ರಿಲ್ 6 ಚಳು ಅದನ್ನು ಪ್ರಜಾಸತ್ತೆ ದುರ್ಬಲಗೊಳಿ ಮತ್ತು ಮಿಲಿಟರಿಯನ್ನು ಪ್ರಬಲಗೊ ಕ್ರಮ ಎಂದು ವಿರೋಧಿಸಿದೆ.

ಅಮೆರಿಕ ಮೊರ್ಸಿ ಸರ್ಕಾರ ಪದಚ್ಯುತಿಯ ಪರವಾಗಿರಲಿಲ್ಲ. ಆದ ಆ ಕ್ರಮಕ್ಕೆ ಅರಬ್ ಜಗತ್ತಿನಲ್ಲಿ ಅಮೆ 'ಜೀ ಹುಜೂರ್' ದೇಶಗಳಾದ ಸೌದಿ ಅರೇಬಿಯಾ, ಕತಾರ್ ಇತ್ಯಾದಿಗಳು ಬೆಂಬಲಿಸಿವೆ. ಅಮೆರಿಕ ಮಿಲಿಟರಿ ಸರ್ಕಾರದಲ್ಲಿ ತನ್ನ ಬೆಂಬಲಿಗರ ಮು ವಿರೋಧ ರಂಗದಲ್ಲೂ ಇರುವ ಪಕ್ಷ ಚಳುವಳಿಗಳಲ್ಲೂ ಇರುವ ಬೆಂಬಲಿ ಮತ್ತು ಪ್ರಭಾವದ ಮೂಲಕ ಯಾವ ಸರ್ಕಾರ ಬಂದರೂ ತನ್ನ ಹಿತಾಸಕ್ತಿ ವಿರುದ್ಧ ಕ್ರಮ ಜರುಗಿಸದಂತೆ ಮಸ ಮಾಡಿದೆ. ಆದ್ದರಿಂದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಸ್ಥಾಪಿಸುವ ಜನತೆಯ ಆಶಯಕ್ಕೆ ಮುನ್ನಡೆ ಸಿಗುತ್ತಿಲ್ಲ. ಆಗಾ ಸ್ವಲ್ಪ ಮಟ್ಟಿಗೆ ಹಿನ್ನಡೆಗಳೇ ಆಗುತ್ತಿದೆ.



ಉ.ಕೊರಿಯಾ-ವಿರೋಧಿ ನಿರ್ಣಯಗಳ ವಿರುದ್ಧ ಬಹಿರಂಗ ಪತ್ರ

ವಿಶ್ವಸಂಸ್ಥೆಯ ಭದ್ರತಾ ಸಮಿತಿ ಇತ್ತೀಚಿನ ವರ್ಷಗಳಲ್ಲಿ ಕೊರಿಯಾ ಪರ್ಯಾಯ ದ್ವೀಪದಲ್ಲಿ ಶಾಂತಿ ಮತ್ತು ಭದ್ರತೆ ಸ್ಥಾಪಿಸುವ ಹೆಸರಲ್ಲಿ ಉ.ಕೊರಿಯಾದ ವಿರುದ್ಧವಾಗಿ ಹಲವು ನಿರ್ಣಯಗಳನ್ನು ತೆಗೆದುಕೊಂಡಿದೆ. ಉ.ಕೊರಿಯಾದ ಸಾರ್ವಭೌಮತೆ ಮತ್ತು ಸ್ವಾತಂತ್ರ್ಯಕ್ಕೆ ಭಂಗ ತರುವ ಈ ನಿರ್ಣಯಗಳ ವಿರುದ್ಧ ಹಲವು ಪ್ರಗತಿಪರ ಸಂಘಟನೆಗಳು ವಿಶ್ವಸಂಸ್ಥೆಯ ಸೆಕ್ರೆಟಾ-ರಿಯಟ್‌ಗೆ ಬಹಿರಂಗ ಪತ್ರ ಬರೆದಿವೆ. ಈ ನಿರ್ಣಯಗಳು ವಿಶ್ವಸಂಸ್ಥೆಯ ಸನದು (ಚಾರ್ಟರ್) ಮತ್ತು ಹಲವು ಅಂತರ್ರಾಷ್ಟ್ರೀಯ ಒಪ್ಪಂದಗಳ ಉಲ್ಲಂಘನೆ ಕೂಡಾ ಮಾಡಿವೆ ಎಂದು ಪತ್ರದಲ್ಲಿ ಹೇಳಲಾಗಿದೆ. ಅಖಿಲ ಭಾರತ ಕಿಸಾನ್ ಸಭಾ, ಅಖಿಲ ಭಾರತ ಕೃಷಿಕೂಲಿಕಾರರ ಯೂನಿಯನ್ ಮತ್ತು ಭಾರತ ವಿದ್ಯಾರ್ಥಿ ಫೆಡರೇಶನ್ ಈ ಪತ್ರ ಬರೆದ ಸಾಮೂಹಿಕ ಸಂಘಟನೆಗಳು ಜುಲೈ 23ರಂದು ಅದನ್ನು ಪತ್ರಿಕೆಗಳಿಗೂ ಬಿಡುಗಡೆ ಮಾಡಿವೆ.

ಭದ್ರತಾ ಸಮಿತಿ ನಿರ್ಣಯ ಸಂಖ್ಯೆಗಳಾದ 1718 (2006), 1874 (2009) ಮತ್ತು 2094 (2013) ಇಂತಹ ಉಲ್ಲಂಘನೆ ಮಾಡಿರುವ ನಿರ್ಣಯಗಳು ಎಂದು ಪತ್ರದಲ್ಲಿ ಹೇಳಲಾಗಿದೆ. ಈ ನಿರ್ಣಯಗಳ ಯಾವ ಕಲಮುಗಳು ಉ.ಕೊರಿಯಾದ ಸಾರ್ವಭೌಮತೆ ಮತ್ತು ಸ್ವಾತಂತ್ರ್ಯಗಳಿಗೆ, ಹಾಗೂ ಯಾವ ವಿಶ್ವಸಂಸ್ಥೆಯ ಸನದಿನ ಅಥವಾ ಅಂತರ್ರಾಷ್ಟ್ರೀಯ ಒಪ್ಪಂದದ ಯಾವ ಕಲಮುಗಳನ್ನು ಯಾವ ರೀತಿ ಉಲ್ಲಂಘಿಸುತ್ತವೆ ಎಂದು ಪತ್ರದಲ್ಲಿ ವಿವರವಾಗಿ ತಿಳಿಸಲಾಗಿದೆ. ಕೆಲವು ನಿರ್ಣಯಗಳು ಹೇಗೆ ಉ.ಕೊರಿಯಾದ ವಿರುದ್ಧ ತಾರತಮ್ಯ ತೋರಿವೆ ವಿವರಿಸಲಾಗಿದೆ.

ಈ ವಿವರಗಳ ಹಿನ್ನೆ ಉ.ಕೊರಿಯಾ ಈ ನಿರ್ಣಯ ಪಾಲಿಸುವ ಯಾವುದೇ ಹೊಂದಿರುವುದಿಲ್ಲ. ಆದರೆ ಈ ಪ್ರ ಹಾಗೂ ಅಂತರ್ರಾಷ್ಟ್ರೀಯ ಶಾಂತಿ ಭದ್ರತೆಯ ದೃಷ್ಟಿಯಿಂದ ಈ ನಿರ್ಣ ಬಗ್ಗೆ ಎತ್ತಿ ತೋರಿಸಲಾಗಿರುವ ಅ ಕಾನುನುಬದ್ಧತೆ ಬಗ್ಗೆ ಸೆಕ್ರೆಟಾರಿ ಪ್ರತಿಕ್ರಿಯಿಸಬೇಕು ಎಂದು ಕೊ ಅಲ್ಲದೆ ವಿಶ್ವಸಂಸ್ಥೆಯ ಸನದು ಅಂತರ್ರಾಷ್ಟ್ರೀಯ ಒಪ್ಪಂದಗಳ ಪಾವಿತ್ರ ರಕ್ಷಿಸುವುದೂ ಇದರಿಂದ ಸಾಧ್ಯವಾ ಎಂದು ಪತ್ರ ಹೇಳಿದೆ.

JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **NITHYANANDASWAMI** EMS Bhavana, No.37/A, 8th Cross, Mahalakshmi Layout, BANGALORE-560086 Editor : **NITHYANANDASWAMI**